ಸೋಮವಾರ, ಡಿಸೆಂಬರ್ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 333 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ದುರ್ಬಲ ಜಾತಿಗಳಲ್ಲಿ ಕುಬ್ಜ ಮಕ್ಕಳು ಹೆಚ್ಚು

ಕಾಂಗ್ರೆಸ್ ಜತೆ ಮೈತ್ರಿ ಇಲ್ಲ: ಕೇಜ್ರಿವಾಲ್ 11
ಯತ್ನಾಳ ಹೇಳಿಕೆಯನ್ನು ಬಿಜೆಪಿಯವರು ಖಂಡಿಸಿದ್ದಾರೆಯೇ: ಡಿಕೆಶಿ

'ಕ್ಷಮೆ ಕೇಳಿದ ಮೇಲೆ ಕೇಸು ಯಾಕೆ?' 5
ಬಿಜೆಪಿಯಿಂದ ಬಸವಣ್ಣನ ವ್ಯಕ್ತಿತ್ವಕ್ಕೆ ಮಸಿ 7

ದೆಹಲಿ ಅಂಗಳಕ್ಕೆ ಬಿಜೆಪಿ ಬಣ ಕದನ

ರಾಷ್ಟ್ರ ರಾಜಧಾನಿಗೆ ತೆರಳಿದ ಯತ್ನಾಳ ಬಣ ● ಬಿಎಸ್‌ವೈ ಮನೆಯಲ್ಲಿ ವಿಜಯೇಂದ್ರ ನಿಷ್ಠರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಬಣ ಜಗಳ ದೆಹಲಿ ಅಂಗಳ ತಲುಪಿದೆ. ಇದೇ ಮೊದಲ ಬಾರಿಗೆ ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಬಿ.ಎಸ್.ಯಡಿಯೂರಪ್ಪ ತಮ್ಮ ನಿವಾಸದಲ್ಲಿ ಭಿನ್ನಮತೀಯರ ವಿರುದ್ಧ ಬಹಿರಂಗ ಸಭೆಯನ್ನು ನಡೆಸಿ, ಭಿನ್ನರಿಗೆ ಎಚ್ಚರಿಕೆ ನೀಡಿದರು. ಈ ಮಧ್ಯೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಅವರ ಬಣದ ಸದಸ್ಯರು ಸಂಜೆ ದೆಹಲಿಗೆ ತೆರಳಿದರು.

ಭಾನುವಾರ ಇಡೀ ದಿನ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ವಿಜಯೇಂದ್ರ ನಿಷ್ಠರು ಮತ್ತು ಯತ್ನಾಳ ನಿಷ್ಠರ ಮಧ್ಯೆ ಪರಸ್ಪರ ವಾಕ್ಸಮರ ನಡೆಯಿತು. ತೆರೆಮರೆಯಿಂದ ಎಚ್ಚರಿಕೆ ಸಂದೇಶ ನೀಡುತ್ತಿದ್ದ ವಿಜಯೇಂದ್ರ ಅವರು ಯತ್ನಾಳ ಅವರ ವಿರುದ್ಧ ಮೊದಲ ಬಾರಿಗೆ ನೇರ ಟೀಕಾ ಪ್ರಹಾರ ನಡೆಸಿದರು. 'ಯತ್ನಾಳ ಉಚ್ಚಾಟನೆ ಸಂಬಂಧ ವರಿಷ್ಠರು ತೀರ್ಮಾನಿಸಲಿದ್ದಾರೆ' ಎಂದು ಹೇಳಿದರು.

ಈ ಮಧ್ಯೆ, ಯಾವುದೇ ಬಣದ ಜತೆಗೆ ಗುರುತಿಸಿಕೊಳ್ಳದ ಹಲವು ನಾಯಕರು ಪಕ್ಷದ ಈಗಿನ ಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ, ಬುದ್ಧಿಮಾತಿನ ಹೇಳಿಕೆಗಳನ್ನು ನೀಡಿದರು.

'ತಾವು ಯಾರ ವಿರುದ್ಧವೂ ವರಿಷ್ಠರಿಗೆ ದೂರು ನೀಡಿಲ್ಲ' ಎಂದು ಎರಡೂ ಬಣಗಳ ನಾಯಕರು ಈವರೆಗೆ ಹೇಳಿಕೊಂಡಿದ್ದರು. ಭಾನುವಾರ ಮಾತಿನ ವರಸೆ ಬದಲಾಗಿತ್ತು. ಪರಸ್ಪರ ತೊಡೆ ತಟ್ಟಿ ಪಂಥಾಹ್ವಾನ ನೀಡಿದ್ದರು.

7ನೇ ಪುಟ ನೋಡಿ



ಬಿ.ಎಸ್.ಯಡಿಯೂರಪ್ಪ ಅವರ ಮನೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ 25ಕ್ಕೂ ಹೆಚ್ಚು ನಾಯಕರು ಭಾಗಿಯಾಗಿದ್ದರು

ಸಭೆಯಲ್ಲಿ ನಡೆದಿದ್ದು ಏನು?

- ಒಳಜಗಳ ಕುರಿತು ಇದೇ ಮೊದಲ ಬಾರಿಗೆ ಬಿ.ಎಸ್.ಯಡಿಯೂರಪ್ಪ ಮನೆಯಲ್ಲಿ ಸಭೆ
- ಎಂ.ಪಿ.ರೇಣುಕಾಚಾರ್ಯ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಬಿ.ಸಿ.ಪಾಟೀಲ, ಹರತಾಳ ಹಾಲಪ್ಪ ಸೇರಿ 25 ಮಾಜಿ ಶಾಸಕರು ಮತ್ತು ಶಾಸಕರು ಸಭೆಯಲ್ಲಿ ಭಾಗಿ
- ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯಲ್ಲಿ ವಿಜಯೇಂದ್ರ ಅವರನ್ನು ಮುಂದುವರಿಸುವಂತೆ ಮನವಿ
- ಯತ್ನಾಳ ಮತ್ತವರ ಬಣದ ನಾಯಕರ ವಿರುದ್ಧ ಶಿಸ್ತುಕ್ರಮಕ್ಕೆ ಆಗ್ರಹ

ವಿಜಯೇಂದ್ರ ಬಣ

ನಾನು ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದೇನೆ ಎಂಬುದಕ್ಕೆ ದಾಖಲೆಗಳು ಇವೆ ಎಂದಿದ್ದಾರೆ. ಅವು ಇದ್ದದ್ದೇ ಆದರೆ ತಕ್ಷಣವೇ ಬಹಿರಂಗಪಡಿಸಲಿ
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಯತ್ನಾಳ ಹಿಂದೆ ಇರುವ ಶಕ್ತಿ ಯಾವುದು? ಅವರಿಗೆ ವರಿಷ್ಠರ ಬೆಂಬಲ ಇಲ್ಲ. ಅವರ ಹಿಂದೆ ಇರುವುದು ನಾಲ್ಕಾರು ಜನ ಮಾತ್ರ. ಇದೇ 10ರಂದು ದಾವಣಗೆರೆಯಲ್ಲಿ 60ಕ್ಕೂ ಹೆಚ್ಚು ಶಾಸಕರು ಸೇರುತ್ತೇವೆ. ಯತ್ನಾಳರ ಉಚ್ಚಾಟನೆಯ ತೀರ್ಮಾನ ಮಾಡುತ್ತೇವೆ
ಎಂ.ಪಿ.ರೇಣುಕಾಚಾರ್ಯ
ಬಿಜೆಪಿ ಮುಖಂಡ

ಸ್ವಪಕ್ಷೀಯರ ವಿರುದ್ಧವೇ ಮಾತನಾಡುತ್ತಿರುವ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ವಿಷಯದಿಂದ ನಾವು ಹಿಂದೆ ಸರಿದಿಲ್ಲ
ಬಿ.ಸಿ.ಪಾಟೀಲ
ಬಿಜೆಪಿ ಮುಖಂಡ

ಯತ್ನಾಳ ಬಣ

ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ರಾಜಕಾರಣ ಮಾಡಿಕೊಳ್ಳಲು ನಿಮ್ಮನ್ನು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷನಾಗಿ ಮಾಡಿಲ್ಲ. ಈ ಬಗ್ಗೆ ಹುಷಾರಾಗಿರಿ
ಅರವಿಂದ ಲಿಂಬಾವಳಿ
ಬಿಜೆಪಿ ಮುಖಂಡ

ರಮೇಶ ಜಾರಕಿಹೊಳಿ ಆಪರೇಷನ್ ಮಾಡಿದ್ದರಿಂದ ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಈಗ ನಮ್ಮನ್ನು ಆಪರೇಷನ್ ಮಾಡುತ್ತಾರಂತೆ. ಇಡೀ ರಾಜ್ಯದಲ್ಲಿ ಆಪರೇಷನ್ ಮಾಡುವಲ್ಲಿ ನಾವು ಟಾಪ್‌ಮೋಸ್ಟ್ ಡಾಕ್ಟರ್‌ಗಳಿದ್ದೇವೆ. ನಿಮ್ಮ ನರನಾಡಿಗಳನ್ನೇ ಕಟ್ ಮಾಡುತ್ತೇವೆ
ಬಸನಗೌಡ ಪಾಟೀಲ ಯತ್ನಾಳ
ಬಿಜೆಪಿ ಶಾಸಕ

ವಕ್ಫ್ ಹೋರಾಟದ ಕೊನೆಗೆ ದಾವಣಗೆರೆಯಲ್ಲಿ ಸಮಾವೇಶ ನಡೆಸಿ, 10 ಲಕ್ಷ ಜನರನ್ನು ಸೇರಿಸುತ್ತೇವೆ
ರಮೇಶ ಜಾರಕಿಹೊಳಿ
ಬಿಜೆಪಿ ಶಾಸಕ

ಜನಸಂಖ್ಯೆ ಬೆಳವಣಿಗೆ ದರ ಕುಸಿಯಬಾರದು: ಭಾಗವತ್

'ದಂಪತಿಗೆ 3 ಮಕ್ಕಳು ಇರಲಿ'

ಪ್ರಜಾವಾಣಿ ವಾರ್ತೆ/ ಪಿಟಿಐ



ಮುಂಬೈ: 'ಭಾರತೀಯ ಸಮಾಜ ಉಳಿಯಬೇಕಾದರೆ ಪ್ರತಿ ದಂಪತಿ ಕನಿಷ್ಠ ಮೂವರು ಮಕ್ಕಳನ್ನು ಹೊಂದಬೇಕು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಕರೆ ನೀಡಿದ್ದಾರೆ.

ನಾಗ್ಪುರದಲ್ಲಿ ನಡೆದ 'ಕಥಲೆ ಕುಲ್ (ಕುಲ) ಸಮ್ಮೇಳನ'ದಲ್ಲಿ ಭಾನುವಾರ ಮಾತನಾಡಿದ ಅವರು ಜನಸಂಖ್ಯಾ ಬೆಳವಣಿಗೆ ದರ ಕುಸಿಯುತ್ತಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ತಮ್ಮ ಹೇಳಿಕೆಗೆ ಪೂರಕವಾಗಿ ಭಾಗವತ್ ಅವರು ಜನಸಂಖ್ಯಾ ಶಾಸ್ತ್ರೀಯ ಅಧ್ಯಯನವನ್ನು ಉಲ್ಲೇಖಿಸಿದ್ದಾರೆ. 'ಭಾರತದ ಒಟ್ಟು ಫಲವತ್ತತೆ ದರ (ಟಿಎಫ್‌ಆರ್) ಅಂದರೆ, ಮಹಿಳೆ ತನ್ನ ಜೀವಿತಾವಧಿಯಲ್ಲಿ ಜನ್ಮ ನೀಡುವ ಮಕ್ಕಳ ಸರಾಸರಿ ಸಂಖ್ಯೆ ಕನಿಷ್ಠ 3 ಆಗಿರಬೇಕು. ಜನಸಂಖ್ಯಾಶಾಸ್ತ್ರವು ಇದನ್ನೇ ಪ್ರತಿಪಾದಿಸುತ್ತದೆ. ಈ ಸಂಖ್ಯೆಯು ಮುಖ್ಯವಾಗಿದೆ. ಏಕೆಂದರೆ ಸಮಾಜ ಉಳಿಯಬೇಕು. ಪ್ರತಿ ಕುಟುಂಬವು ಸಮಾಜದ ಒಂದು ಘಟಕವಾಗಿದೆ' ಎಂದು ಅವರು ಕುಟುಂಬದ ಮಹತ್ವವನ್ನು ಹೇಳಿದರು.

'ಜನಸಂಖ್ಯಾಶಾಸ್ತ್ರೀಯ ಅಧ್ಯಯನಗಳ ಪ್ರಕಾರ, ಒಂದು ಸಮುದಾಯದ ಜನಸಂಖ್ಯೆಯು 2.1ರ ಫಲವತ್ತತೆ ದರಕ್ಕಿಂತ ಕಡಿಮೆಯಾದಾಗ, ಆ ಸಮಾಜವು ಅಳಿವಿನಂಚಿನಲ್ಲಿದೆ ಎಂದರ್ಥ' ಎಂದರು

5ನೇ ಪುಟ ನೋಡಿ

'ಆರ್‌ಎಸ್‌ಎಸ್‌ನವರು ಈಗ ಮದುವೆಯಾಗಿ'

ಭಾಗವತ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಎಐಎಂಐಎಂ ಮುಖ್ಯಸ್ಥ ಮತ್ತು ಹೈದರಾಬಾದ್ ಸಂಸದ ಅಸಾದುದ್ದೀನ್ ಒವೈಸಿ, 'ಹೆಚ್ಚು ಮಕ್ಕಳನ್ನು ಹುಟ್ಟಿಸುವಂತೆ ಮೋಹನ್ ಭಾಗವತ್ ಹೇಳುತ್ತಿದ್ದಾರೆ. ಈಗ ಆರ್‌ಎಸ್‌ಎಸ್‌ನಲ್ಲಿರುವವರು ಮದುವೆಯಾಗಲು ಶುರುಮಾಡಬೇಕಾಗಿದೆ' ಎಂದು ವ್ಯಂಗ್ಯವಾಡಿದ್ದಾರೆ.

'ನನ್ನ ನೇತೃತ್ವದಲ್ಲೇ ಹಾಸನ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನದಲ್ಲಿ ಡಿ. 5ರಂದು ನಡೆಯಲಿರುವ ಸಮಾವೇಶದ ಸಂಪೂರ್ಣ ಜವಾಬ್ದಾರಿಯನ್ನು ನನ್ನ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ವಹಿಸಿಕೊಳ್ಳಲಿದೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.



ಶಿವಕುಮಾರ್

ಸಮಾವೇಶದ ಪೂರ್ವಭಾವಿಯಾಗಿ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಮೈಸೂರು ಭಾಗದ ಮುಖಂಡರ ಸಭೆ ಭಾನುವಾರ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಾನತೆ, ಸಂವಿಧಾನದ ಬಗ್ಗೆ ಗೌರವ ಹೊಂದಿರುವವರು ಹಾಗೂ ಸ್ವಾಭಿಮಾನಿಗಳಿಗೆ ಈ ಸಮಾವೇಶದಲ್ಲಿ ಭಾಗವಹಿಸುವಂತೆ ಮನವಿ ಮಾಡುತ್ತೇನೆ. ನಾನು ಮತ್ತು ಕೆಪಿಸಿಸಿ ತಂಡದ ಸದಸ್ಯರು ಸಮಾವೇಶ ನಡೆಯುವ ಸ್ಥಳಕ್ಕೆ ಸದ್ಯದಲ್ಲಿ ಭೇಟಿ ನೀಡಿ ಸಿದ್ಧತೆಯನ್ನು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುತ್ತೇವೆ' ಎಂದು ಹೇಳಿದರು.

> **ಅನೇಕ ಸಂಘಟನೆಗಳು, ಸಮುದಾಯಗಳು ಬೆಂಬಲ ಸೂಚಿಸಿವೆ. ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಸಿದ್ಧತೆಯಲ್ಲಿ ತೊಡಗಿದ್ದಾರೆ**
> **ಡಿ.ಕೆ. ಶಿವಕುಮಾರ್**, ಅಧ್ಯಕ್ಷ, ಕೆಪಿಸಿಸಿ

7ನೇ ಪುಟ ನೋಡಿ

ಪುದುಚೇರಿ ಮತ್ತು ತಮಿಳುನಾಡಿನಲ್ಲಿ ಮುಂದುವರಿದ ಅಬ್ಬರ

'ಫೆಂಜಲ್' ಚಂಡಮಾರುತ: 8 ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ಪುದುಚೇರಿ ಹಾಗೂ ತಮಿಳುನಾಡಿನ ಕರಾವಳಿ ಭಾಗದ ಕೆಲವು ಜಿಲ್ಲೆಗಳಲ್ಲಿ 'ಫೆಂಜಲ್' ಚಂಡಮಾರುತವು ಸುಮಾರು ಆರು ತಾಸು ತನ್ನ ಪ್ರಭಾವ ಬೀರಿತ್ತು. ಪರಿಣಾಮ ತಮಿಳುನಾಡಿನ ವಿಲುಪ್ಪುರಂ ಜಿಲ್ಲೆಯಲ್ಲಿ 50 ಸೆಂ.ಮೀ ಹಾಗೂ ಪುದುಚೇರಿಯಲ್ಲಿ 48 ಸೆಂ.ಮೀನಷ್ಟು ಮಳೆ ಸುರಿದಿದೆ.

ಚಂಡಮಾರುತದ ಕಾರಣದಿಂದಾಗಿ ಪುದುಚೇರಿ, ತಮಿಳುನಾಡಿನಲ್ಲಿ ತಲಾ ನಾಲ್ವರು ಮೃತಪಟ್ಟಿದ್ದಾರೆ.

ತಮಿಳುನಾಡು ಮತ್ತು ಪುದುಚೇರಿಯ ಹಲವು ಗ್ರಾಮಗಳು, ನಗರಗಳು ಭಾನುವಾರ ಇಡೀ ದಿನ ದ್ವೀಪಗಳಂತಾಗಿದ್ದವು. ಚೆನ್ನೈನಲ್ಲಿ ಜನಜೀವನವು ಯಥಾಸ್ಥಿತಿಗೆ ನಿಧಾನಗತಿಯಲ್ಲಿ ಮರಳುತ್ತಿದೆ. ವಿಮಾನ ಹಾರಾಟ ಹಾಗೂ ರೈಲುಗಳ ಓಡಾಡಲು ಪುನಃ ಆರಂಭಗೊಂಡಿವೆ. ಆದರೂ ಕೆಲವು ವಿಮಾನಗಳ ಹಾರಾಟ ವಿಳಂಬವಾಯಿತು ಅಥವಾ ರದ್ದಾಯಿತು.

ವಿಲುಪ್ಪುರಂ ಮತ್ತು ಚೆಂಗಲ್‌ಪಟ್ಟು ಜಿಲ್ಲೆಗಳಲ್ಲಿ ಹಿಂದೆಂದೂ ಇಷ್ಟು ಮಳೆ ಸುರಿದಿರಲಿಲ್ಲ. 'ನಮ್ಮ ಜೀವಮಾನದಲ್ಲಿಯೇ ಇಲ್ಲಿ ಇಷ್ಟೊಂದು ಮಳೆಯಾಗಿರುವುದನ್ನು ನಾವು ನೋಡಿಲ್ಲ' ಎನ್ನುತ್ತಾರೆ ಚೆಂಗಲ್‌ಪಟ್ಟು ನಿವಾಸಿಗಳು.


ನಿರಂತರ ಮಳೆ ಸುರಿಯುತ್ತಿದ್ದ ಕಾರಣ ರಕ್ಷಣಾ ಕಾರ್ಯದಲ್ಲಿ ಅಡಚಣೆ ಉಂಟಾಗಿದೆ.

7ನೇ ಪುಟ ನೋಡಿ



ಪುದುಚೇರಿಯಲ್ಲಿ ರಕ್ಷಣಾ ಪಡೆಯ ಸಿಬ್ಬಂದಿ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಭಾನುವಾರ ಸ್ಥಳಾಂತರಿಸಿದರು

—ಪಿಟಿಐ ಚಿತ್ರ



> **ಚಂಡಮಾರುತದ ಸ್ವರೂಪ ಮತ್ತು ಹಾದಿಯನ್ನು ಅಂದಾಜಿಸುವುದು ಅತ್ಯಂತ ಕಷ್ಟವಾಗಿತ್ತು. ಹೀಗಾಗಿ ಹವಾಮಾನ ಇಲಾಖೆಯು ತನ್ನ ಮುನ್ಸೂಚನೆಯನ್ನು ಪದೇ-ಪದೇ ಬದಲಿಸಿತು**
> **ರಕ್ಷಣಾ ಸಿಬ್ಬಂದಿ**

522 ಮೀ.ಗೆ ಮಾತ್ರ ನೀರು ನಿಲ್ಲಿಸುವ ಹುನ್ನಾರ 5

ವಾಣಿಜ್ಯ ಸಿಲಿಂಡರ್ ದರ ಏರಿಕೆ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಐಟಿಐ: 62 ಅಧಿಕಾರಿಗಳಿಗೆ ಹಿಂಬಡ್ತಿ

● ರಾಜೇಶ್ ರೈ ಚಟ್ಲ

ಬೆಂಗಳೂರು: ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ (ಐಟಿಐ) ಕಿರಿಯ ತರಬೇತಿ ಅಧಿಕಾರಿ (ಜೆಟಿಒ) ಹುದ್ದೆಯಿಂದ ನೇರವಾಗಿ ಪ್ರಾಂಶುಪಾಲ (ಸಹಾಯಕ ನಿರ್ದೇಶಕ) ಹುದ್ದೆಗೆ ಮುಂಬಡ್ತಿ ಪಡೆದಿದ್ದ 62 ಅಧಿಕಾರಿಗಳಿಗೆ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಿಂಬಡ್ತಿ ನೀಡಿದೆ.

ಹಿಂಬಡ್ತಿ ಪಡೆದವರ ಪೈಕಿ, 22 ಅಧಿಕಾರಿಗಳು (ಇಬ್ಬರು ಸ್ವಯಂ ನಿವೃತ್ತಿ) ಈಗಾಗಲೇ ನಿವೃತ್ತರಾಗಿದ್ದಾರೆ. ಐವರು ಮೃತಪಟ್ಟಿದ್ದಾರೆ. ಒಬ್ಬರು ಕರ್ತವ್ಯದಿಂದ ಬಿಡುಗಡೆಗೊಂಡಿದ್ದು, ಉಳಿದ 34 ಅಧಿಕಾರಿಗಳು ಕರ್ತವ್ಯದಲ್ಲಿದ್ದಾರೆ.

ಮುಂಬಡ್ತಿ ನೀಡಿರುವುದು ನಿಯಮ ಬಾಹಿರವೆಂದು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ), ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದು 10 ತಿಂಗಳು ಕಳೆದ ಬಳಿಕ ಇಲಾಖೆ ಈ ಕ್ರಮ ತೆಗೆದುಕೊಂಡಿದೆ. ತೀರ್ಪು ಜಾರಿ ಆಗಿಲ್ಲವೆಂದು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ನಡೆಯುತ್ತಿರುವ ಮಧ್ಯೆ, ನ. 28ರಂದು ಇಲಾಖೆಯು ಹಿಂಬಡ್ತಿ ಆದೇಶವನ್ನು ಹೊರಡಿಸಿದೆ. ಆದರೆ, ಮುಂಬಡ್ತಿಯಿಂದ ವಂಚಿತರಾಗಿದ್ದ ಅರ್ಹರಿಗೆ ಪದೋನ್ನತಿ ನೀಡಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಏನಿದು ಪ್ರಕರಣ: 1985ರ ವೃಂದ ಮತ್ತು ನೇಮಕಾತಿ ನಿಯಮವನ್ನು 1998ರಲ್ಲಿ ತಿದ್ದುಪಡಿ ಮಾಡಿದ್ದ ಇಲಾಖೆ, ಪ್ರಾಂಶುಪಾಲ ದರ್ಜೆ-2ರ (ಸಹಾಯಕ ನಿರ್ದೇಶಕ-ತರಬೇತಿ) ಹುದ್ದೆಗಳಿಗೆ ಮುಂಬಡ್ತಿ ನೀಡುವಾಗ, ಬಿ.ಇ ಎಂಜಿನಿಯರಿಂಗ್ ಪದವಿ ಪಡೆದ ಕಿರಿಯ ತರಬೇತಿ ಅಧಿಕಾರಿಗಳಿಗೆ ಶೇ 33ರಷ್ಟು ಕೋಟಾ ನಿಗದಿಪಡಿಸಿತ್ತು.

7ನೇ ಪುಟ ನೋಡಿ

26 ವರ್ಷಗಳ ಹಿಂದಿನ ಪ್ರಕರಣ

ಈ ಮುಂಬಡ್ತಿ ಪ್ರಕರಣವು 1998ರಲ್ಲಿ (26 ವರ್ಷಗಳ ಹಿಂದೆ) ಕೆಎಟಿ ಮೆಟ್ಟಿಲೇರಿದ್ದು, 2008ರಲ್ಲಿಯೇ ಆದೇಶ ನೀಡಿತ್ತು. ಅಲ್ಲಿಂದ ಇಲ್ಲಿಯವರೆಗೆ ಇಲಾಖೆಯಲ್ಲಿ (16 ವರ್ಷಗಳಿಂದ) ಮುಂಬಡ್ತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಹೀಗಾಗಿ, ನ್ಯಾಯಯುತವಾಗಿ ಬರಬೇಕಿದ್ದ ಬಡ್ತಿಯಿಂದ ವಂಚಿತರಾದ ಹಲವರು 16 ವರ್ಷ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ.

ನಿಯಮಬಾಹಿರವಾಗಿ ನೀಡಿದ್ದ ಬಡ್ತಿಯನ್ನು ಹಿಂಪಡೆದು ಅರ್ಹರಿಗೆ ಬಡ್ತಿ ನೀಡುವಂತೆ ಕೋರ್ಟ್‌ಗಳು ತೀರ್ಪು ನೀಡಿದ್ದರೂ ಇಲಾಖೆ ಕ್ರಮ ತೆಗೆದುಕೊಳ್ಳದ ಕಾರಣ, ಕೆಎಟಿಯಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಲ್ಲಿಕೆ ಆಗಿತ್ತು. ಇದೇ ಅ. 25ರ ಒಳಗೆ ತೀರ್ಪು ಪಾಲನೆ ಮಾಡುವಂತೆ ಸೆ. 21ರಂದು ಕೆಎಟಿ ಆದೇಶಿಸಿತ್ತು.


ತುಮಕೂರು ಜಿಲ್ಲೆಗೆ 1500 ಕೋಟಿ ಯೋಜನೆಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ
ಉದ್ಘಾಟನೆ ಶಂಕುಸ್ಥಾಪನೆ
ಹಾಗೂ 1 ಲಕ್ಷ 46 ಸಾವಿರ ಫಲಾನುಭವಿಗಳಿಗೆ
ವಿವಿಧ ಸವಲತ್ತುಗಳ ವಿತರಣಾ ಸಮಾರಂಭಕ್ಕೆ
ಆಗಮಿಸುತ್ತಿರುವ
ಮಾನ್ಯ ಮುಖ್ಯಮಂತ್ರಿ
ಸಿದ್ದರಾಮಯ್ಯರವರಿಗೆ
ಮಾನ್ಯ ಉಪಮುಖ್ಯಮಂತ್ರಿ
ಡಿ.ಕೆ.ಶಿವಕುಮಾರ್‌ರವರಿಗೆ
ಹಾಗೂ ತುಮಕೂರು ಜಿಲ್ಲೆಯ ಅಭಿವೃದ್ಧಿ ಹರಿಕಾರರು ಗೃಹ ಸಚಿವರಾದ
ಮಾನ್ಯ ಡಾ: ಜಿ.ಪರಮೇಶ್ವರ್‌ರವರಿಗೆ
ಸರ್ವರಿಗೂ ಸುಸ್ವಾಗತ
ಶ್ರೀ ಸುನೀಲ್ ಪ್ರಕಾಶ್
ಪ್ರಧಾನ ಕಾರ್ಯದರ್ಶಿ, ಬೆಂ.ದ.ಜಿ.ಕಾಂಗ್ರೆಸ್ ಸಮಿತಿ
ಶ್ರೀ ಬಿ.ವಿ.ಜಯರಾಮು
ಕಾಂಗ್ರೆಸ್ ಮುಖಂಡರು

ಒಂದು ವರ್ಷದಲ್ಲಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲಿದೆ ಮುಜರಾಯಿ ಇಲಾಖೆ

ಧಾರ್ಮಿಕ ದತ್ತಿಗೆ ನಿರ್ಮಾಣವಾಗಲಿದೆ ಸೌಧ

● ಬಾಲಕೃಷ್ಣ ಪಿ.ಎಚ್.



ನಗರದಲ್ಲಿ ನಿರ್ಮಾಣಗೊಳ್ಳಲಿರುವ 'ಧಾರ್ಮಿಕ ಸೌಧ'ದ ಮಾದರಿ

ಬೆಂಗಳೂರು: ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ (ಮುಜರಾಯಿ) ಕಚೇರಿಗಳನ್ನು ಬಾಡಿಗೆ ಕಟ್ಟಡದಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲು ಪ್ರಕ್ರಿಯೆ ಆರಂಭವಾಗಿದೆ. ಅದಕ್ಕಾಗಿ ಕೆ.ಆರ್. ಸರ್ಕಲ್ ಬಳಿ ಇರುವ ರಾಮಾಂಜನೇಯ ಸ್ವಾಮಿ ದೇವಸ್ಥಾನದ ಹಿಂಭಾಗ 'ಧಾರ್ಮಿಕ ಸೌಧ' ನಿರ್ಮಿಸಲು ನಿರ್ಧರಿಸಿದೆ.

ಮುಜರಾಯಿ ಇಲಾಖೆಗೆ ಸೇರಿದ ರಾಮಾಂಜನೇಯ ದೇವಸ್ಥಾನವು ವಿಧಾನಸೌಧ-ಕೆ.ಆರ್. ಸರ್ಕಲ್ ಮಧ್ಯೆ ಇರುವ ಬಹುಮಹಡಿ ಕಟ್ಟಡದ ಎದುರುಗಡೆ ಇದೆ. ಒಟ್ಟು 26 ಗುಂಟೆ ಜಮೀನು ಇದ್ದು, 6 ಗುಂಟೆಯಲ್ಲಿ ದೇವಸ್ಥಾನವಿದೆ. ಉಳಿದ 20 ಗುಂಟೆ ಜಮೀನಿನಲ್ಲಿ ₹10 ಕೋಟಿ ವೆಚ್ಚದಲ್ಲಿ 'ಧಾರ್ಮಿಕ ಸೌಧ' ನಿರ್ಮಿಸಲು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಹೊಯ್ಸಳ ಶೈಲಿಯಲ್ಲಿ ನಾಲ್ಕು ಅಂತಸ್ತಿನ ಸೌಧ ನಿರ್ಮಾಣದ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ನೆಲಮಹಡಿಯಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಇರಲಿದೆ. ಮೊದಲನೆಯ ಮಹಡಿಯಲ್ಲಿ ನ್ಯಾಯಾಲಯ ಸಭಾಂಗಣ, ಆಯುಕ್ತರ ಕಚೇರಿ, ಸರ್ವೆ ಇಲಾಖೆ, ಇಲಾಖೆಯ ಕೇಂದ್ರ ಸ್ಥಾನ ಸಹಾಯಕರ ಕಚೇರಿಗಳು ಇರಲಿವೆ.

ಎರಡನೇ ಮಹಡಿಯಲ್ಲಿ ಆಗಮ ಅಧಿಕಾರಿ ವಿಭಾಗ, ಐಟಿ ವಿಭಾಗ, ಎಂಜಿನಿಯರಿಂಗ್ ವಿಭಾಗ, ಮೀಟಿಂಗ್ ಹಾಲ್, ಕೇಂದ್ರ ಸ್ಥಾನ ಸಹಾಯಕ-1ರ ಕಚೇರಿಗಳು ನಿರ್ಮಾಣಗೊಳ್ಳಲಿವೆ. ಮೂರನೇ ಮಹಡಿಯಲ್ಲಿ ತೆರೆದ ಕಚೇರಿ ಸಭಾಂಗಣ, ಅಧೀಕ್ಷಕರ ಕಚೇರಿಗಳು, ಡಿಜಿಟಲ್ ಗ್ರಂಥಾಲಯ, ದಾಖಲೆಗಳ ಕೊಠಡಿ ನಿರ್ಮಿಸಲಾಗುತ್ತದೆ. ನಾಲ್ಕನೇ ಮಹಡಿಯಲ್ಲಿ ಆಡಿಟೋರಿಯಂ ಇರಲಿದೆ.

ರಾಮಾಂಜನೇಯ ದೇವಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಅರ್ಚಕರಿಗೆ ಎರಡು ಬೆಡ್ ರೂಂಗಳ ಮನೆಗಳನ್ನು ಕೂಡ ಪಕ್ಕದಲ್ಲಿಯೇ ನಿರ್ಮಿಸಲಾಗುವುದು. ದೇವಸ್ಥಾನದ ಮುಂದೆ ಇರುವ ಯಾಗಶಾಲೆ, ಪಾಕಶಾಲೆಗಳನ್ನು ಮಾಡಲಾಗುವುದು. ಕಾಮಗಾರಿಗಳ ನವೀಕರಣ ದೇವಸ್ಥಾನದ ವೆಚ್ಚವನ್ನೂ ಮುಜರಾಯಿ ಇಲಾಖೆಯೇ ಭರಿಸಲಿದೆ ಎಂದು ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಒಂದು ವರ್ಷದಲ್ಲಿ ಪೂರ್ಣ'



ರಾಮಲಿಂಗಾರೆಡ್ಡಿ

'ಧಾರ್ಮಿಕ ಸೌಧಕ್ಕೆ ಸಂಬಂಧಿಸಿದಂತೆ ನೀಲ ನಕ್ಷೆ ಸಿದ್ಧವಾಗಿದೆ. ಲೋಕೋಪಯೋಗಿ ಇಲಾಖೆ ಕಟ್ಟಡ ನಿರ್ಮಿಸಲಿದೆ. ಶೀಘ್ರದಲ್ಲಿಯೇ ನಿರ್ಮಾಣ ಕಾರ್ಯ ಆರಂಭವಾಗಲಿದ್ದು, ಒಂದು ವರ್ಷದ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸ್ವಾತಂತ್ರ್ಯ ಬಂದ ಬಳಿಕ ವಿವಿಧ ಕಾಯ್ದೆಯಡಿ ಮುಜರಾಯಿ ಸಂಸ್ಥೆಗಳು ಮತ್ತು ದೇವಸ್ಥಾನಗಳು ಕಾರ್ಯನಿರ್ವಹಿಸುತ್ತಾ ಬಂದಿದ್ದು, 1997ರಲ್ಲಿ ಏಕರೂಪ ಮತ್ತು ಸಮರ್ಪಕ ನಿರ್ವಹಣೆಗಾಗಿ ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿ ಕಾಯ್ದೆ ರೂಪಿಸಲಾಯಿತು. ಮುಜರಾಯಿ ಇಲಾಖೆಗೆ ಸಂಬಂಧಿಸಿದ ನೂರಾರು ಎಕರೆ ಜಮೀನು ರಾಜ್ಯದಲ್ಲಿಯೂ, ಬೆಂಗಳೂರಿನಲ್ಲಿಯೂ ಇದ್ದರೂ ಸ್ವಂತ ಕಟ್ಟಡ ಇರಲಿಲ್ಲ. ಮಿಂಟೋ ಆಸ್ಪತ್ರೆಯ ಎದುರುಗಡೆಯ ಕಟ್ಟಡದಲ್ಲಿ ಬಾಡಿಗೆ ಆಧಾರದಲ್ಲಿ ಕಚೇರಿ ಇತ್ತು. ತಿಂಗಳಿಗೆ ಸುಮಾರು ₹11 ಲಕ್ಷ ಬಾಡಿಗೆ ನೀಡಲಾಗುತ್ತಿತ್ತು ಎಂದು ಮಾಹಿತಿ ನೀಡಿದರು.

'ಸೌಧ ನಿರ್ಮಾಣಕ್ಕೆ ಬೇರೆ ಅನುದಾನಗಳನ್ನು ಬಳಸುತ್ತಿಲ್ಲ. ನಮ್ಮದೇ (ಮುಜರಾಯಿ) ಇಲಾಖೆಯಲ್ಲಿರುವ ಸಾಮಾನ್ಯ ಸಂಗ್ರಹ ನಿಧಿಯಲ್ಲಿನ ಮೊತ್ತವನ್ನು ಬಳಸಿಕೊಂಡು ಸೌಧ ನಿರ್ಮಿಸಲಾಗುತ್ತಿದೆ' ಎಂದು ತಿಳಿಸಿದರು.

ಮುಜರಾಯಿ ಅಡಿಯಲ್ಲಿರುವ ಸಂಸ್ಥೆಗಳು

- ಮೈಸೂರು ಮಹಾರಾಜ ಸಂಸ್ಕೃತ ಕಾಲೇಜು, ಆಗಮ ವಿಭಾಗ ಮತ್ತು ಮೇಲುಕೋಟೆ ಸರ್ಕಾರಿ ಸಂಸ್ಕೃತ ಕಾಲೇಜು ಹಾಗೂ ಆಂಧ್ರಪ್ರದೇಶದ ತಿರುಮಲ, ಮಂತ್ರಾಲಯ, ಶ್ರೀಶೈಲ, ಮಹಾರಾಷ್ಟ್ರದ ತುಳಜಾಪುರ ಮತ್ತು ಉತ್ತರ ಪ್ರದೇಶದ ವಾರಾಣಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳು
- ₹25 ಲಕ್ಷಕ್ಕಿಂತ ಅಧಿಕ ವರಮಾನ ಇರುವ 'ಎ' ವರ್ಗದ 205 ದೇವಸ್ಥಾನಗಳು
- ₹5 ಲಕ್ಷದಿಂದ ₹ 25 ಲಕ್ಷ ವರಮಾನ ಇರುವ 'ಬಿ' ವರ್ಗದ 193 ದೇವಸ್ಥಾನಗಳು
- ₹5 ಲಕ್ಷಕ್ಕಿಂತ ಕಡಿಮೆ ವರಮಾನ ಇರುವ 'ಸಿ' ವರ್ಗದ 34,166 ದೇವಸ್ಥಾನಗಳು

'ಪಕ್ಷಗಳಿಗೆ ಜನಕಲ್ಯಾಣ ಬೇಕಿಲ್ಲ'

ಪ್ರಜಾವಾಣಿ ವಾರ್ತೆ



ಸಿಪಿಎಂ ಸಮ್ಮೇಳನಕ್ಕೆ ಆಗಮಿಸಿದ ಸಿಪಿಎಂ ಕೇಂದ್ರ ಸಮಿತಿ ಸದಸ್ಯೆ ಶೈಲಜಾ ಟೀಚರ್ ಅವರನ್ನು ಕಾರ್ಯಕರ್ತರು ಸ್ವಾಗತಿಸಿದರು

ಬೊಮ್ಮನಹಳ್ಳಿ: 'ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾಗಿರುವ ಭಾರತದಲ್ಲಿ ಈಗಲೂ ಒಂದು ಹೊತ್ತಿನ ಊಟಕ್ಕಾಗಿ ಪರದಾಡಬೇಕಾದ ಸ್ಥಿತಿ ಇದೆ ಎಂದು ಕೇರಳದ ಮಾಜಿ ಆರೋಗ್ಯ ಸಚಿವೆ ಕೆ.ಕೆ. ಶೈಲಜಾ ಟೀಚರ್ ಹೇಳಿದರು.

ಭಾನುವಾರ ಬೇಗೂರಿನಲ್ಲಿ ಸಿಪಿಎಂ ಬೆಂಗಳೂರು ದಕ್ಷಿಣ ಜಿಲ್ಲೆಯ 24ನೇ ಸಮ್ಮೇಳನದ ಅಂಗವಾಗಿ ಆಯೋಜಿಸಿದ್ದ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಭಾರತದಲ್ಲಿ ದೀರ್ಘಕಾಲ ಕಾಂಗ್ರೆಸ್ ಆಡಳಿತ ನಡೆಸಿದೆ, ಈಗ ಬಿಜೆಪಿ ಆಡಳಿತ ನಡೆಸುತ್ತಿದೆ. ಆದರೆ ಜನರ ಸಮಸ್ಯೆಗಳನ್ನು ಬಗೆ ಹರಿಸುವುದು, ಜನ ಕಲ್ಯಾಣ ಸಾಧಿಸುವುದು ಬೇಕಾಗಿಲ್ಲ. ಅಧಿಕಾರ ರಾಜಕಾರಣವಷ್ಟೇ ಬೇಕಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್- ಬಿಜೆಪಿ ಪಕ್ಷಗಳ ನಿಲುವಿನಿಂದ ರೋಸಿ ಹೋಗಿರುವ ಜನರು ರಾಜಕೀಯದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳು ಒಂದೇ ಎಂದು ಬಹಳಷ್ಟು ಜನ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಈ ಭೂಮಿಯ ಮೇಲೆ ಎಲ್ಲವೂ ಒಂದೇ ಆಗಿಲ್ಲ. ಸಾಕಷ್ಟು ಭಿನ್ನ, ವೈಶಿಷ್ಟ್ಯ ಹೊಂದಿವೆ. ಅದೇ ರೀತಿಯ ರಾಜಕೀಯ ಪಕ್ಷಗಳಲ್ಲೆವೂ ಒಂದೇ ಆಗಿಲ್ಲ, ಎಡಪಕ್ಷಗಳು ಜನಪರ ಯೋಜನೆಗಳನ್ನು ರೂಪಿಸಿ ಶಿಕ್ಷಣ, ಆರೋಗ್ಯ, ಉದ್ಯೋಗ ಇತ್ಯಾದಿ ಮೂಲಸೌಲಭ್ಯಗಳನ್ನು ನೀಡಿ ಸಮಾನ ಬದುಕು ರೂಪಿಸುವ ಯೋಜನೆಗಳನ್ನು ಜಾರಿ ಮಾಡುತ್ತಿವೆ, ಈ ಮೂಲಕ ಪರ್ಯಾಯ ರಾಜಕೀಯ, ಆರ್ಥಿಕ ಕಣ್ಣೋಟ ಹೊಂದಿರುವುದಕ್ಕೆ ಸಾಕ್ಷಿ' ಎಂದರು.

ಭೂಮ್ತಾಯಿ ಬಳಗದವರು ಹೋರಾಟದ ಹಾಡುಗಳನ್ನು ಹಾಡಿದರು. ಮಕ್ಕಳು ಭರತನಾಟ್ಯ ಪ್ರದರ್ಶಿಸಿದರು.

ಸಿದ್ಧಾಂತ ಭಿನ್ನವಾದರೂ ಜನರ ಏಳಿಗೆಯೇ ಗುರಿಯಾಗಿರಬೇಕು: ಶೈಲಜಾ ಟೀಚರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತತ್ವ, ಸಿದ್ಧಾಂತಗಳು ಭಿನ್ನವಾದರೂ ಗುರಿ ಮಾತ್ರ ಒಂದೇ ಇರಬೇಕು. ಶೋಷಣೆ, ಹತ್ಯೆಗಳಿಲ್ಲದ ಸುರಕ್ಷಿತ ಸಮಾಜ ನಿರ್ಮಿಸುವುದು, ಜಾತಿ, ಧರ್ಮ, ಲಿಂಗ, ಬಣ್ಣ, ಭಾಷೆಗಳ ಭೇದವಿಲ್ಲದೇ ಎಲ್ಲರಿಗೂ ನೆಮ್ಮದಿಯ ಬದುಕು ನೀಡುವುದು ಉದ್ದೇಶವಾಗಬೇಕು ಎಂದು ಕೇರಳದ ಶಾಸಕಿ ಕೆ.ಕೆ. ಶೈಲಜಾ (ಶೈಲಜಾ ಟೀಚರ್) ಆಶಿಸಿದರು.

ಕ್ರಿಯಾಮಾಧ್ಯಮವು ಶನಿವಾರ ಹಮ್ಮಿಕೊಂಡಿದ್ದ 'ಕಾಮ್ರೇಡ್ ಆಗಿ ನನ್ನ ಬದುಕು' ಕೃತಿ ಬಿಡುಗಡೆ ಮತ್ತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಉತ್ತಮ ಆಹಾರ, ಉತ್ತಮ ಶಿಕ್ಷಣ, ಉದ್ಯೋಗ, ಉತ್ತಮ ವೇತನ, ಮೇಲು-ಕೀಳು ಭಾವವಿಲ್ಲದ ಸಂಘಟಿತ ಕೆಲಸ ಇದ್ದರೆ ಮಾತ್ರ ಸಮಾಜ ಅಭಿವೃದ್ಧಿಯಾಗಲು ಸಾಧ್ಯ. ಕೇರಳದಲ್ಲಿ ನಿಫಾ ಆನಂತರ ಕೋವಿಡ್ ಬಂದಾಗ ಯಾವುದನ್ನೂ ಮುಚ್ಚಿಡದೇ ಸಮರೋಪಾದಿಯಾಗಿ ಎಲ್ಲರೂ ಕೆಲಸ ಮಾಡಿದ್ದರಿಂದ ಯಶಸ್ಸು ಕಾಣಲು ಸಾಧ್ಯವಾಯಿತು' ಎಂದು ಹೇಳಿದರು.

'ಕರ್ನಾಟಕವನ್ನು ದೇವರೇ ಕಾಪಾಡಬೇಕು ಎಂದು ಕೋವಿಡ್ ಸಮಯದಲ್ಲಿ ಇಲ್ಲಿನ ನಾಯಕರೊಬ್ಬರು ಹೇಳಿಕೆ ನೀಡುವ ಹೊತ್ತಿಗೆ ಕೇರಳದಲ್ಲಿ ಕೋವಿಡ್ ನಿಯಂತ್ರಿಸಲು ಬೇಕಾದ ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಾಗಿತ್ತು' ಎಂದು ನೆನಪು ಮಾಡಿಕೊಂಡರು.

ಲೇಖಕಿ ವಸುಂಧರಾ ಭೂಪತಿ ಕೃತಿ ಬಿಡುಗಡೆ ಮಾಡಿ ಮಾತನಾಡಿ, 'ಇದು ಶೈಲಜಾ ಅವರ ಆತ್ಮ ಕಥನವೂ ಹೌದು. ಅದರ ಜೊತೆಗೆ ಕೇರಳದ ಸಮಾಜೋ ರಾಜಕೀಯ ಕಥನವೂ ಹೌದು. ಕೇರಳದ ಸಾಮಾಜಿಕ ಆರೋಗ್ಯ ವ್ಯವಸ್ಥೆ, ಸಾಮಾಜಿಕ ಬೆಳವಣಿಗೆ, ಕಮ್ಯುನಿಸ್ಟ್ ಬೆಳವಣಿಗೆಗಳನ್ನು ಈ ಕೃತಿಯು ಬಿಚ್ಚಿಡುತ್ತದೆ' ಎಂದು ಹೇಳಿದರು.

ಕೃತಿಯ ಅನುವಾದಕಿ ಎಚ್.ಎಸ್. ಅನುಪಮಾ ಮಾತನಾಡಿ, 'ಪುರುಷರು ಆತ್ಮಕಥೆ ಬರೆದಾಗ ಅದರಲ್ಲಿ ಅವರ ಬದುಕು ಮತ್ತು ಸಾಧನೆಗೇ ಮೊದಲ ಆದ್ಯತೆ. ಕುಟುಂಬಕ್ಕೆ ಎರಡನೇ ಆದ್ಯತೆ ಇರುತ್ತದೆ. ಮಹಿಳೆಯರು ಬರೆದಾಗ ಕುಟುಂಬ ಮತ್ತು ಜೀವನ ಎಲ್ಲವೂ ಒಳಗೊಂಡಿರುತ್ತದೆ. ಶೈಲಜಾ ಟೀಚರ್ ಅವರ ಕಥನವೂ ಅವರ ಅಜ್ಜಿಯಿಂದ ಸ್ಫೂರ್ತಿ ಪಡೆದಲ್ಲಿಂದ ಹೋರಾಟದವರೆಗೆ ಎಲ್ಲ ವಿವರಗಳಿವೆ' ಎಂದು ಆಶಿಸಿದರು.

ಸಾರ್ವತ್ರಿಕ ಆರೋಗ್ಯ ಆಂದೋಲನ ಕರ್ನಾಟಕದ ಅನಿಲ್ ಕುಮಾರ್ ಎ., ಪ್ರಸನ್ನ ಸಾಲಿಗ್ರಾಮ ವಿಚಾರ ಮಂಡಿಸಿದರು. ಕ್ರಿಯಾಮಾಧ್ಯಮದ ಕೆ.ಎಸ್. ವಿಮಲಾ ಉಪಸ್ಥಿತರಿದ್ದರು.

ಬಿಬಿಎಂಪಿ ಆಸ್ತಿ ತೆರಿಗೆ ₹4,284 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಒಂದು ಬಾರಿ ಪರಿಹಾರ ಯೋಜನೆ(ಒಟಿಎಸ್) ನವೆಂಬರ್ 30ಕ್ಕೆ ಅಂತ್ಯಗೊಂಡಿದ್ದು, ₹4,284 ಕೋಟಿ ಮೊತ್ತದ ಆಸ್ತಿ ತೆರಿಗೆ ಸಂಗ್ರಹವಾಗಿದೆ. ಇದು ಪಾಲಿಕೆಯಲ್ಲಿ ಈವರೆಗಿನ ಅತ್ಯಧಿಕ ತೆರಿಗೆ ಸಂಗ್ರಹವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹದೇವಪುರ ವಲಯದಲ್ಲಿ ಅತಿ ಹೆಚ್ಚು ₹1148.35 ಕೋಟಿ ತೆರಿಗೆ ಸಂಗ್ರಹವಾಗಿದೆ. ಪೂರ್ವ ವಲಯದಲ್ಲಿ ₹710 ಕೋಟಿ ಮತ್ತು ಕೇಂದ್ರ ಕಚೇರಿಯಲ್ಲಿ ₹36 ಕೋಟಿ ತೆರಿಗೆ ಸಂಗ್ರಹವಾಗಿದೆ.

ಫೆಬ್ರುವರಿಯಲ್ಲಿ ಮೊದಲ ಬಾರಿಗೆ ಜಾರಿಯಾಗಿದ್ದ ಒಟಿಎಸ್ ಯೋಜನೆ ಜುಲೈ 31ರಂದು ಕೊನೆಗೊಂಡಿತ್ತು. 'ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ನಾಗರಿಕರು, ಸಂಘ–ಸಂಸ್ಥೆಗಳು ಮನವಿ ಮಾಡಿಕೊಂಡಿದ್ದವು. ಅದರಂತೆಯೇ, ಸರ್ಕಾರ ಒಟಿಎಸ್ ಅವಧಿಯನ್ನು ಸೆಪ್ಟೆಂಬರ್‌ವರೆಗೆ ವಿಸ್ತರಿಸಿತ್ತು. ಮತ್ತೆ ಗಡುವನ್ನು ಎರಡನೇ ಬಾರಿಗೆ ನವೆಂಬರ್ 30ರವರೆಗೂ ವಿಸ್ತರಿಸಿತ್ತು.

2025ರ ಮಾರ್ಚ್ ವೇಳೆಗೆ ₹5200 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿರುವುದಾಗಿ ಬಿಬಿಎಂಪಿ ತಿಳಿಸಿದೆ.

ಏಪ್ರಿಲ್ 2024ರಿಂದ ನ.30ರವರೆಗೆ ತೆರಿಗೆ ಸಂಗ್ರಹ

(₹ಕೋಟಿಗಳಲ್ಲಿ)

ವಲಯ	ತೆರಿಗೆ ಸಂಗ್ರಹ
ಕೇಂದ್ರ ಕಚೇರಿ	36.36
ಬೊಮ್ಮನಹಳ್ಳಿ	418.78
ದಾಸರಹಳ್ಳಿ	136.2
ಪೂರ್ವ ವಲಯ	710.31
ಮಹದೇವಪುರ	1148.35
ಆರ್‌ಆರ್ ನಗರ	335.72
ದಕ್ಷಿಣ ವಲಯ	606.48
ಪಶ್ಚಿಮ ವಲಯ	483.67
ಯಲಹಂಕ	408.29
ಒಟ್ಟು	4284.16

ಬೃಹತ್ ಹರಿನಾಮ ಸಂಕೀರ್ತನೆ ನಡೆಸಿದ ಇಸ್ಕಾನ್ ಭಕ್ತರು

'ಬಾಂಗ್ಲಾದಲ್ಲಿನ ಹಿಂದೂಗಳನ್ನು ರಕ್ಷಿಸಿ'

ಪ್ರಜಾವಾಣಿ ವಾರ್ತೆ



ಬಾಂಗ್ಲಾದೇಶದಲ್ಲಿನ ಹಿಂದೂಗಳ ರಕ್ಷಣೆಗೆ ಇಸ್ಕಾನ್‌ನಲ್ಲಿ ಭಕ್ತರು ಹರಿನಾಮ ಸಂಕೀರ್ತನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಬಾಂಗ್ಲಾದೇಶದಲ್ಲಿನ ಹಿಂದೂಗಳ ಮೇಲಿನ ದೌರ್ಜನ್ಯ ತಡೆ ಹಾಗೂ ರಕ್ಷಣೆಗೆ ಆಗ್ರಹಿಸಿ ಇಲ್ಲಿನ ರಾಜಾಜಿನಗರದ ಇಸ್ಕಾನ್, ನಗರದಲ್ಲಿ ಭಾನುವಾರ ಬೃಹತ್ ಹರಿನಾಮ ಸಂಕೀರ್ತನೆ ನಡೆಸಿತು.

ಈ ಸಂಕೀರ್ತನೆಯಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹಾಗೂ ನೂರಾರು ಭಕ್ತರು ಪಾಲ್ಗೊಂಡು, ಕೃಷ್ಣನಿಗೆ ಪ್ರಾರ್ಥನೆ ಸಲ್ಲಿಸುವ ಮೂಲಕ ಬಾಂಗ್ಲಾದೇಶದಲ್ಲಿನ ಹಿಂದೂಗಳಿಗೆ ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಇಸ್ಕಾನ್ ಬೆಂಗಳೂರಿನ ಅಧ್ಯಕ್ಷ ಮಧುಪಂಡಿತ ದಾಸ, 'ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸೆಯಿಂದ ನಾವು ಚಿಂತಿತರಾಗಿದ್ದೇವೆ. ಬಾಂಗ್ಲಾದೇಶ ಸನಾತನ ಜಾಗರಣ ಮಂಚ್‌ನ ವಕ್ತಾರರಾದ ಚಿನ್ಮಯಿ ಕೃಷ್ಣದಾಸರನ್ನು ಬಂಧಿಸಲಾಗಿದೆ. ಇಸ್ಕಾನ್ ಭಕ್ತರು ಮತ್ತು ಇತರ ದಮನಿತ ಅಲ್ಪಸಂಖ್ಯಾತ ಸಮುದಾಯಗಳನ್ನು ಬಾಂಗ್ಲಾದೇಶ ಸರ್ಕಾರವು ಯಾವುದೇ ಪೂರ್ವಗ್ರಹವಿಲ್ಲದೇ ರಕ್ಷಿಸುತ್ತದೆ ಎಂಬ ನಿರೀಕ್ಷೆಯಲ್ಲಿದ್ದೇವೆ. ಅಲ್ಪಸಂಖ್ಯಾತ ಸಮುದಾಯದ ಹಕ್ಕುಗಳ ರಕ್ಷಣೆಗೆ ಭಾರತ ಸರ್ಕಾರವು ಬಾಂಗ್ಲಾದೇಶದ ಜತೆಗೂಡಿ ಕೆಲಸ ಮಾಡಬೇಕು' ಎಂದು ಮನವಿ ಮಾಡಿದರು.

'ಬಾಂಗ್ಲಾದೇಶದಲ್ಲಿ ಹಲವು ಮಂದಿರಗಳ ಮೇಲೆ ದಾಳಿ ನಡೆಯುತ್ತಿದೆ. ಸನಾತನ ಧರ್ಮದ ಅನುಯಾಯಿಗಳು ತೀವ್ರ ಭಯದ ವಾತಾವರಣದಲ್ಲಿ ಜೀವಿಸುತ್ತಿದ್ದಾರೆ. ಈಗಾಗಲೇ ಹಲವಾರು ಮಂದಿ ಮತಾಂಧರ ಉಪಟಳದಿಂದ ಅಸುನೀಗಿದ್ದಾರೆ. ಹಿಂದೂಗಳು ಮತ್ತು ಇನ್ನಿತರ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳು ನಿಲ್ಲಬೇಕು' ಎಂದು ಇಸ್ಕಾನ್‌ನ ಮಹೋತ್ಸಾಹ ಚೈತನ್ಯ ದಾಸ ಆಗ್ರಹಿಸಿದರು.

ಅಂತರ ಅಪಾರ್ಟ್‌ಮೆಂಟ್ ಕ್ರೀಡಾಕೂಟ ಸಮಾರೋಪದಲ್ಲಿ ಸಚಿವ ಕೃಷ್ಣಬೈರೇಗೌಡ

ಕ್ರೀಡೆಯಿಂದ ಆರೋಗ್ಯವಂತ ಸಮಾಜ ನಿರ್ಮಾಣ

ಪ್ರಜಾವಾಣಿ ವಾರ್ತೆ

ಯಲಹಂಕ: ಇಂದಿನ ಯುವಜನಾಂಗವನ್ನು ಅತಿಯಾದ ಮೊಬೈಲ್ ಫೋನ್ ಗೀಳಿನಿಂದ ಹೊರತರಲು ಕ್ರೀಡಾ ಉತ್ಸವಗಳ ಆಯೋಜನೆ ಸಹಕಾರಿಯಾಗಲಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಕೆಂಪಾಪುರದ ಕಾಫಿಬೋರ್ಡ್ ಬಡಾವಣೆಯಲ್ಲಿ ಒಳಾಂಗಣ ಕ್ರೀಡಾಂಗಣದ ಉದ್ಘಾಟನಾ ಸಮಾರಂಭದ ಪ್ರಯುಕ್ತ ಕೆಬಿಜಿ ಸ್ವಯಂಸೇವಕರ ತಂಡದಿಂದ ಆಯೋಜಿಸಿದ್ದ ಎರಡು ದಿನಗಳ ಅಂತರ ಅಪಾರ್ಟ್‌ಮೆಂಟ್ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಆರೋಗ್ಯವಂತ ಯುವಸಮಾಜವನ್ನು ನಿರ್ಮಿಸಲು ಕ್ರೀಡೆಯೊಂದೇ ದಾರಿ. ಆದರೆ ಇಂದಿನ ಮಕ್ಕಳು ಎಲ್ಲಾ ಕ್ರೀಡೆಗಳನ್ನು ಮೊಬೈಲ್ ಫೋನ್‌ನಲ್ಲೇ ಆಡುತ್ತಾ ಕಾಲಹರಣ ಮಾಡುತ್ತಿರುವುದರಿಂದ, ದೈಹಿಕ ಆರೋಗ್ಯದಿಂದ ವಂಚಿತರಾಗುತ್ತಿದ್ದಾರೆ. ಇಂತಹ ಗೀಳಿನಿಂದ ಇಂದಿನ ಯುವಪೀಳಿಗೆಯನ್ನು ಹೊರತಂದು ಆರೋಗ್ಯವಂತ ಸಮಾಜದ ಭಾಗವಾನ್ನಾಗಿಸುವ ಉದ್ದೇಶದಿಂದಲೇ ಈ ಕ್ರೀಡಾ ಹಬ್ಬವನ್ನು ಆಚರಿಸಲಾಗಿದೆ ಎಂದು ತಿಳಿಸಿದರು.

'ಅಪಾರ್ಟ್‌ಮೆಂಟ್ ನಿವಾಸಿಗಳು ಬಹುತೇಕ ಐಟಿ-ಬಿಟಿ ಉದ್ಯಮದ ಭಾಗವಾಗಿದ್ದಾರೆ. ಈ ಪೈಕಿ ಹಲವರು ಹೊರ ಪ್ರಪಂಚದ ವಿದ್ಯಮಾನಗಳ ಅರಿವೆಯೇ ಇಲ್ಲದೆ ತಮ್ಮ ಕೆಲಸಗಳಲ್ಲಿ ತಲ್ಲೀನರಾಗಿರುತ್ತಾರೆ. ಸಾಮಾಜಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುತ್ತಿಲ್ಲ. ಅಂತಹವರನ್ನು ಅಪಾರ್ಟ್‌ಮೆಂಟ್‌ಗಳಿಂದ ಹೊರತಂದು, ಸಮಾಜದಲ್ಲಿ ಎಲ್ಲರೊಂದಿಗೆ ಬೆರೆಯುವಂತೆ ಮಾಡುವ ನಿಟ್ಟಿನಲ್ಲಿ ಈ ಕ್ರೀಡಾಕೂಟ ಸಹಕಾರಿಯಾಗಿದೆ' ಎಂದರು.

ಎರಡು ದಿನಗಳಿಂದ ಕ್ರಿಕೆಟ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಈಜು, ಫುಟ್‌ಬಾಲ್, ಬ್ಯಾಸ್ಕೆಟ್ ಬಾಲ್, ಕೇರಮ್ ಸೇರಿ ಎಂಟು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಹತ್ತಾರು ಅಪಾರ್ಟ್‌ಮೆಂಟ್‌ಗಳ ಮಹಿಳೆಯರು ಮತ್ತು ಪುರುಷರೂ ಸೇರಿ ಎರಡು ಸಾವಿರ ಕ್ರೀಡಾಪಟುಗಳು ಉತ್ಸಾಹದಿಂದ ಈ ಕ್ರೀಡಾಹಬ್ಬದಲ್ಲಿ ಪಾಲ್ಗೊಂಡಿದ್ದರು. ಸ್ಪರ್ಧೆಗಳಲ್ಲಿ ವಿಜೇತರಾದ ಹಲವು ಮಂದಿಗೆ ಬಹುಮಾನ ವಿತರಿಸಿರುವುದು ಸಂತಸತಂದಿದೆ ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣಬೈರೇಗೌಡ, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ವಿ.ವಿ.ಪಾರ್ಥಿಬರಾಜನ್, ಟಿ.ಜಿ.ಚಂದ್ರು, ವಿ.ಹರಿ, ಕೆ.ದಿಲೀಪ್‌ಕುಮಾರ್, ಟಿ.ರಮೇಶ್, ಕಾರ್ಣಿಕ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.



ಬ್ಯಾಟರಾಯನಪುರ ಕ್ಷೇತ್ರದ ಕೆಂಪಾಪುರದ ಕಾಫಿಬೋರ್ಡ್ ಬಡಾವಣೆಯ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಅಂತರ ಅಪಾರ್ಟ್‌ಮೆಂಟ್ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಸಚಿವ ಕೃಷ್ಣಬೈರೇಗೌಡ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು

ಸುದ್ದಿ 2 ನಿಮಿಷ


ಬೆಂಗಳೂರು–ಶ್ರೀವಿಜಯಪುರಂ ಮಧ್ಯ ನೇರ ವಿಮಾನ ಸೇವೆ

ಬೆಂಗಳೂರು: ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಯಾನ ಸಂಸ್ಥೆಯು ಬೆಂಗಳೂರು ಮತ್ತು ಶ್ರೀವಿಜಯಪುರಂ (ಪೋರ್ಟ್‌ಬ್ಲೇರ್) ಮಧ್ಯೆ ನೇರ ವಿಮಾನಯಾನ ಸೇವೆಯನ್ನು ಭಾನುವಾರದಿಂದ ಆರಂಭಿಸಿದೆ.

ಎರಡೂ ನಗರಗಳ ಮಧ್ಯೆ ನಿತ್ಯವೂ ನೇರ ವಿಮಾನಯಾನ ಇರಲಿದೆ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾನುವಾರ ಬೆಳಿಗ್ಗೆ 10.50ಕ್ಕೆ ಶ್ರೀವಿಜಯ ಪುರಂಗೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಹಾರಾಟ ಆರಂಭಿಸಿತು. ಮಧ್ಯಾಹ್ನ 1.15ಕ್ಕೆ ಶ್ರೀವಿಜಯಪುರಂ ವಿಮಾನ ನಿಲ್ದಾಣಕ್ಕೆ ತಲುಪಿತು.

ಡಿಸೆಂಬರ್ 1ರಿಂದ ಜಾರಿಯಾಗಿರುವ ಪ್ರತಿದಿನದ ವೇಳಾಪಟ್ಟಿ ಪ್ರಕಾರ ಬೆಂಗಳೂರು ವಿಮಾನ ನಿಲ್ದಾಣದಿಂದ ಬೆಳಿಗ್ಗೆ 10.50ಕ್ಕೆ ಹೊರಟು ಮಧ್ಯಾಹ್ನ 1.15ಕ್ಕೆ ಶ್ರೀವಿಜಯಪುರಂ ವಿಮಾನ ನಿಲ್ದಾಣ ತಲುಪಲಿದೆ. ಮಧ್ಯಾಹ್ನ 1.50ಕ್ಕೆ ಶ್ರೀವಿಜಯಪುರಂ ವಿಮಾನ ನಿಲ್ದಾಣ ಹೊರಟು ಸಂಜೆ 4.20ಕ್ಕೆ ಬೆಂಗಳೂರು ವಿಮಾನ ನಿಲ್ದಾಣ ತಲುಪಲಿದೆ ಎಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಪ್ರಕಟಣೆ ತಿಳಿಸಿದೆ.



ಲೈಂಗಿಕ ಕಿರುಕುಳ: ಗುರಪ್ಪ ನಾಯ್ಡುಗೆ ನೋಟಿಸ್

ಬೆಂಗಳೂರು: ಲೈಂಗಿಕ ಕಿರುಕುಳ ಪ್ರಕರಣದ ಆರೋಪಿ ಕಾಂಗ್ರೆಸ್ ಮುಖಂಡ ಗುರಪ್ಪ ನಾಯ್ಡು ಅವರಿಗೆ ವಿಚಾರಣೆಗೆ ಹಾಜರಾಗುವಂತೆ ವಿ.ವಿ ಪುರ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ

ಆರೋಪಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದ್ದು, ಆರೋಪಿಯ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಗುರಪ್ಪ ನಾಯ್ಡು ವಿರುದ್ಧ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯಲ್ಲಿ ದಾಖಲಾಗಿದ್ದ ಲೈಂಗಿಕ ಕಿರುಕುಳ ಪ್ರಕರಣದ ತನಿಖೆ ಹೊಣೆಯನ್ನು ಸಂತ್ರಸ್ತೆಯ ಮನವಿ ಮೇರೆಗೆ ವಿ.ವಿ.ಪುರ ಠಾಣೆಗೆ ವರ್ಗಾವಣೆಗೊಳಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ವಿ.ವಿ.ಪುರ ಠಾಣೆ ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

ರಾಜಕೀಯವಾಗಿ ಪ್ರಭಾವಿಯಾಗಿರುವ ಗುರಪ್ಪ ನಾಯ್ಡು ಅವರು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣಾ ವ್ಯಾಪ್ತಿಯಲ್ಲಿ ವಾಸವಾಗಿದ್ದಾರೆ. ಅವರ ಶಾಲೆ ಸಹ ಅದೇ ಠಾಣೆ ವ್ಯಾಪ್ತಿಯಲ್ಲಿದೆ. ತನಿಖೆ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ ಎಂಬ ಕಾರಣಕ್ಕೆ ಪ್ರಕರಣವನ್ನು ಬೇರೆ ಠಾಣೆಗೆ ವರ್ಗಾಯಿಸಬೇಕು ಎಂದು ದಕ್ಷಿಣ ವಿಭಾಗದ ಡಿಸಿಪಿಗೆ ಸಂತ್ರಸ್ತೆ ಮನವಿ ಮಾಡಿದ್ದರು.

ಗುರುಪ್ಪ ನಾಯ್ಡು ವಿರುದ್ಧ ಅವರ ಶಾಲೆಯಲ್ಲಿಯೇ ಈ ಹಿಂದೆ ಕೆಲಸ ಮಾಡುತ್ತಿದ್ದ ಶಿಕ್ಷಕಿಯು ಲೈಂಗಿಕ ಕಿರುಕುಳ ಪ್ರಕರಣ ದಾಖಲಿಸಿದ್ದರು. ತನ್ನನ್ನೂ ಸೇರಿ ಶಾಲೆಯಲ್ಲಿ ಕೆಲಸ ಮಾಡುವ ಹಲವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ.

'ಆಸ್ಪತ್ರೆಗಳಲ್ಲಿ ಸೇವಾ ಮನೋಭಾವ ಇರಲಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹಿಳೆ ಮತ್ತು ಮಕ್ಕಳ ಆರೋಗ್ಯದ ಚಿಕಿತ್ಸೆ ನೀಡುವ ಆಸ್ಪತ್ರೆಗಳು ಹಾಗೂ ವೈದ್ಯರು ಅದನ್ನು ಸೇವಾ ಮನೋಭಾವದಿಂದ ಮಾಡಬೇಕು ಎಂದು ಮಾಜಿ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಕೆ.ಆರ್.ಪುರದ ಮಾರತ್ತಹಳ್ಳಿಯ ಮಾ ಕಾವೇರಿ ಆಸ್ಪತ್ರೆ, ಮಹಿಳೆ ಮತ್ತು ಮಕ್ಕಳ ಆರೋಗ್ಯಕ್ಕೆ ಮುಂಚೂಣಿಯಾದ ಚಿಕಿತ್ಸೆ ನೀಡಲು ವಿಶೇಷವಾಗಿ ಆರಂಭಗೊಂಡ ಹೊಸ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ಕಾವೇರಿ ಆಸ್ಪತ್ರೆಯು ನೂತನ ಘಟಕವಾದ ಈ ಮಾ ಕಾವೇರಿ ಆಸ್ಪತ್ರೆ ತಾಯಿ ಮತ್ತು ಮಕ್ಕಳ ಚಿಕಿತ್ಸೆಗೆ ಸಂಪೂರ್ಣವಾಗಿ ಸಮರ್ಪಿತವಾಗಿದೆ. 30 ಹಾಸಿಗೆ ಸಾಮರ್ಥ್ಯ ಹೊಂದಿರುವ ಈ ಆಸ್ಪತ್ರೆಯಲ್ಲಿ, ರೋಬೋಟಿಕ್ ತಂತ್ರಜ್ಞಾನದೊಂದಿಗೆ ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಮತ್ತು ತಪಾಸಣೆಗಳನ್ನು ನುರಿತ ತಜ್ಞ ವೈದ್ಯರ ತಂಡ ನಡೆಸಲಿದ್ದಾರೆ ಎಂದರು.

ಈ ಸಂಧರ್ಭದಲ್ಲಿ ಕಾವೇರಿ ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ವಿಜಯ್ ಭಾಸ್ಕರನ್ ಉಪಸ್ಥಿತರಿದ್ದರು



ಮಾಜಿ ಶಾಸಕ ಅರವಿಂದ ಲಿಂಬಾವಳಿ ಅವರು ಮಾ ಕಾವೇರಿ ಆಸ್ಪತ್ರೆಯ ಮಹಿಳೆ ಮತ್ತು ಮಕ್ಕಳ ಚಿಕಿತ್ಸೆಯ ಹೊಸ ಘಟಕವನ್ನು ಉದ್ಘಾಟಿಸಿದರು

'ಸರ್ಕಾರ ಕೆಡವಲು ಬಿಜೆಪಿಗೆ ಸಹಕಾರ'


ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): 'ರಾಜ್ಯ ಕಾಂಗ್ರೆಸ್ ಸರ್ಕಾರದ ಪತನಕ್ಕೆ ಬಿಜೆಪಿಗೆ ನಾವು ಸಹಕರಿಸಬೇಕಿದೆ' ಎಂದು ಜೆಡಿಎಸ್ ರಾಜ್ಯಾಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಕೇತಗಾನಹಳ್ಳಿಯಲ್ಲಿರುವ ತೋಟದ ಮನೆಯಲ್ಲಿ ಭಾನುವಾರ ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ನಿಖಿಲ್ ಪಕ್ಷದ ಭವಿಷ್ಯದ ನಾಯಕನಾಗಿದ್ದು, ಅವನನ್ನು ಪಕ್ಷಕ್ಕೆ ಒಪ್ಪಿಸುತ್ತಿದ್ದೇನೆ. ಅವನಿಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿ ನಿಮಗೂ ಇದೆ. ಉಪ ಚುನಾವಣೆ ಸೋಲಿನಿಂದ ಪಕ್ಷದ ಭವಿಷ್ಯ ತೀರ್ಮಾನವಾಗುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಸೋಲಿಗೆ ಉತ್ತರ ಕೊಡೋಣ' ಎಂದು ಹೇಳಿದರು.

'ನಮ್ಮದು ಕಾರ್ಯಕರ್ತರಿಗಾಗಿ ಇರುವ ಪಕ್ಷ. ಜಾತಿ ರಾಜಕಾರಣದಲ್ಲಿ ನಮಗೆ ನಂಬಿಕೆ ಇಲ್ಲ. ಎಲ್ಲ ಸಮುದಾಯಗಳನ್ನು ನಮ್ಮೊಂದಿಗೆ ಕೊಂಡೊಯ್ಯಲು ಬದ್ಧರಾಗಿದ್ದೇವೆ. ಒಗ್ಗಟ್ಟಿನಿಂದ ಇದ್ದರೆ ಯಾವ ಶಕ್ತಿಗಳೂ ನಮ್ಮನ್ನು ಮುಗಿಸಲಾರವು.



ಎಚ್.ಡಿ. ಕುಮಾರಸ್ವಾಮಿ

ಏನೇ ಅಸಮಾಧಾನಗಳಿದ್ದರೂ ಬಗೆಹರಿಸಿಕೊಳ್ಳಿ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಗೆಲ್ಲುವ ದೃಷ್ಟಿಯಿಂದ ನಾವು ಒಗ್ಗಟ್ಟಿನಿಂದ ಮುನ್ನಡೆಯಬೇಕು' ಎಂದು ಒಗ್ಗಟ್ಟಿನ ಮಂತ್ರ ಜಪಿಸಿದರು.

'ಜೆಡಿಎಸ್ ಎಂದಿಗೂ ಹಿಂದೆ ಬಿದ್ದಿಲ್ಲ. 2013ರಿಂದ 2018ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ನಂತರದ ಚುನಾವಣೆಯಲ್ಲಿ 75 ಸ್ಥಾನಕ್ಕೆ ಕುಸಿಯಿತು. ಸಾಮಾನ್ಯ ಚುನಾವಣೆ ಚಿತ್ರಣ ಬೇರೆಯೇ ಇರುತ್ತದೆ' ಎಂದರು.

ಪ್ರಧಾನಿ ಮೋದಿ ಹೆಮ್ಮೆಪಡುವ ಕೆಲಸ ಮಾಡಬೇಕೆಂದು ದೇವೇಗೌಡರು ಮಾರ್ಗದರ್ಶನ ಮಾಡಿದ್ದಾರೆ. ಆ ಜವಾಬ್ದಾರಿಯನ್ನು ಎಚ್ಚರಿಕೆಯಿಂದ ನಿರ್ವಹಿಸುತ್ತಿದ್ದೇನೆ' ಎಂದು ಹೇಳಿದರು.

'ಎನ್‌ಇಪಿ ಅನುಷ್ಠಾನಕ್ಕೆ ಅಡ್ಡಗಾಲು'

ಆರ್ಯವೈಶ್ಯ ಮಹಾಸಭಾ ಪ್ರತಿಭೋತ್ಸವದಲ್ಲಿ ಸಿ.ಎನ್. ಅಶ್ವತ್ಥನಾರಾಯಣ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರು 2020ರಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ರೂಪಿಸಿ, ಅನುಮೋದಿಸಿದ್ದಾರೆ. ಆದರೆ ರಾಜಕೀಯ ದುರುದ್ದೇಶದಿಂದ ಎನ್‌ಇಪಿ ಅನುಷ್ಠಾನಕ್ಕೆ ಅಡ್ಡಗಾಲು ಹಾಕಲಾಗುತ್ತಿದೆ' ಎಂದು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಡೀ ವಿಶ್ವದಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಅದಕ್ಕೆ ಪೂರಕವಾಗಿ ಎನ್‌ಇಪಿ ರೂಪಿಸಲಾಗಿದೆ. ಇದು ಸಮಗ್ರ ಶಿಕ್ಷಣ ನೀತಿಯನ್ನು ಒಳಗೊಂಡಿದೆ. ಇದನ್ನು ಅನುಷ್ಠಾನ ಮಾಡುವಲ್ಲಿ ತಡವಾಗಿದೆ. ಈ ಬಗ್ಗೆ ಹೆಚ್ಚು ಜಾಗೃತಿ ಮೂಡಿಸುವ ಅವಶ್ಯಕತೆ ಇದೆ' ಎಂದರು.

'21ನೇ ಶತಮಾನದಲ್ಲಿ ಆವಿಷ್ಕಾರ, ತಂತ್ರಜ್ಞಾನ ಹಾಗೂ ಉದ್ಯಮಶೀಲತೆಗೆ ಶಿಕ್ಷಣವೇ ಮಾನದಂಡವಾಗಿದೆ. ಆದ್ದರಿಂದ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಶಿಕ್ಷಣ, ಕೈಗಾರಿಕೋದ್ಯಮಕ್ಕೆ ಹೆಚ್ಚು ಒತ್ತು ನೀಡಿದ್ದ ಮೈಸೂರು ಸಂಸ್ಥಾನ ಇಡೀ ದೇಶಕ್ಕೆ ಮಾದರಿ ಆಗಿತ್ತು. ಬನಾರಸ್ ಹಿಂದೂ ವಿಶ್ವವಿದ್ಯಾಲಯ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯನ್ನು (ಐಐಎಸ್‌ಸಿ) ಸ್ಥಾಪಿಸಿದ ಕೀರ್ತಿ ಮೈಸೂರು ಮಹಾರಾಜರಿಗೆ ಸಲ್ಲುತ್ತದೆ' ಎಂದರು.

ಮೈಸೂರು–ಕೊಡಗು ಸಂಸದ ಯದುವೀರ್ ದತ್ತ ಚಾಮರಾಜ ಒಡೆಯರ್ ಅವರು ಮಾತನಾಡಿ, 'ಸಾಮಾಜಿಕ ಜಾಲತಾಣಗಳನ್ನು ವೈಯಕ್ತಿಕ ಹಾಗೂ ಸಮುದಾಯದ ಅಭಿವೃದ್ಧಿಗೆ ಪೂರಕವಾಗುವಂತೆ ಬಳಸಿಕೊಳ್ಳಬೇಕು. ಈ ಕ್ಷೇತ್ರದಲ್ಲಿ ಸಕ್ರಿಯರಾಗಿರುವವರನ್ನು ಗುರುತಿಸಿ, ಸನ್ಮಾನಿಸಿರುವುದು ಶ್ಲಾಘನೀಯ' ಎಂದರು.

ಇದೇ ಸಂದರ್ಭದಲ್ಲಿ 1,413 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಡೆದ ಪ್ರತಿಭಾ ಶೋಭಾಯಾತ್ರೆಗೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಚಾಲನೆ ನೀಡಿದರು. ಶಾಸಕ ಡಿ.ಎಸ್. ಅರುಣ್, ಸುಪ್ರೀಂ ಕೋರ್ಟ್ ವಕೀಲ ಕೆ.ಆರ್. ಪ್ರದೀಪ್, ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ. ರವಿಶಂಕರ್ ಉಪಸ್ಥಿತರಿದ್ದರು.



ನಗರದ ಮಲ್ಲೇಶರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಭಾನುವಾರ ನಡೆದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಆರ್ಯವೈಶ್ಯ ಸಮುದಾಯದ ಸಾಧಕರಿಗೆ ಯುದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸನ್ಮಾನಿಸಿದರು. ವಿಧಾನ ಪರಿಷತ್ ಸದಸ್ಯ ಡಿ.ಎಸ್ ಅರುಣ್, ಎಸ್ ಈ ಸುಧೀಂದ್ರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಭಾರತೀಯ ಧರ್ಮದಂತೆ ಅಭಿವೃದ್ಧಿಯಾಗಲಿ'

'ನಮ್ಮ ದೇಶ ಶ್ರೇಷ್ಠ ಭಾರತವಾಗಬೇಕಾದರೆ, ಅದು ಭಾರತೀಯ ಧರ್ಮದ ಆಧಾರದ ಮೇಲೆ ಅಭಿವೃದ್ಧಿ ಆಗಬೇಕು. ಆರೋಗ್ಯ, ಶಿಕ್ಷಣ, ಕೈಗಾರಿಕೋದ್ಯಮಗಳಿಗೆ ಉತ್ತಮ ಪ್ರೋತ್ಸಾಹ ದೊರೆಯುತ್ತಿದೆ. ಈ ಎಲ್ಲ ಕ್ಷೇತ್ರಗಳನ್ನು ಭಾರತೀಯ ಧರ್ಮದ ಆಧಾರದ ಮೇಲೆ ಅಭಿವೃದ್ಧಿಪಡಿಸಬೇಕು' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯ ವ್ಯಕ್ತಪಡಿಸಿದರು.

ವ್ಯವಸ್ಥಾಪನ ಉದ್ಯಮಿಗಳಿಗಾಗಿ ಸ್ಪರ್ಧೆ: ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಚರ್ಚೆ

ಹವಾಮಾನ ಬದಲಾವಣೆ: ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ. ಪರ್ಯಾಯ ಸುಸ್ಥಿರ ಅಭಿವೃದ್ಧಿ ಕ್ರಮಗಳನ್ನು ಅಳವಡಿಸುವ ಚಿಂತನೆ, ಈ ಕುರಿತು ಸ್ಥಳೀಯ ಆಡಳಿತ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಯುವಜನರು ರೂಪಿಸಿದ ಯೋಜನೆಗಳ ಕುರಿತು ಚರ್ಚೆ, ಸಂವಾದ...

ಇದು, ಮರ್ಸಿ ಮಿಷನ್ ಫೆಲೋಶಿಪ್, ಕಮ್ಯೂಟಿನಿ–ಯೂಥ್ ಕಲೆಕ್ಟಿವ್ ಹಾಗೂ ವಾರ್ತಲೀಪ್ ಸಹಯೋಗದಲ್ಲಿ 'ಬಿಯಾಂಡ್ ರೈಟ್ ಆ್ಯಂಡ್ ರಾಂಗ್–ಯೂಥ್ ಲೀಡರ್‌ಶಿಪ್ ಇಸ್ ಚೇಂಜಿಂಗ್ ದಿ ಗೇಮ್' ಎಂಬ ಶೀರ್ಷಿಕೆಯಡಿ ಶನಿವಾರ ಆಯೋಜಿಸಿದ್ದ 'ವ್ಯವಸ್ಥಾಪನ ಉದ್ಯಮಿಗಳಿಗಾಗಿ ಹವಾಮಾನ ಬದಲಾವಣೆ ತಡೆ ಸ್ಪರ್ಧೆ'ಯಲ್ಲಿ ಕಂಡು ಬಂದ ದೃಶ್ಯಗಳು.

ಯುವ ನಾಯಕತ್ವಕ್ಕೆ ಅಗತ್ಯ ಪ್ರೋತ್ಸಾಹ ನೀಡುವುದು ಈ ಕಾರ್ಯಕ್ರಮದ ಉದ್ದೇಶ. ಒಂದೇ ಸೂರಿನಡಿ ಯುವ ಸಮೂಹ, ಶಿಕ್ಷಣ ತಜ್ಞರು, ನೀತಿ ನಿರೂಪಕರು, ದಾನಿಗಳು ಪಾಲ್ಗೊಂಡಿದ್ದರು. ಕ್ವಾರ್ಟರ್ ಫೈನಲ್ ಸ್ಪರ್ಧೆಯಲ್ಲಿ ಜಾರ್ಖಂಡ್, ಮಧ್ಯಪ್ರದೇಶ, ಪುದುಚೇರಿ ಹಾಗೂ ಕರ್ನಾಟಕ ರಾಜ್ಯದ ತಂಡಗಳು ಭಾಗವಹಿಸಿದ್ದವು.

ಹವಾಮಾನ ಬದಲಾವಣೆಯಿಂದ ಅಕಾಲಿಕ ಮಳೆ, ತಾಪಮಾನ ಹೆಚ್ಚಳ, ಚಂಡಮಾರುತ, ಕಾಳ್ಗಿಚ್ಚು, ಬರಗಾಲ, ಪ್ರವಾಹ, ಸೇರಿದಂತೆ ನೈಸರ್ಗಿಕ ವಿಕೋಪಗಳು ಸಂಭವಿಸುತ್ತಿವೆ. ಈ ಸಮಸ್ಯೆಗೆ ತಳಮಟ್ಟದಲ್ಲಿ ಹೇಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು ಎಂಬುದರ ಕುರಿತು ಈ ನಾಲ್ಕೂ ತಂಡಗಳು ತಮ್ಮ ಆಲೋಚನೆಗಳನ್ನು ತೀರ್ಪುಗಾರರ ಮುಂದೆ ಪ್ರಸ್ತುತಪಡಿಸಿದರು.

ಜಾರ್ಖಂಡ್ ರಾಜ್ಯದ 'ಸಹಯೋಗಿಣಿ' ತಂಡದ ರೇಖಾ ದೇವಿ ಹಾಗೂ ಇಂದ್ರನಾಥ್ ನಾಯಕ್ ಅವರು ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡರು. ಈ ತಂಡ ಸ್ಥಳೀಯ ಎರಡು ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿ ಜೈವಿಕ ಕೃಷಿ, ಕೈತೋಟ ನಿರ್ಮಾಣ, ನೀರಿನ ಮಿತಬಳಕೆ, ಗ್ರಾಮೀಣ ವಲಸೆ ತಡೆಗಟ್ಟುವ ಕುರಿತು ಪ್ರಾಯೋಗಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಹವಾಮಾನ ಬದಲಾವಣೆ ತಡೆಗೆ ಪರ್ಯಾಯ ಮಾರ್ಗ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತಿದ್ದಾರೆ.

ಮಧ್ಯಪ್ರದೇಶದ ಇಶಾ ಗುಪ್ತಾ ಮತ್ತು ರಾಜ್‌ಕುಮಾರ್ ಅವರು ದ್ವಿತೀಯ ಸ್ಥಾನ ಪಡೆದುಕೊಂಡರು. ಈ ತಂಡವು, ಕವಿಗಳು–ಲೇಖಕರೊಂದಿಗೆ ಸೇರಿ ಕಾಮಿಕ್, ಕಲೆ–ನೃತ್ಯವನ್ನು ಮಾಧ್ಯಮವಾಗಿ ಬಳಸಿಕೊಂಡು ಹವಾಮಾನ ಬದಲಾವಣೆ ಕುರಿತು ಅರಿವು ಮೂಡಿಸುತ್ತಿದೆ. ಪುದುಚೇರಿ ಹಾಗೂ ಕರ್ನಾಟಕದ ತಂಡಗಳು ಮೂರು ಮತ್ತು ನಾಲ್ಕನೇ ಸ್ಥಾನ ಪಡೆದುಕೊಂಡಿವೆ.

ಮರ್ಸಿ ಮಿಷನ್ ಫೆಲೋಶಿಪ್‌ನ ಮಿಸ್ಬಾ ಶಾಹಿದ್, ಸೆಲ್ಕೊ ಫೌಂಡೇಶನ್ ನಿರ್ದೇಶಕಿ ಹುದಾ ಜಾಫರ್ ಉಪಸ್ಥಿತರಿದ್ದರು.



ಎಚ್‌ಬಿಎಸ್ ಆಸ್ಪತ್ರೆಯಲ್ಲಿ ನಡೆದ 'ವ್ಯವಸ್ಥಾಪನ ಉದ್ಯಮಿಗಳಿಗಾಗಿ ಹವಾಮಾನ ಬದಲಾವಣೆ ತಡೆ ಸ್ಪರ್ಧೆ'ಯಲ್ಲಿ ಪಾಲ್ಗೊಂಡಿದ್ದ ಅಭ್ಯರ್ಥಿಗಳು ಪರಸ್ಪರ ಚರ್ಚೆ ನಡೆಸಿದರು ಪ್ರಜಾವಾಣಿ ಚಿತ್ರ

₹5 ಲಕ್ಷ ಬಹುಮಾನ

'ಡಿಸೆಂಬರ್ 20ರಂದು ನವದೆಹಲಿಯಲ್ಲಿ ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ. ಪ್ರಥಮ ಬಹುಮಾನ ₹5 ಲಕ್ಷ, ದ್ವಿತೀಯ ₹4 ಲಕ್ಷ, ತೃತೀಯ ಸ್ಥಾನ ಪಡೆದ ತಂಡಕ್ಕೆ ₹3 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ. ಅಂತಿಮ ಸುತ್ತಿನ ಉಳಿದ ಆರು ತಂಡಗಳಿಗೆ ತಲಾ ₹2 ಲಕ್ಷ ವಿತರಿಸಲಾಗುತ್ತದೆ' ಎಂದು ಕಮ್ಯೂಟಿನಿ–ಯೂಥ್–ಕಲೆಕ್ಟಿವ್‌ನ ವಿಶಾಲ್ ಅವರು ಮಾಹಿತಿ ನೀಡಿದರು.

ಪ್ರಯಾಣಿಕರ ಪರದಾಟ, ಕುಳಿರ್ಗಾಳಿ, ಥಂಡಿಯ ವಾತಾವರಣ

ದಿನವಿಡೀ ಕಾಡಿದ ಚಳಿ, ಜಡಿಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಂಜಲ್ ಚಂಡಮಾರುತದ ಪರಿಣಾಮವಾಗಿ ನಗರದಾದ್ಯಂತ ಭಾನುವಾರ ಬೆಳಿಗ್ಗೆಯಿಂದ ಮೋಡಕವಿದ ವಾತಾವರಣವಿತ್ತು. ಕೆಲವೆಡೆ ಬೆಳಿಗ್ಗೆಯೇ ತುಂತುರು ಮಳೆಯಾಯಿತು. ಮಧ್ಯಾಹ್ನ 3 ಗಂಟೆ ನಂತರ, ನಗರದ ಬಹುತೇಕ ಕಡೆ ಜಡಿ ಮಳೆ ಸುರಿಯಲಾರಂಭಿಸಿತು.

ಮಧ್ಯಾಹ್ನದ ನಂತರ ನಿರಂತರವಾಗಿ ಸುರಿಯುತ್ತಿದ್ದ ಸೋನೆ ಮಳೆಯಿಂದ ಬೈಕ್ ಸವಾರರು, ಪಾದಚಾರಿಗಳು ಪರದಾಡಿದರು. ಮಳೆಯ ಜೊತೆಗೆ ಕೊರೆಯುವ ಚಳಿ ಕೂಡ ಸವಾರರನ್ನು ಬಾಧಿಸುತ್ತಿತ್ತು.

ಭಾನುವಾರದ ರಜೆ ಸವಿಯಲು ಬೆಳಿಗ್ಗೆ ಮನೆಯಿಂದ ಹೊರಗೆ ಹೊರಟವರು, ರಜೆಯ ಸವಿಯ ಬದಲು ಮಳೆಯಿಂದ ರಕ್ಷಣೆ ಪಡೆಯಲು ಹೆಣಗಾಡಿದರು. ತಂಗುದಾಣಗಳಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರು, ಚಳಿಯಿಂದ ನಡುಗುವಂತಾಯಿತು.

ಶೇಷಾದ್ರಿಪುರ, ಮಲ್ಲೇಶ್ವರ, ಯಶವಂತಪುರ ವಿಧಾನಸೌಧ, ಎಂ.ಜಿ.ರಸ್ತೆ, ಶಾಂತಿನಗರ ಸುತ್ತಮುತ್ತ ಮಧ್ಯಾಹ್ನದ ಸಮಯದಲ್ಲೇ ದಟ್ಟ ಮೋಡ ಕವಿದು ಬಿರುಸಾಗಿ ಮಳೆ ಸುರಿಯಿತು. ಮತ್ತಿಕೆರೆಯಲ್ಲಿ ಚಳಿ ವಾಹನ ದಟ್ಟಣೆ ಹೆಚ್ಚಾಗಿತ್ತು.

ರಾಜರಾಜೇಶ್ವರಿ ನಗರ ಸುತ್ತ-ಮುತ್ತಲಿನಲ್ಲಿ ಮಧ್ಯಾಹ್ನ 3 ಗಂಟೆಗೆ ಆರಂಭವಾದ ತುಂತುರು ಮಳೆ ಸಂಜೆ 6 ಗಂಟೆ ನಂತರ ತುಸು ಬಿರುಸಾಯಿತು. ಮೋಡಕವಿದ ವಾತಾವರಣದ ಜೊತೆಗೆ, ಗಾಳಿಯಲ್ಲಿ ತೇವಾಂಶವೂ ಹೆಚ್ಚಾಗಿದ್ದ-ರಿಂದ, ಚಳಿ ಹೆಚ್ಚಾಗಿತ್ತು.

ಪೀಣ್ಯ ದಾಸರಹಳ್ಳಿಯಲ್ಲಿ ಬೆಳಿಗ್ಗೆ ಎಂಟು ಗಂಟೆಯವರೆಗೆ ತುಂತುರು ಮಳೆ ಸುರಿಯುತ್ತಿತ್ತು, ಮಧ್ಯಾಹ್ನ 3 ಗಂಟೆಯ ಬಳಿಕ ಎಲ್ಲಾ ಭಾಗಗಳಲ್ಲಿ ಮಳೆ ತುಸು ಬಿರುಸಾಯಿತು. ಮಳೆ ಏರಿದಂತೆ ಚಳಿಯೂ ಹೆಚ್ಚಾಯಿತು. ರಜೆ ದಿನಗಳಲ್ಲೂ ವಾಹನಗಳ ದಟ್ಟಣೆಯಿಂದ ಗಿಜಿಗುಡುತ್ತಿದ್ದ ರಾಷ್ಟ್ರೀಯ ಹೆದ್ದಾರಿ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಸೋನೆ ಮಳೆಯ ಕಾರಣದಿಂದ ವಾಹನದಟ್ಟಣೆ ಕಡಿಮೆ ಇತ್ತು.

ಬೊಮ್ಮನಹಳ್ಳಿ, ಎಚ್‌ಎಸ್‌ಆರ್ ಬಡಾವಣೆ, ಹೊಂಗಸಂದ್ರ, ಪರಪ್ಪನ ಅಗ್ರಹಾರ, ಬಿಳೇಕಹಳ್ಳಿ ಸೇರಿದಂತೆ ಹಲವೆಡೆ ಮಳೆಯಾಯಿತು. ಬೆಳಿಗ್ಗೆಯಿಂದ ಮೋಡದ ವಾತಾವರಣದ ನಡುವೆ ಆಗಾಗ ತುಂತುರು ಮಳೆ ಜಿನುಗುತ್ತಿತ್ತು. ಸಂಜೆ 4 ಗಂಟೆಯಲ್ಲಿ ಹದಿನೈದು ನಿಮಿಷ ಬಿರುಸಿನ ಮಳೆಯಾಯಿತು. ಈ ವೇಳೆ ಹೊಸೂರು ರಸ್ತೆ ಮತ್ತು ಬೇಗೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿತ್ತು.

ನಗರದಾದ್ಯಂತ ಭಾನುವಾರ ಕನಿಷ್ಠ 10 ರಿಂದ 17.5 ಮಿ.ಮೀವರೆಗೆ ಮಳೆಯಾಗಿದೆ. ಮಹದೇವಪುರ ವಲಯದ ಎಚ್‌ಎಎಲ್ ವಿಮಾನ ನಿಲ್ದಾಣ, ಆರ್‌ಆರ್‌ನಗರ ವಲಯದ ಹೆಮ್ಮಿಗೆಪುರ, ಬೊಮ್ಮನಹಳ್ಳಿ ವಲಯದ ಗೊಟ್ಟಿಗೆರೆ ಪ್ರದೇಶದಲ್ಲಿ ಸುಮಾರು 17 ಮಿ.ಮೀನಷ್ಟು ಮಳೆಯಾಗಿದೆ. ವಿದ್ಯಾಪೀಠ, ಕೋರಮಂಗಲ, ಬಿಳೇಕಹಳ್ಳಿ ವ್ಯಾಪ್ತಿಯಲ್ಲಿ 16 ಮಿ.ಮಿ ಮಳೆಯಾದ ವರದಿಯಾಗಿದೆ.



ಜಾಲಹಳ್ಳಿ ಕ್ರಾಸ್‌ನಲ್ಲಿ ಜನರು ಮಳೆಯಿಂದ ರಕ್ಷಿಸಿಕೊಳ್ಳಲು ಕೊಡೆ ಆಸರೆ ಪಡೆದರು ಪ್ರಜಾವಾಣಿ ಚಿತ್ರ

ಪ್ರದೇಶ	ಪ್ರಮಾಣ (ಮಿ.ಮೀ)
ಎಚ್‌ಎಎಲ್ ವಿಮಾನ ನಿಲ್ದಾಣ	17.50
ಹಮ್ಮಿಗೆಪುರ	17
ಗೊಟ್ಟಿಗೆರೆ	17
ವಿದ್ಯಾಪೀಠ	16.50
ಬಿಳೇಕಹಳ್ಳಿ	16.50
ಕೋರಮಂಗಲ	16
ಅರಕೆರೆ	15.50
ಮಾರತ್‌ಹಳ್ಳಿ	15
ಬೊಮ್ಮನಹಳ್ಳಿ	15
ದೊಡ್ಡನೆಕ್ಕುಂದಿ	14.5
ಅಂಜನಾಪುರ	14
ಎಚ್‌ಎಸ್‌ಆರ್ ಲೇಔಟ್	11
ಹಗದೂರು	11.50
ಹಂಪಿನಗರ	10

ಸೋಂಪುರ: ರಾಗಿ ಬೆಳೆ ಕಟಾವಿಗೆ ಅಡ್ಡಿಯಾದ ಮಳೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಫೆಂಜಲ್ ಚಂಡಮಾರುತದ ಪರಿಣಾಮದಿಂದ ಸೋಂಪುರ ಹೋಬಳಿಯಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ರಾಗಿ ಬೆಳೆ ಕಟಾವಿಗೆ ಅಡ್ಡಿಯಾಗಿದೆ.

ಈ ಬಾರಿ ಉತ್ತಮ ಮಳೆಯಾಗಿದ್ದ-ರಿಂದ, ಹೋಬಳಿಯಾದ್ಯಂತ ಹೆಚ್ಚಾಗಿ ರಾಗಿ ಬಿತ್ತನೆ ಮಾಡಲಾಗಿತ್ತು. ಈಗ ರಾಗಿ ಬೆಳೆ ಕೊಯ್ಲಿಗೆ ಬಂದಿದೆ. ಕೆಲವೆಡೆ ತೆನೆ ಕೊಯ್ಲು ಹೊಂದಿದ್ದ ರಾಶಿ ಹಾಕಲಾಗಿದೆ.

ಈಗ ಮಳೆ ಬರುತ್ತಿರುವುದರಿಂದ, ರೈತರು ತೆನೆ ರಾಶಿ ಮೇಲೆ ಟಾರ್ಪಾಲು ಹೊದಿಸಿದ್ದಾರೆ. ಬೆಳೆ ಕಟಾವಾದ ಹೊಲಗಳಲ್ಲಿ ತೆನೆ ಉದುರುತ್ತಿದೆ.

ಸೋಂಪುರ ಹೋಬಳಿಯಲ್ಲಿ ಈ ಸಾಲಿನಲ್ಲಿ 5,072 ಹೆಕ್ಟೇರ್ ನಲ್ಲಿ ರಾಗಿ, 64.06 ಹೆಕ್ಟೇರ್ ನಲ್ಲಿ ತೊಗರಿ, 96 ಹೆಕ್ಟೇರ್ ನಲ್ಲಿ ಅವರೆ ಬಿತ್ತನೆ ಆಗಿದೆ. ಅಕ್ಟೋಬರ್ ತಿಂಗಳಾಂತ್ಯದಲ್ಲಿ ನಿರಂತರವಾಗಿ ಮಳೆ ಸುರಿದ ಕಾರಣ, ಹಲವೆಡೆ ರಾಗಿ ಪೈರು ನೆಲ-ಕ್ಕುರುಳಿತ್ತು. ಇದು ತುಸು ಇಳುವರಿ ಕುಂಠಿತವಾಗಲು, ಹುಲ್ಲು ಹಾಳಾಗಲು ಕಾರಣವಾಯಿತು.

ತೆನೆ ಒಣಗಿದ ಮೇಲೆ ರಾಗಿ ಕೊಯ್ಲಿಗೆ ರೈತರು ಮುಂದಾಗಿದ್ದರು. ಒಂದಷ್ಟು ರೈತರು ಕೊಯ್ಲು ಮುಗಿಸಿದ್ದರು. ಇನ್ನೂ ಹೆಚ್ಚಿನ ರೈತರು ಕೊಯ್ಲು ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. ಈಗ ಜಡಿ ಮಳೆಯಿಂದಾಗಿ ಕೊಯ್ಲಿಗೆ ತೊಂದರೆ ಆಗಿದೆ. ಕೃಷಿ ಕಾರ್ಮಿಕರ ಕೊರತೆ ಹಾಗೂ ಲಭ್ಯವಿರುವ ಕಾರ್ಮಿಕರು ಹೆಚ್ಚು ಕೂಲಿ ಕೇಳುತ್ತಿರುವುದರಿಂದ, ಹಲವು ರೈತರು ಯಂತ್ರಗಳ ಮೊರೆ ಹೋಗಿದ್ದಾರೆ. ಆದರೂ, ಕಟಾವು ಮಾಡಿದ ರಾಗಿಯ ತೆನೆಗಳನ್ನು ಮಳೆಯಿಂದ ರಕ್ಷಿಸಿಕೊಳ್ಳು-ವುದೇ ರೈತರಿಗೆ ಕಷ್ಟವಾಗಿದೆ.

'ಹೋಬಳಿಯಲ್ಲಿ ಮುಂಗಾರಿನಲ್ಲಿ ಉತ್ತಮ ಮಳೆಯಾಗಿದ್ದರಿಂದ, ರಾಗಿ ಉತ್ತಮ ಇಳುವರಿ ಬಂದಿದೆ. ಜಾನುವಾರುಗಳಿಗೆ ಮೇವು ಅಧಿಕವಾಗಿ ಸಿಗಲಿದೆ. ಮಳೆ ನಿಂತು, ಬಿಸಿಲು ಬಂದ ಮೇಲೆ ರೈತರು ಕಟಾವು ಮಾಡಿಕೊ-ಳ್ಳಬಹುದು' ಎಂದು ಸೋಂಪುರ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ರವಿಕುಮಾರ್ ಸಲಹೆ ನಿಡಿದರು.



ಕಟಾವು ಆಗದೇ ಹೊಲದಲ್ಲೇ ಉಳಿದಿರುವ ರಾಗಿ ಫಸಲು

ಅಮ್ಮನ ನೆನಪಲ್ಲಿ 'ಲೀಲಾವತಿ ದೇಗುಲ'

• ಮಹಾಂತೇಶ್.ಎಂ.ನೆಗಳೂರ

ನೆಲಮಂಗಲ: ವರ್ಷದ ಹಿಂದೆ ನಿಧನರಾದ ಮೇರು ನಟಿ ಎಂ.ಲೀಲಾವತಿ ಅವರ ಹೆಸರಿನಲ್ಲಿ ₹1 ಕೋಟಿ ವೆಚ್ಚದಲ್ಲಿ ಕಲಾಮಾತೆಯ ಮಂದಿರ 'ಲೀಲಾವತಿ ದೇಗುಲ'ವನ್ನು ಅವರ ಪುತ್ರ ವಿನೋದ್‌ರಾಜ್ ನಿರ್ಮಿಸಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ.

ನೆಲಮಂಗಲ ತಾಲ್ಲೂಕಿನ ಸೋಲ-ದೇವನಹಳ್ಳಿಯಲ್ಲಿ ಒಂದು ಎಕರೆ ಪ್ರದೇಶದಲ್ಲಿ ಲೀಲಾವತಿಯವರ ಅಪರೂಪದ ಚಿತ್ರ ಸಂಪುಟಗಳ ಕಲಾತ್ಮಕವಾದ ಭವ್ಯ ಮಂದಿರ (ಸಮಾಧಿ) ನಿರ್ಮಾಣಗೊಂಡಿದೆ. 'ಒಳ ಆವರಣದ ಸುತ್ತಲೂ ಅಪರೂಪದ 62 ಚಿತ್ರಪಟಗಳನ್ನು ಅಳವಡಿಸಲಾಗಿದೆ. ಪಕ್ಕದಲ್ಲಿ ಅಮ್ಮನ ಆಸೆಯಂತೆ ಚಿಕ್ಕ ರಂಗಮಂದಿರ ನಿರ್ಮಿಸಲಾಗಿದೆ. ಸಣ್ಣ ಸಣ್ಣ ರಂಗ ಪ್ರದರ್ಶನ-ಗಳು, ಸಭೆ ಸಮಾರಂಭಕ್ಕೆ ಅವಕಾಶ ಕಲ್ಪಿಸಲಾಗಿದೆ' ಎಂದು ಲೀಲಾವತಿ ಅವರ ಪುತ್ರ, ನಟ ವಿನೋದ್‌ರಾಜ್ ಮಾಹಿತಿ ನೀಡಿದರು.

ನೆಲಮಂಗಲ ಪಟ್ಟಣದಿಂದ ಸುಮಾರು 8 ಕಿ.ಮೀ. ದೂರದಲ್ಲಿ ಪ್ರಕೃತಿ ಮಡಿಲಲ್ಲಿ ಮಂದಿರವಿರುವು ರಿಂದ ನಿತ್ಯ ಮಂದಿರ ವೀಕ್ಷಣೆಗೆ ಬರುವವರಿಗಾಗಿ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಮಂದಿರ ತೆರೆದಿರುತ್ತದೆ. ಸುಸಜ್ಜಿತ ಪಾಕಶಾಲೆ, ಭೋಜನಾಲಯವಿದೆ. ಅಭಿಮಾನದಿಂದ ಅಮ್ಮನ ಮಡಿಲಲ್ಲಿ ಒಂದೆರಡು ದಿನ ಕಳೆ-ಯಬೇಕೆನ್ನುವವರಿಗೆ ವಸತಿ ವ್ಯವಸ್ಥೆಗಾಗಿ ಸುಸಜ್ಜಿತ ಎರಡು ಕೊಠಡಿಗಳನ್ನು ಹಾಗೂ ಉದ್ಯಾನವನ್ನು ನಿರ್ಮಿಸಲಾಗು-ತ್ತಿದೆ ಎಂದು ತಿಳಿಸಿದರು.

ತುಳು, ತೆಲುಗು, ತಮಿಳು, ಮಲೆಯಾಳ, ಕನ್ನಡ ಭಾಷಾ ಚತುರೆ ಲೀಲಾವತಿ ಅವರು ದಕ್ಷಿಣ ಭಾರತದ ಶ್ರೇಷ್ಠ ನಟರಾದ ಡಾ.ರಾಜ್‌ಕುಮಾರ್, ಎನ್‌ಟಿಆರ್, ಎಂಜಿಆರ್, ಶಿವಾಜಿಗಣೇಶನ್ ಅವರೊಂದಿಗೆ ಅಭಿನಯಿಸಿದ್ದರು. ಯಕ್ಷಗಾನದಲ್ಲಿ ಪಾರಂಗತರು, ಸಂಗೀತ, ಪ್ರಾಣಿ ಪ್ರಿಯರು. ಅದಮ್ಯ ಜೀವನ ಪ್ರೀತಿಯ ಲೀಲಮ್ಮರಿಗೆ ಕೃಷಿ ಎಂದರೆ ಬಲು ಪ್ರೀತಿ. ವಿಶೇಷ ಭತ್ತದ ತಳಿಗಳ ಪರಿಷ್ಕರಣೆಯನ್ನು ನಡೆಸಿದ ಅಮ್ಮನಿಗೆ ಪಶು ಸಂಗೋಪನೆ, ಗ್ರಾಮೀಣ ಪ್ರಕೃತಿ ಮಡಿಲ ಬದುಕು ಆಪ್ಯಾಯಮಾನವಾದದ್ದು. ಅವರ ಆಕಾಂಕ್ಷೆಯಂತೆ ಸೋಲದೇವನ-ಹಳ್ಳಿಯಲ್ಲಿ ಜನ ಹಾಗೂ ಜಾನುವಾರು ಆಸ್ಪತ್ರೆಗಳನ್ನು ನಿರ್ಮಿಸಿ ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗಿದೆ. ಬಡ ಕಲಾವಿದರಿಗೆ ಮಾಸಾಶನದ ರೀತಿಯಲ್ಲಿ ಪ್ರತಿ ತಿಂಗಳು ಸಹಾಯಧನ ಕಳಿಸಲಾ-ಗುತ್ತಿದೆ ಎಂದು ವಿನೋದ್ ರಾಜ್ ವಿವರ ನೀಡಿದರು.

'ತಮಿಳುನಾಡಿನ ಪುದುಪ್ಪಾಕಂ ಗ್ರಾಮದಲ್ಲಿಯೂ ₹ 30 ಲಕ್ಷ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಿಸುತ್ತಿದ್ದೇವೆ. ಅಮ್ಮನ ಋಣ ಸಂದಾಯಕ್ಕೆ ನನಗೆ ಸಿಕ್ಕ ಅವಕಾಶವಿದು' ಎನ್ನುತ್ತಾರೆ ವಿನೋದ್ ರಾಜ್.



ನಟಿ 'ಲೀಲಾವತಿ ದೇಗುಲ'ದ ಮುಂದೆ ಪುತ್ರ ವಿನೋದ್ ರಾಜ್

ಡಿ.5ಕ್ಕೆ ಲೋಕಾರ್ಪಣೆ

ಲೀಲಾವತಿ ದೇಗುಲ ಡಿ.5ರಂದು ಲೋಕಾರ್ಪಣೆಗೊಳ್ಳಲಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಭಿಮಾನಿಗಳು, ಚಿತ್ರನಟರು ಕಲಾವಿದರು ಭಾಗವ-ಹಿಸಲಿದ್ದಾರೆ. ಲೀಲಾವತಿಯವರು ಅಗಲಿದ ದಿನವಾದ ಡಿ.8ರಂದು ವರ್ಷದ ಕಾರ್ಯವು ನಡೆಯಲಿದೆ.

ವಿಚಾರಸಂಕಿರಣ

ಬೆಂಗಳೂರು: ಭಾರತೀಯ ವಿದ್ಯಾಭವನದ ವಜ್ರಮಹೋತ್ಸವದ ಅಂಗವಾಗಿ ಡಿಸೆಂಬರ್ 7ರಂದು ಭಾರತೀಯ ವಿದ್ಯಾಭವನದ ಕೆ.ಆರ್.ಜಿ. ಸಭಾಂಗಣದಲ್ಲಿ 'ಜಾನಪದ ಹಾಗೂ ಆದಿವಾಸಿಗಳ ಇಂದಿನ ಸ್ಥಿತಿಗತಿಗಳ' ಬಗ್ಗೆ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

'ವಿಚಾರಸಂಕಿಣರದಲ್ಲಿ ಜಾನಪದ ಮತ್ತು ಆದಿವಾಸಿ ಕಲೆಯ ವಿನ್ಯಾಸ, ಐತಿಹಾಸಿಕ ಹಾಗೂ ಪೌರಾಣಿಕ ವಿಷಯಗಳ ಅನನ್ಯತೆ ಕುರಿತು ಚರ್ಚೆ, ಪ್ರತಿಭಾವಂತ ಕಲಾವಿದರ ಜೊತೆಗೆ ಸಂವಾದ, ಕಥಾವಾಚನ ನಡೆಯಲಿದೆ' ಎಂದು ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ತಿಳಿಸಿದ್ದಾರೆ.

ಡಿ.4ರೊಳಗೆಹೆಸರುನೋಂದಾಯಿಸಿಕೊಳ್ಳಬೇಕು' ಎಂದು ಮಾಹಿತಿ ನೀಡಿದ್ದಾರೆ. ಮಾಹಿತಿಗೆ: 94488 04905

ವಕ್ಫ್ ಮಂಡಳಿ ವಿಸರ್ಜಿಸಿದ ಆಂಧ್ರ

ಅಮರಾವತಿ (ಪಿಟಿಐ): ಉತ್ತಮ ಆಡಳಿತಕ್ಕೆ ಉತ್ತೇಜನ ನೀಡುವ ಹಾಗೂ ವಕ್ಫ್ ಆಸ್ತಿಗಳನ್ನು ರಕ್ಷಿಸುವ ಉದ್ದೇಶದಿಂದ 'ಆಂಧ್ರಪ್ರದೇಶ ರಾಜ್ಯ ವಕ್ಫ್ ಮಂಡಳಿ'ಯನ್ನು ಸರ್ಕಾರವು ವಿಸರ್ಜಿಸಿದೆ.

ವಕ್ಫ್ ಮಂಡಳಿಯನ್ನು ರಚಿಸಿ 2023ರ ಅಕ್ಟೋಬರ್ 21ರಂದು ಹೊರಡಿಸಿದ್ದ ಆದೇಶವನ್ನು ಸರ್ಕಾರವು ಹಿಂಪಡೆದಿದೆ.

ಕೆಲವು ರಿಟ್ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕೂಡ ಪರಿಗಣಿಸಿ ಈ ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ.


'ಕಲೆಯ ಮೂಲಕ ರಾಷ್ಟ್ರೋತ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಾ ಕ್ಷೇತ್ರದ ವಿವಿಧ ಸ್ತರಗಳಲ್ಲಿ ಭಾರತೀಯ ಚಿಂತನೆಯ ಆಧಾರದಲ್ಲಿ ಪರಿಣಾಮಕಾರಿಯಾಗಿ ಕಾರ್ಯ-ನಿರ್ವಹಿಸಿ, ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲಾಗುವುದು' ಎಂದು ಸಂಸ್ಕಾರ ಭಾರತೀ ಸಂಘಟನೆಯ ಅಖಿಲ ಭಾರತ ಮಟ್ಟದ ಅಧ್ಯಕ್ಷ ಮೈಸೂರು ಮಂಜುನಾಥ್ ಹೇಳಿದರು.

ಇತ್ತೀಚೆಗೆ ಜೈಪುರದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅವರು, ಭಾನುವಾರ ಇಲ್ಲಿ ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತದ ಸರ್ವಸಾಧಾರಣ ಸಭೆ ನಡೆಸಿದರು. ಅವರು ಮೂರು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದು, ಇದೇ ಮೊದಲ ಭಾರಿಗೆ ಕರ್ನಾಟಕದವರಿಗೆ ಅಖಿಲ ಭಾರತ ಮಟ್ಟದಲ್ಲಿ ಅಧ್ಯಕ್ಷ ಸ್ಥಾನ ದೊರೆತಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೈಸೂರು ಮಂಜುನಾಥ್, 'ಸಂಘಟನೆ ರಾಷ್ಟ್ರೀಯ ದೃಷ್ಟಿಕೋನದೊಂದಿಗೆ 40 ವರ್ಷಗಳಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಕಲಾವಿದರು, ಕಲಾ ವಿಮರ್ಶಕರು, ಸಾಹಿತಿಗಳು ಸೇರಿ ವಿವಿಧ ವರ್ಗದವರು ತಮ್ಮ ಅಹಂ ಹಾಗೂ ಹುದ್ದೆಗಳ ಪ್ರತಿಷ್ಠೆ ಬದಿಗಿಟ್ಟು, ಕಲಾ ಕ್ಷೇತ್ರದ ವಿಕಾಸಕ್ಕೆ ಶ್ರಮಿಸುತ್ತಿದ್ದಾರೆ' ಎಂದರು. ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತದ ಅಧ್ಯಕ್ಷ ಸುಚೇಂದ್ರ ಪ್ರಸಾದ್, ಕಾರ್ಯಾಧ್ಯಕ್ಷ ಗುಬ್ಬಿಗೂಡು ರಮೇಶ್ ಉಪಸ್ಥಿತರಿದ್ದರು.



ಮೈಸೂರು ಮಂಜುನಾಥ್

ಅಪಘಾತ: ಪ್ರೊಬೇಷನರಿ ಐಪಿಎಸ್ ಅಧಿಕಾರಿ ಸಾವು

ಪ್ರಜಾವಾಣಿ ವಾರ್ತೆ

ಹಾಸನ: ಚಾಲಕನ ನಿಯಂತ್ರಣ ತಪ್ಪಿದ ಪೊಲೀಸ್ ಜೀಪ್ ಪಕ್ಕದ ಮನೆಗೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡಿದ್ದ ಪ್ರೊಬೇಷನರಿ ಐಪಿಎಸ್ ಅಧಿಕಾರಿ ಮೃತಪಟ್ಟ ಘಟನೆ ಭಾನುವಾರ ತಾಲ್ಲೂಕಿನ ಕಿತ್ತಾನೆ ಬಳಿ ನಡೆದಿದೆ.

ಮಧ್ಯಪ್ರದೇಶದ ಸಿಂಗ್ರುಲಿ ಜಿಲ್ಲೆಯ ದೋಸಾರ್ ಗ್ರಾಮದ ಹರ್ಷಬರ್ಧನ್ (26) ಮೃತರು. ಜೀಪ್ ಚಾಲಕ, ಹಾಸನದ ಡಿಎಆರ್ ಕಾನ್‌ಸ್ಟೆಬಲ್ ಮಂಜೇಗೌಡ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೈಸೂರಿನಿಂದ ಹಾಸನಕ್ಕೆ ಬರುತ್ತಿದ್ದ ಮಹೇಂದ್ರ ಬೊಲೆರೊ ಜೀಪ್ ಟೈಯರ್ ಸ್ಫೋಟದಿಂದ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದ ತಡೆಕಂಬಗಳಿಗೆ ಡಿಕ್ಕಿ ಹೊಡೆದು ನಂತರ ತೆಂಗಿನ ಮರಕ್ಕೆ ಡಿಕ್ಕಿಯಾಗಿದ್ದು, ಪಕ್ಕದ ಮನೆಗೆ ತಾಗಿ ನಿಂತಿದೆ. ಅಪಘಾತ ಸಂಭವಿ-ಸುತ್ತಿದ್ದಂತೆ ಆಂಬುಲೆನ್ಸ್ ಮೂಲಕ ಹರ್ಷಬರ್ಧನ್ ಅವರನ್ನು ಹಾಸನದ ಖಾಸಗಿ ಆಸ್ಪತ್ರೆಗೆ ಕರೆತಂದು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಯಿತು. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಅವರನ್ನು ಝೀರೊ ಟ್ರಾಫಿಕ್‌ನಲ್ಲಿ ಬೆಂಗಳೂರಿಗೆ ಕರೆದೊಯ್ಯಲು ಸಿದ್ಧತೆ ಮಾಡಿ-ಕೊಳ್ಳಲಾಗಿತ್ತು. ಅಷ್ಟರಲ್ಲಿಯೇ ಹರ್ಷಬರ್ಧನ್ ಮೃತಪಟ್ಟಿರುವುದಾಗಿ ವೈದ್ಯರು ಪ್ರಕಟಿಸಿದರು.

ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ, ಎಸ್ಪಿ ಮೊಹಮದ್ ಸುಜೀತಾ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು.



ಹರ್ಷಬರ್ಧನ್

ಬೆಂಗಳೂರಿನ ಶಿವಕುಮಾರ್ ರಾಸು ಪ್ರಥಮ

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣದಲ್ಲಿ ಕರುನಾಡ ರೈತ ಗೋಪಾಲಕರ ಸಂಘ ಆಯೋಜಿಸಿದ್ದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರಿನ ಇಟ್ಟಮಡುವಿನ ಸುಧಾ ಡೈರಿ ಫಾರಂನ ಶಿವಕುಮಾರ್ ಅವರ ಆಕಳು 48.86ಕೆಜಿ ಹಾಲು ಕರೆಯುವ ಮೂಲಕ ಪ್ರಥಮ ಸ್ಥಾನ ಗಳಿಸಿ ₹1ಲಕ್ಷ ನಗದು ಬಹುಮನ ಮತ್ತು ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ.

ಕಗ್ಗಲಿಪುರದ ನಾಗರಾಜರೆಡ್ಡಿ ಅವರಿಗೆ ಸೇರಿದ ರಾಸು 45.6 ಕೆ.ಜಿ(ದ್ವಿತೀಯ), ನಾಗರಬಾವಿಯ ಸತೀಶ್ ಅವರ ರಾಸು 45.3 ಕೆಜಿ (ತೃತೀಯ), ಗುಂಜೂರಿನ ಸತೀಶ್ ರೆಡ್ಡಿ ಅವರಿಗೆ ಸೇರಿದ ರಾಸು 43.5 ಕೆ.ಜಿ (ನಾಲ್ಕನೇ), ಆನೇಕಲ್ ತಾಲ್ಲೂಕಿನ ಕೂನಮಡಿವಾಳದ ಶರತ್ ಸೂರ್ಯ ಅವರ ರಾಸು 43.5 ಕೆ.ಜಿ (5ನೇ ಸ್ಥಾನ) ಪಡೆದುಕೊಂಡಿದೆ.

ದ್ವಿತೀಯ ಸ್ಥಾನಕ್ಕೆ ₹75 ಸಾವಿರ, ತೃತೀಯ ಸ್ಥಾನ ₹50 ಸಾವಿರ, ನಾಲ್ಕನೇ ಸ್ಥಾನಕ್ಕೆ ₹30 ಸಾವಿರ ಮತ್ತು 5ನೇ ಸ್ಥಾನ ಪಡೆದ ರಾಸುವಿಗೆ ₹20 ಸಾವಿರ ನಗದು ಬಹುಮಾನ ಮತ್ತು ಟ್ರೋಫಿ ವಿತರಿಸಲಾಯಿತು.

ಶಾಸಕ ಬಿ.ಶಿವಣ್ಣ ಅವರು ಬಹುಮಾನ ಮತ್ತು ಟ್ರೋಫಿ ವಿತರಿಸಿದರು. ಸಂಘದ ಮುಖಂಡ ಪಾರ್ಥಸಾರಥಿ, ರೈತರಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಸ್ಪರ್ಧೆ ಆಯೋಜಿಸಲಾಗಿತ್ತು ಎಂದರು.

ಕರುನಾಡು ರೈತ ಗೋಪಾಲಕರ ಸಂಘ, ಪಶುಪಾಲನಾ ಇಲಾಖೆ ಹಾಗೂ ಬೆಂಗಳೂರು ಹಾಲು ಒಕ್ಕೂಟದ ಸಹಯೋಗದಲ್ಲಿ ರಾಜ್ಯ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಮೂರು ದಿನಗಳ ಕಾಲ ಆಯೋಜಿಸಲಾಗಿತ್ತು.

ನಗರದಲ್ಲಿ ಇಂದು

'ಸುಸ್ಥಿರ ಭವಿಷ್ಯಕ್ಕಾಗಿ ವರ್ತುಲ ಆರ್ಥಿಕತೆ ಮತ್ತು ಕೃತಕ ಬುದ್ಧಿಮತ್ತೆ' ಅಂತರರಾಷ್ಟ್ರೀಯ ಸಮ್ಮೇಳನ: ಭಾಗವಹಿಸುವವರು: ರೇವಣೂರು ಹರಿಕೃಷ್ಣ, ಹೇಮಾ ದವೆ, ಕುಮಾರ್ ಗಂಗ್ವಾನಿ, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಒಂಬತ್ತನೇ ಬಡಾವಣೆ, ಜಯನಗರ, ಬೆಳಿಗ್ಗೆ 11.15

ವಿಶ್ವ ಏಡ್ಸ್ ಜಾಗೃತಿ ದಿನ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಸಮಗ್ರ ಆರೋಗ್ಯ ಶಿಬಿರದ ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಮುನಿರತ್ನ, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಸ್ಥಳ: ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್, ಯಶವಂತಪುರ, ಬೆಳಿಗ್ಗೆ 11.30

ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಜಯಕರ ಎಸ್.ಎಂ., ಅಧ್ಯಕ್ಷತೆ: ಅಶೋಕ್ ಕುಮಾರ್ ದಾಶ್, ಸ್ಥಳ: ಎನ್‌ಎಸ್‌ಎಸ್ ಭವನ, ಬೆಂಗಳೂರು ವಿಶ್ವವಿದ್ಯಾಲಯ ಮೈಸೂರು ರಸ್ತೆ, ಸಂಜೆ 4.30

ಕಾಲೇಜು ವಿದ್ಯಾರ್ಥಿಗಳ ನಾಟಕ ಶಿಬಿರ ಸಮಾರೋಪ ಸಮಾರಂಭ, ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ನಟರಾಜ್ ಸಾಗರನಹಳ್ಳಿ, ಅತಿಥಿಗಳು: ಎಂ.ಎಸ್. ಮೃತ್ಯುಂಜಯ್, ಟಿ.ವಿ. ರಾಜು, ಸನ್ಮಾನಿತರು: ಶೇಖರಪ್ಪ ತೆಗ್ಗಿ, 'ಮಂಟೇಸ್ವಾಮಿ ಕಥಾ ಪ್ರಸಂಗ' ನಾಟಕ ಪ್ರದರ್ಶನ: ಪ್ರಸ್ತುತಿ: ಆರ್‌ಪಿಎ ರಂಗಾಂತರ್ಯ ಕಲಾತಂಡ, ಆಯೋಜನೆ: ಆರ್.ಪಿ.ಎ. ಪ್ರಥಮ ದರ್ಜೆ ಕಾಲೇಜು, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ ನಾಲ್ಕನೇ ಟಿ ಬ್ಲಾಕ್, ಸಂಜೆ 5

'ಕ್ಯಾನ್ಸರ್ ಜಾಗೃತಿ' ಉಪನ್ಯಾಸ: ಉದ್ಘಾಟನೆ: ವಿ. ಸತ್ಯನಾರಾಯಣ, ಅಧ್ಯಕ್ಷತೆ: ನಾ. ಶ್ರೀಧರ್, 'ನಮ್ಮ ಜೀವನದಲ್ಲಿ ನಿರ್ನಾಳ ಗ್ರಂಥಿಗಳ ಪಾತ್ರ' ಉಪನ್ಯಾಸ: ಎಸ್.ವಿ. ವೆಂಕಟರಮಣಸ್ವಾಮಿ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ನಗರ ಜಿಲ್ಲೆ ಗಾಂಧಿನಗರ ಕ್ಷೇತ್ರ, ಸ್ಥಳ: ಸಾಯಿವೆಂಕಟ್ ಪಬ್ಲಿಕ್ ಶಾಲೆ, ಮಾಗಡಿ ರಸ್ತೆ, ಸಂಜೆ 5.30

ಗೀತಾ ಜಯಂತಿ ಅಂಗವಾಗಿ 'ಶ್ರೀ ಭಗವದ್ಗೀತಾ' ಪ್ರವಚನ: ಪುರಂದರಾಚಾರ್ಯ ಹಯಗ್ರೀವ, ಆಯೋಜನೆ ಮತ್ತು ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನ, ಉತ್ತರಾದಿಮಠ, ಬಸವನಗುಡಿ, ಸಂಜೆ 6.30

ಸೋಮವಾರ • ಡಿಸೆಂಬರ್ 2, 2024 ಪ್ರಜಾವಾಣಿ

ಹಣ ನೀಡದೆ ವಂಚನೆ: ರೈ ಸೇರಿ ಐವರ ವಿರುದ್ಧ ಬಂಟ್ವಾಳ ಉದ್ಯಮಿ ವರದರಾಜ್ ಆರೋಪ

ನಿರ್ಮಾಪಕ ಅರುಣ್ ರೈ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಿರ್ಮಾಪಕ ಅರುಣ್ ರೈ ಸೇರಿದಂತೆ ಐವರ ವಿರುದ್ಧ ವಂಚನೆ ಆರೋಪದಡಿ ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಂಟ್ವಾಳದ ಉದ್ಯಮಿ ಟಿ. ವರದರಾಜ್ ಅವರಿಗೆ ₹9 ಕೋಟಿ ವಂಚಿಸಿರುವ ಆರೋಪದಡಿ 'ಜೀಟಿಗೆ' ತುಳು ಸಿನಿಮಾದ ನಿರ್ಮಾಪಕ ಅರುಣ್ ರೈ, ಅವರ ಸಹೋದರ ಅರ್ಜುನ್ ರೈ, ಕೆ.ಪಿ.ಶ್ರೀನಿವಾಸ್, ರಘು ಹಾಗೂ ಗೋವಿಂದಪ್ಪ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ತನಿಖೆ ನಡೆಸುತ್ತಿದ್ದು, ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಅರುಣ್ ರೈ

'ಗೇರುಬೀಜ ಸಂಸ್ಕರಣಾ ಘಟಕ ಹೊಂದಿದ್ದ ಉದ್ಯಮಿ ವರದರಾಜ್ ಅವರಿಗೆ ಕೋವಿಡ್ ಸಂದರ್ಭದಲ್ಲಿ ₹25 ಕೋಟಿ ನಷ್ಟವಾಗಿತ್ತು. ನಗರದ ತಾಜ್ ಹೋಟೆಲ್‌ನಲ್ಲಿ ಅರುಣ್ ರೈ ಪರಿಚಯವಾಗಿತ್ತು. ನಂತರ ವರದರಾಜ್‌ಅವರನ್ನುಸಂಪರ್ಕಿಸಿದಅರುಣ್, 'ನನ್ನ ಉದ್ಯಮದಲ್ಲಿ ಹಣ ತೊಡಗಿಸಿದರೆ ನಷ್ಟದಿಂದ ಹೊರಬರಬಹುದು. ಕನ್ನಡದಲ್ಲಿ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶನದಲ್ಲಿ 'ವೀರಕಂಬಳ' ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಅದರ ಲಾಭಾಂಶದಲ್ಲಿ ₹60 ಲಕ್ಷ ರೂಪಾಯಿ ಕೊಡುತ್ತೇನೆ ಎಂದು ನಂಬಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ದೆಹಲಿಯಲ್ಲಿ ₹ 400 ಕೋಟಿ ಹೂಡಿಕೆ ಮಾಡಿದ್ದು, ತಮಿಳುನಾಡಿನ ದಿಂಡಿಗಲ್ ಕಾಳಿ ಸ್ವಾಮಿಯಿಂದ ₹50 ಕೋಟಿ ಹಣ ಬರಬೇಕಿದೆ. ಪಳನಿ ದೇವಾಲಯದ ಟ್ರಸ್ಟ್‌ನಿಂದ ಸಾಲ ಕೊಡಿಸುತ್ತೇನೆ, ಜಾರ್ಖಂಡ್ ಸರ್ಕಾರದಿಂದ ₹50 ಕೋಟಿ ಕೆಲಸದ ಬಿಲ್ ಬಾಕಿ ಇದೆ. ಮಂಗಳೂರಿನ ಗೋದಾಮಿನಲ್ಲಿ ₹ 40 ಕೋಟಿ ಮೌಲ್ಯದಷ್ಟು ಗೋಡಂಬಿ ಇದೆ ಎಂದು ಅರುಣ್ ರೈ ಅವರು ನಂಬಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್, ಎಲೆಕ್ಟ್ರಾನಿಕ್ ಸಿಟಿ, ರಾಜಾಜಿನಗರ, ತುಮಕೂರು, ಮೈಸೂರಿನ ಹಲವು ಕಡೆ ಕಚೇರಿಗಳಿಗೆ ಕರೆದೊಯ್ದು ಅವು ತನ್ನದೇ ಎಂದು ಹೇಳಿಕೊಂಡಿದ್ದರು. ಸ್ಪೇಸ್ ಎಕ್ಸ್ ಕಂಪನಿಯ ಸಂಸ್ಥಾಪಕ ಎಲಾನ್ ಮಸ್ಕ್ ರ ಸಮನ್ವಯಕಾರ ಕೂಡ ನನ್ನ ಕಂಪನಿಯಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಸುಳ್ಳು ಹೇಳಿದ್ದರು' ಎಂದು ಆರೋಪಿಸಿದ್ದಾರೆ.

'ಅರುಣ್ ರೈ ಹೇಳಿದ್ದ ಮಾತುಗಳನ್ನು ನಂಬಿ, ನನ್ನ ಆಪ್ತರು ಸೇರಿದಂತೆ ಹಲವು ಕಡೆಗಳಿಂದ ಸಾಲ ಮಾಡಿ ಸುಮಾರು ₹ 9 ಕೋಟಿ ಹಣವನ್ನು ಅವರ ಕಂಪನಿಗಳಿಗಾಗಿ ಹೂಡಿಕೆ ಮಾಡಿದ್ದೆವು. ಆದರೆ ಅರುಣ್ ರೈ ಮತ್ತು ಆತನ ಸಹಚರರು ನಕಲಿ ಕರಾರು ಪತ್ರಗಳನ್ನು ನೀಡಿದ್ದಾರೆ. ಲಾಭಾಂಶ ನೀಡುವುದಾಗಿ ವಂಚಿಸಿದ್ದಾರೆ' ಎಂದು ವರದರಾಜ್ ದೂರಿದ್ದಾರೆ.

ಸಾಲ ಕೊಡಿಸುವುದಾಗಿ ₹37 ಲಕ್ಷ ವಂಚನೆ

ಅಪರಾಧ ಸುದ್ದಿ

ಬೆಂಗಳೂರು: ಕೋಲ್ಕತ್ತ ಬ್ಯಾಂಕ್‌ನಲ್ಲಿ ₹ 5 ಕೋಟಿ ಸಾಲ ಕೊಡಿಸುವುದಾಗಿ ನಂಬಿಸಿ ಉದ್ಯಮಿಯೊಬ್ಬರಿಂದ ₹ 37.50 ಲಕ್ಷ ಪಡೆದು ವಂಚಿಸಿದ ಆರೋಪದಡಿ ಇಬ್ಬರು ವ್ಯಕ್ತಿಗಳ ವಿರುದ್ಧ ಸಿಸಿಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗದಗದ ಉದ್ಯಮಿ ಪ್ರವೀಣ್ ಕುಮಾರ್ ಬಿ. ಹೂಗಾರ್ ಅವರ ದೂರು ಆಧರಿಸಿ ಸುಕೀರ್ತಿ ಮತ್ತು ಹಿದಾಯತ್ ಉಲ್ಲಾ ಖಾನ್ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಜೀವ ಬೆದರಿಕೆ ಆರೋಪದಡಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ. 'ಪ್ರವೀಣ್ ಅವರು ಶೇಷಾದ್ರಿಪುರದಲ್ಲಿ ಮಾಯಾಂಕ್ ಕನ್‌ಸ್ಟ್ರಕ್ಷನ್ ಅಂಡ್ ಸಪ್ಲೈಯರ್ ಹೆಸರಿನ ಕಂಪನಿ ನಡೆಸುತ್ತಿದ್ದಾರೆ. ಸ್ನೇಹಿತ ನಾಗರಾಜ್ ಮೂಲಕ ಸುಕೀರ್ತಿ ಮತ್ತು ಹಿದಾಯತ್ ಪರಿಚಯವಾಗಿದೆ. ಈ ಇಬ್ಬರೂ ವರ್ಲ್ಡ್ ಫೋಕಸ್ ಈವೆಂಟ್ಸ್ ಅಂಡ್ ಎಂಟರ್‌ಟೈನ್‌ಮೆಂಟ್ ಕಂಪನಿ ನಡೆಸುತ್ತಿದ್ದಾರೆ.

ಪ್ರವೀಣ್ ಸಾಲ ಮಾಡಿಕೊಂಡಿರುವ ವಿಚಾರ ತಿಳಿದ ಆರೋಪಿಗಳು, ಕೋಲ್ಕತ್ತದ ಬ್ಯಾಂಕ್‌ನಲ್ಲಿ ₹ 5 ಕೋಟಿ ಸಾಲ ಕೊಡಿಸುವುದಾಗಿ ಹೇಳಿದ್ದಾರೆ. ಅದಕ್ಕಾಗಿ ₹ 25 ಲಕ್ಷ ನೀಡಬೇಕು ಎಂದಿದ್ದಾರೆ. ಇವರ ಮಾತು ನಂಬಿದ ಪ್ರವೀಣ್, ಹಂತ ಹಂತವಾಗಿ ಆರೋಪಿಗಳ ಖಾತೆಗೆ ₹ 17.50 ಲಕ್ಷ ವರ್ಗಾಯಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೋಲ್ಕತ್ತಗೆ ಹೋಗಿ ಬಂದ ಬಳಿಕ ಸಾಲ ಮಂಜೂರು ವಿಳಂಬವಾಗಲಿದೆ ಎಂದು ಆರೋಪಿಗಳು ಹೇಳಿದ್ದಾರೆ. ಬಳಿಕ ಆರೋಪಿಗಳು ತಮ್ಮ ಸ್ನೇಹಿತರಿಬ್ಬರ ಖಾತೆಯಲ್ಲಿ ಕೋಟ್ಯಂತರ ರೂಪಾಯಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆ ಹಣ ಬಿಡಿಸಿದರೆ ಸಾಲ ತೀರಿಸಲು ಅನುಕೂಲವಾಗುತ್ತದೆ. ಅದಕ್ಕಾಗಿ ₹ 20 ಲಕ್ಷ ಖರ್ಚಾಗಲಿದೆ ಎಂದಿದ್ದಾರೆ. ಹಾಗಾಗಿ ಆರೋಪಿಗಳ ಬ್ಯಾಂಕ್ ಖಾತೆಗೆ ಪುನಃ ₹ 20 ಲಕ್ಷ ವರ್ಗಾವಣೆ ಮಾಡಿದ್ದಾರೆ. ಹಣ ವಾಪಸ್ ನೀಡುವಂತೆ ಪ್ರವೀಣ್ ಕೇಳಿದಾಗ, ಯಾವುದೇ ಹಣ ಕೊಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದಾರೆ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಮೂತ್ರ ವಿಸರ್ಜಿಸಿದ ಬೆಕ್ಕಿನ ಮರಿಗೆ ಕಾಲಿನಿಂದ ಒದ್ದು ಗಾಯ: ದೂರು

ಬೆಂಗಳೂರು: ಮನೆಯಲ್ಲಿ ಮೂತ್ರ ವಿಸರ್ಜನೆ ಮಾಡಿದೆ ಎಂಬ ಕಾರಣಕ್ಕೆ ಬೆಕ್ಕಿನ ಮರಿಯನ್ನು ಕಾಲಿನಿಂದ ಒದ್ದು, ಗಾಯಗೊಳಿಸಲಾಗಿದೆ ಎಂದು ಆರೋಪಿಸಿ ಯುವಕನ ವಿರುದ್ಧ ವ್ಯಕ್ತಿಯೊಬ್ಬರು ನಗರದ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮೊಹಮ್ಮದ್ ಅಫ್ತಾಬ್ ನೀಡಿರುವ ದೂರಿನ ಮೇರೆಗೆ ಮನೀಶ್ ರತ್ನಾಕರ್ ವಿರುದ್ಧ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ, ಭಾರತೀಯ ನ್ಯಾಯ ಸಂಹಿತೆ ಕಾಯ್ದೆ ಸೆಕ್ಷನ್ 325ರಡಿ ಎಫ್‌ಐಆರ್ ದಾಖಲಾಗಿದೆ.

ದೂರುದಾರ ಮೊಹಮ್ಮದ್ ಅಫ್ತಾಬ್ ಹಾಗೂ ಆರೋಪಿ ಮನೀಶ್ ರತ್ನಾಕರ್ ಬಿಟಿಎಂ ಲೇಔಟ್ ಎರಡನೇ ಹಂತದಲ್ಲಿ ಒಂದೇ ಮನೆಯಲ್ಲಿ ವಾಸವಿದ್ದರು. ನವೆಂಬರ್ 26ರಂದು ಮನೀಶ್ ರತ್ನಾಕರ್ ಮನೆಯಲ್ಲಿದ್ದಾಗ ಬೆಕ್ಕು ಮನೆಯಲ್ಲಿ ಮೂತ್ರ ವಿಸರ್ಜನೆ ಮಾಡಿದೆ. ಇದರಿಂದ ಸಿಟ್ಟಿಗೆದ್ದ ಮನೀಶ್, ಬೆಕ್ಕಿಗೆ ಕಾಲಿನಿಂದ ಒದ್ದು ಗಾಯಗೊಳಿಸಿದ್ದಾರೆ. ಬಳಿಕ ಮೊಹಮ್ಮದ್ ಅಫ್ತಾಬ್‌ಗೆ ಕರೆ ಮಾಡಿ, 'ಬೆಕ್ಕು ಮನೆಯಲ್ಲಿ ಗಲೀಜು ಮಾಡಿದೆ, ಅದನ್ನು ಹೊರಗೆ ಬಿಸಾಡು' ಎಂದು ತಿಳಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಮೊಹಮ್ಮದ್ ಅಫ್ತಾಬ್ ಮನೆಗೆ ಬಂದು ನೋಡಿದಾಗ ಬೆಕ್ಕು ಬಕೆಟ್‌ನಲ್ಲಿ ಬಿದ್ದಿರುವುದು ಗಮನಕ್ಕೆ ಬಂದಿದೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ ಎಂಬ ಉಲ್ಲೇಖವೂ ಇದೆ.

'ಸ್ಮಶಾನ ಕಾರ್ಮಿಕರ ಕಾಯಂ ಮಾಡಿದ್ದು ನೆಮ್ಮದಿಯ ನಿರ್ಣಯ'



ಬೆಂಗಳೂರು: 'ಸ್ಮಶಾನ ಕಾರ್ಮಿಕರು ಮತ್ತು ಪೌರ ಕಾರ್ಮಿಕರನ್ನು ಸರ್ಕಾರಿ ನೌಕರರನ್ನಾಗಿ ಮಾಡಿದ್ದು, ಮುಖ್ಯಮಂತ್ರಿಯಾಗಿದ್ದಾಗ ನಾನು ತೆಗೆದುಕೊಂಡ ನೆಮ್ಮದಿ ತರುವ ನಿರ್ಣಯಗಳಲ್ಲಿ ಒಂದು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಬಿ.ಆರ್.ಅಂಬೇಡ್ಕರ್ ರುದ್ರಭೂಮಿ ಹಾಗೂ ವಿದ್ಯುತ್ ಚಿತಾಗಾರ ನೌಕರರ ಸಂಘದ ಸದಸ್ಯರು ಭಾನುವಾರ ನೀಡಿದ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು. 'ಸ್ಮಶಾನ ಹಾಗೂ ಚಿತಾಗಾರದಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಹಿಂದಿನ ಯಾವುದೇ ಸರ್ಕಾರಗಳು ಗುರುತಿಸಿರಲಿಲ್ಲ. ಸ್ಮಶಾನವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿ, ಸ್ಮಶಾನಕ್ಕೆ ಬರುವ ಶವಗಳ ಬಂಧುಗಳ ಜೊತೆ ಅವರ ಬಂಧುಗಳಾಗಿ ಅಂತ್ಯ ಸಂಸ್ಕಾರ ಮಾಡುವ ದೊಡ್ಡ ಕೆಲಸ ಮಾಡುತ್ತಿದ್ದಾರೆ' ಎಂದರು.

'ನನ್ನ ಅಧಿಕಾರದ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು 43 ಸಾವಿರ ಪೌರ ಕಾರ್ಮಿಕರನ್ನು ಕಾಯಂಗೊಳಿಸುವ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಸುಮಾರು 13 ಸಾವಿರ ಪೌರ ಕಾರ್ಮಿಕರನ್ನು ಕಾಯಂಗೊಳಿಸಲಾಗಿತ್ತು' ಎಂದರು. ಸ್ಮಶಾನ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಸೌರಿ ರಾಜ, ಬಿಜೆಪಿ ಮುಖಂಡ ಜಗದೀಶ್ ಹಿರೇಮನಿ, ವಾದಿರಾಜ್ ಉಪಸ್ಥಿತರಿದ್ದರು.

ರಸ್ತೆ ಅಪಘಾತ: ಗಾಯಗೊಂಡಿದ್ದ ಹೆಡ್ ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಮಹೇಶ್ ಅವರು ಭಾನುವಾರ ಸಂಜೆ ಮೃತಪಟ್ಟಿದ್ದಾರೆ.

ನೆಲಮಂಗಲದ ಮಹೇಶ್, ಪೀಣ್ಯ ಕಾನೂನು ಮತ್ತು ಸುವ್ಯವಸ್ಥೆ ಠಾಣೆ ಸೇರಿ ನಗರದ ಹಲವಾರು ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಾಲ್ಕೂವರೆ ವರ್ಷಗಳಿಂದ ಮಾಗಡಿ ರಸ್ತೆ ಸಂಚಾರ ಠಾಣೆಯಲ್ಲಿ ಹೆಡ್‌ಕಾನ್‌ಸ್ಟೆಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನ.19ರಂದು ರಸ್ತೆ ಅಪಘಾತ ಸಂಬಂಧ ವಾಹನವೊಂದರ ವಿಳಾಸ ಪತ್ತೆ ಕಾರ್ಯದಲ್ಲಿ ತೊಡಗಿದ್ದರು. ಹೀಗಾಗಿ ಬೆಳಿಗ್ಗೆ 10.30ರ ಸುಮಾರಿಗೆ ನೆಲಮಂಗಲದಿಂದ ಬೆಂಗಳೂರಿಗೆ ಬರುವಾಗ ಏಕಾಏಕಿ ಎದುರು ಬಂದ ಲಾರಿ ಮಹೇಶ್ ಅವರ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಪರಿಣಾಮ ತಲೆ, ಮುಖ ಹಾಗೂ ಎದೆ ಭಾಗದಲ್ಲಿ ಗಂಭೀರ ಗಾಯಗೊಂಡಿದ್ದರು. ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಗಂಭೀರವಾಗಿ ಪೆಟ್ಟು ಬಿದ್ದಿದ್ದರಿಂದ ಕೆಲ ದಿನಗಳಿಂದ ಕೋಮಾದಲ್ಲಿ ಇದ್ದರು ಎಂದು ಪೊಲೀಸರು ತಿಳಿಸಿದ್ದಾರೆ.


ಡಿ.ಜೆ.ಹಳ್ಳಿಯಲ್ಲಿ ಘಟನೆ: ಮೂರು ಮನೆಗಳಿಗೆ ಹಾನಿ

ಸಿಲಿಂಡರ್ ಸ್ಫೋಟ: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಬಳಕೆ ಸಿಲಿಂಡರ್‌ನಲ್ಲಿ ಅನಿಲ ಸೋರಿಕೆಯಿಂದ ಸಂಭವಿಸಿದ ಸ್ಫೋಟದಲ್ಲಿ ಒಂದೇ ಕುಟುಂಬದ ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ನಗರದ ಡಿ.ಜೆ.ಹಳ್ಳಿಯಲ್ಲಿ ನಡೆದಿದೆ.

ಡಿ. ಜೆ ಹಳ್ಳಿಯ ಮೂರನೇ ಅಡ್ಡ ರಸ್ತೆಯಲ್ಲಿರುವ ಆನಂದ್ ಚಿತ್ರಮಂದಿರದ ಬಳಿಯಿರುವ ಮನೆಯಲ್ಲಿ ಶನಿವಾರ ಸ್ಫೋಟ ಸಂಭವಿಸಿದ್ದು, ಸೈಯದ್ ನಾಸಿರ್ ಪಾಶಾ, ಅವರ ಪತ್ನಿ ತಸೀನಾ ಬಾನು, ಮಕ್ಕಳಾದ ಸೈಯದ್ ಖಾಲಿದ್ (7) ಮತ್ತು ಉಮ್ಮೆ ಕುಲ್ಸೂಮ್ (5) ಗಂಭೀರವಾಗಿ ಗಾಯಗೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.



ಸೈಯದ್ ನಾಸಿರ್ ಪಾಶಾ, ತಸೀನಾ ಬಾನು

ಪಾನಿಪುರಿ ವ್ಯಾಪಾರ ಮಾಡುತ್ತಿದ್ದ ಸೈಯದ್ ನಾಸೀರ್, ಮನೆಯಲ್ಲಿ ಸಿಲಿಂಡರ್‌ನ ರೆಗ್ಯುಲೇಟರ್ ಆನ್ ಮಾಡಿಟ್ಟಿದ್ದರು. ಮನೆಗೆ ವಾಪಸ್ ಬಂದಾಗ ಅನಿಲ ಸೋರಿಕೆ ಆಗಿರುವುದು ಗೊತ್ತಾಗಿದೆ. ತಕ್ಷಣ ರೆಗ್ಯುಲೇಟರ್ ತೆಗೆದು ಮನೆಯಿಂದ ಪತ್ನಿ ಮತ್ತು ಮಕ್ಕಳನ್ನು ಹೊರಗೆ ಕಳಿಸಲು ಮುಂದಾಗಿದ್ದರು. ಅದೇ ವೇಳೆ ಅನಿಲದ ವಾಸನೆ ಹೋಗಲೆಂದು ಫ್ಯಾನ್ ಆನ್ ಮಾಡಿದ್ದರು. ಆದರೆ, ಮನೆಯಲ್ಲೆಲ್ಲ ತುಂಬಿಕೊಂಡಿದ್ದ ಅನಿಲ ಒಮ್ಮೆಲೆ ಸ್ಫೋಟಕ್ಕೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯಲ್ಲಿ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಮನೆಯ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದು, ಚಾವಣಿ ಹಾರಿಹೋಗಿದೆ. ಸ್ಫೋಟದ ತೀವ್ರತೆಗೆ ಅಕ್ಕಪಕ್ಕದಲ್ಲಿದ್ದ ಮೂರು ಮನೆಗಳಿಗೂ ಹಾನಿಯಾಗಿದ್ದು, ಕಿಟಕಿ ಗಾಜುಗಳು ಪುಡಿಯಾಗಿವೆ ಎಂದು ಹೇಳಿದ್ದಾರೆ.

ಸ್ಥಳಕ್ಕೆ ಅಗ್ನಿ ಶಾಮಕ ದಳ ಸಿಬ್ಬಂದಿ ಮತ್ತು ಡಿ.ಜೆ ಹಳ್ಳಿ ಪೊಲೀಸರು ಭೇಟಿ ನೀಡಿದ್ದು ಪರಿಶೀಲನೆ ನಡೆಸಿದ್ದಾರೆ.

ಲಾರಿ ಡಿಕ್ಕಿ: ಫುಡ್ ಡೆಲಿವರಿ ಉದ್ಯೋಗಿ ಸಾವು

ಬೆಂಗಳೂರು: ಸಿಮೆಂಟ್ ಮಿಕ್ಸರ್ ಲಾರಿ ಮತ್ತು ಬೈಕ್ ಮಧ್ಯೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಫುಡ್ ಡೆಲಿವರಿ ಉದ್ಯೋಗಿ ಮೃತಪಟ್ಟಿರುವ ಘಟನೆ ಹುಳಿಮಾವು ಸಮೀಪದ ಬೇಗೂರು ವಿಲೇಜ್ ಜಂಕ್ಷನ್ ಬಳಿ ಶನಿವಾರ ರಾತ್ರಿ ನಡೆದಿದೆ.

ತಮಿಳುನಾಡಿನ ಹರಿಪ್ರಸಾದ್ (45) ಮೃತರು. ಶನಿವಾರ ರಾತ್ರಿ 10 ಗಂಟೆ ಸುಮಾರಿಗೆ ಬೇಗೂರಿನ ವಿಲೇಜ್ ಜಂಕ್ಷನ್ ಬಳಿ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಹರಿಪ್ರಸಾದ್‌ಕುಟುಂಬದೊಂದಿಗೆಬನ್ನೇರುಘಟ್ಟದಲ್ಲಿ ವಾಸವಾಗಿದ್ದರು. ಶನಿವಾರ ರಾತ್ರಿ ಬೇಗೂರಿನ ವಿಲೇಜ್ ಜಂಕ್ಷನ್ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಸಿಮೆಂಟ್ ಮಿಕ್ಸರ್ ಲಾರಿ ಚಾಲಕ ವೇಗವಾಗಿ ಬಂದು ಅವರ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದ. ಪರಿಣಾಮ ಕೆಳಗೆ ಬಿದ್ದ ಹರಿಪ್ರಸಾದ್ ಮೇಲೆ ಲಾರಿ ಹರಿದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ತಡರಾತ್ರಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಂಚಾರ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಪ್ರೇಯಸಿ ಕೊಂದ ಬಳಿಕ ಆತ್ಮಹತ್ಯೆಗೆ ಯತ್ನಿಸಿದ್ದ ಆರವ್ ಹನೋಯ್

ಎರಡು ದಿನ ಶವದ ಪಕ್ಕ ಮಲಗಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಗುವಾಹಟಿ ನಿವಾಸಿ ಮಾಯಾ ಗೊಗೋಯಿ (19) ಕೊಲೆ ಪ್ರಕರಣದ ಆರೋಪಿ ಕೇರಳದ ಆರವ್ ಹನೋಯ್ ಕೃತ್ಯದ ಬಳಿಕ ತಾನೂ ಆತ್ಮಹತ್ಯೆಗೆ ಯತ್ನಿಸಿ ವಿಫಲನಾಗಿದ್ದ ಎಂಬ ವಿಚಾರ ಪೊಲೀಸರ ತನಿಖೆ ವೇಳೆ ಗೊತ್ತಾಗಿದೆ.

ನವೆಂಬರ್ 24ರಂದು ಮಾಯಾ ಅವರನ್ನು ಕೊಲೆ ಮಾಡಿದ ಬಳಿಕ ಆನ್‌ಲೈನ್‌ನಲ್ಲಿ ನೈಲಾನ್ ಹಗ್ಗ ತರಿಸಿಕೊಂಡಿದ್ದ ಆರೋಪಿ ಆತ್ಮಹತ್ಯೆಗೆ ಯತ್ನಿಸಿದ್ದ. ಎರಡು ದಿನ ಮೃತದೇಹದ ಜೊತೆಗೇ ಕಳೆದಿದ್ದ ಆರೋಪಿ, ನವೆಂಬರ್ 26 ರಂದು ಬೆಳಗ್ಗೆ ಕ್ಯಾಬ್ ಬುಕ್ ಮಾಡಿಕೊಂಡು ಮೆಜೆಸ್ಟಿಕ್ ರೈಲು ನಿಲ್ದಾಣಕ್ಕೆ ತೆರಳಿದ್ದ ಎಂಬುದು ತನಿಖೆಯಿಂದ ತಿಳಿದು ಬಂದಿದೆ.

ರೈಲಿನಲ್ಲಿ ವಾರಾಣಸಿ ತಲುಪಿದ ಬಳಿಕ ಮೊಬೈಲ್ ಆನ್ ಮಾಡಿದ್ದ ಆರೋಪಿ, ತನ್ನ ಅಜ್ಜನಿಗೆ ಕರೆ ಮಾಡಿ ಯುವತಿಯನ್ನು ಕೊಲೆ ಮಾಡಿರುವ ವಿಚಾರ ತಿಳಿಸಿದ್ದ. ಪ್ರಕರಣದ ತನಿಖೆ ಆರಂಭಿಸಿದ್ದ ಪೊಲೀಸರು ಅಷ್ಟರಲ್ಲಿ ಆರೋಪಿಯ ಮನೆಗೆ ತಲುಪಿದ್ದರು. ವಾಪಸ್ ಮನೆಗೆ ಬರುವಂತೆ ಅಜ್ಜ ಸೂಚಿಸಿದ್ದರು. ಆರವ್ ನಿವೃತ್ತ ಸೇನಾಧಿಕಾರಿ ಆಗಿರುವ ತನ್ನ ಅಜ್ಜನ ಆಶ್ರಯದಲ್ಲಿ ಬೆಳೆದಿದ್ದ.

'ನ.23 ರಂದು ಪ್ರೇಯಸಿ ಮಾಯಾ ಜತೆ ಅಪಾರ್ಟ್‌ಮೆಂಟ್‌ಗೆ ಬಂದಿದ್ದ ಆರವ್, ಮೊದಲ ದಿನದ ಬಾಡಿಗೆ ಮಾತ್ರ ಪಾವತಿಸಿ, ಉಳಿದ ಮೊತ್ತವನ್ನು ಕೊನೆಯಲ್ಲಿ ಪಾವತಿಸುವುದಾಗಿ ಹೇಳಿದ್ದ. ದಿನಕ್ಕೆ ಸರ್ವಿಸ್ ಅಪಾರ್ಟ್‌ಮೆಂಟ್‌ನ ಕೊಠಡಿ ಬೆಲೆ ₹1,800 ಇತ್ತು. ಕೊಠಡಿ ಪಡೆದ ಬಳಿಕ ಆತನ ಬಳಿ ₹ 2,500 ಉಳಿದಿತ್ತು. ಅದರಲ್ಲಿ ಆನ್‌ಲೈನ್‌ನಲ್ಲಿ ಆಹಾರ ಹಾಗೂ ನೈಲಾನ್ ಹಗ್ಗ ತರಿಸಿಕೊಂಡಿದ್ದ. ಕೊಲೆ ನಂತರ ಆರೋಪಿ ಬಳಿ ಕೇವಲ ₹1,500 ಮಾತ್ರ ಇತ್ತು. ವಾರಾಣಸಿ, ಮಧ್ಯಪ್ರದೇಶಕ್ಕೆ ತೆರಳಿ ಬಳಿಕ ಬೆಂಗಳೂರಿಗೆ ವಾಪಸಾಗಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಹೆಚ್ಚು ಹಣವಿಲ್ಲದ ಕಾರಣ ಪ್ರಯಾಣಿಸಲು ಸಾಧ್ಯವಾಗದೆ ನಗರದ ಹೊರವಲಯದ ದೇವನಹಳ್ಳಿ ಬಳಿ ಇದ್ದ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದ್ದಾರೆ.

'ಸರ್ವಿಸ್‌ಅಪಾರ್ಟ್‌ಮೆಂಟ್‌ಗೆ ಬಂದ ಮೊದಲ ದಿನ ಇಬ್ಬರು ಚೆನ್ನಾಗಿಯೇ ಇದ್ದೆವು. ಮಾಯಾ ಮೊಬೈಲ್‌ನಲ್ಲಿ ಚಾಟಿಂಗ್ ಮಾಡುವುದು ಮತ್ತು ಮಾತನಾಡುವುದು ಮಾಡುತ್ತಿದ್ದಳು. ಇದನ್ನು ಪ್ರಶ್ನೆ ಮಾಡಿದ ನಾನು, ಫೋನ್ ಬಳಕೆ ಕಡಿಮೆ ಮಾಡುವಂತೆ ತಾಕೀತು ಮಾಡಿದ್ದೆ. ಆದರೂ ಮೊಬೈಲ್‌ನಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದ ಕಾರಣಕ್ಕೆ ಕೊಲೆ ಮಾಡಿದ್ದೇನೆ' ಎಂದು ಆರೋಪಿ ಹೇಳಿಕೆ ನೀಡಿದ್ದಾನೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಆರೋಪಿಯನ್ನು ಆರು ದಿನ ಕಸ್ಟಡಿಗೆ ಪಡೆದಿರುವ ಪೊಲೀಸರು, ಕೃತ್ಯವೆಸಗಿದ ಅಪಾರ್ಟ್‌ಮೆಂಟ್‌ಗೆ ಕರೆದೊಯ್ದು ಮಹಜರು ನಡೆಸಿದರು. 'ಕೇರಳದ ಆರವ್ ಆರು ತಿಂಗಳ ಹಿಂದೆ ನಗರಕ್ಕೆ ಬಂದು ಖಾಸಗಿ ಕಂಪನಿಯೊಂದರಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದ. ತಿಂಗಳಿಗೆ ₹ 15 ಸಾವಿರ ಗೌರವಧನ ಪಡೆಯುತ್ತಿದ್ದ. ಮಾಯಾ ಕೌನ್ಸೆಲಿಂಗ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದಳು, ಡೇಟಿಂಗ್ ಆ್ಯಪ್ ಮೂಲಕ ಇಬ್ಬರಿಗೂ ಪರಿಚಯವಾಗಿತ್ತು. ಇಬ್ಬರೂ ತಮ್ಮ ಮೊಬೈಲ್ ಸಂಖ್ಯೆ ವಿನಿಮಯ ಮಾಡಿಕೊಂಡು, ಆತ್ಮೀಯತೆ ಬೆಳೆದಿತ್ತು. ಕೊಲೆಯಾದ ಮಾಯಾ ಸಹೋದರಿ ಎಚ್‌ಎಸ್‌ಆರ್ ಬಡಾವಣೆಯಲ್ಲಿ ವಾಸವಿದ್ದು, ಶುಕ್ರವಾರ ಆಕೆಗೆ ಕರೆ ಮಾಡಿದ್ದ ಮಾಯಾ, ಕಚೇರಿಯಲ್ಲಿ ಪಾರ್ಟಿ ಇರುವ ಕಾರಣ ರಾತ್ರಿ ಬರುವುದಿಲ್ಲ ಎಂದು ತಿಳಿಸಿದ್ದಳು' ಎಂದು ಪೊಲೀಸರು ಹೇಳಿದ್ದಾರೆ.

ನಟಿ ಶೋಭಿತಾ ಆತ್ಮಹತ್ಯೆ

ಸಕಲೇಶಪುರ(ಹಾಸನ ಜಿಲ್ಲೆ): ಕನ್ನಡದ ಕಿರುತೆರೆ ನಟಿ ಶೋಭಿತಾ ಶಿವಣ್ಣ (30) ಅವರು ಹೈದರಾಬಾದ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅವರು ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆರೂರು ಗ್ರಾಮದವರು. ಶಿವಣ್ಣ-ದೇವಕಿ ದಂಪತಿಯ ನಾಲ್ಕನೇ ಪುತ್ರಿ. ಶಿವಣ್ಣ ಕೃಷಿಕರಾಗಿದ್ದಾರೆ. ಶೋಭಿತಾ ಸಕಲೇಶಪುರದಲ್ಲಿ 10ನೇ ತರಗತಿ ವರೆಗೆ ಓದಿದ್ದು, ಬೆಂಗಳೂರಿನಲ್ಲಿ ಪಿಯುಸಿ ವ್ಯಾಸಂಗ ಮಾಡಿದ್ದರು. ಮೊದಲು ಕನ್ನಡ ಕಿರುತೆರೆಯಲ್ಲಿ ನಟಿಸಿದ ಶೋಭಿತಾ ಅವರಿಗೆ ನಟನೆಯೂ ಸಿದ್ಧಿಸಿತ್ತು. 12ಕ್ಕೂ ಅಧಿಕ ಧಾರಾವಾಹಿಗಳಲ್ಲಿ ನಟಿಸಿದ್ದರು. ಜೊತೆಗೆ, ನಾಲ್ಕೈದು ಸಿನಿಮಾಗಳಲ್ಲೂ ನಟಿಸಿದ್ದರು.



ಕಳೆದ ವರ್ಷವಷ್ಟೇ ಹೈದರಾಬಾದ್ ಮೂಲದ ವ್ಯಕ್ತಿಯೊಬ್ಬರನ್ನು ಪ್ರೀತಿಸಿ, ಕುಟುಂಬ ಸದಸ್ಯರು ಹಾಗೂ ಸ್ನೇಹಿತರ ಸಮ್ಮುಖದಲ್ಲಿ ಮದುವೆ ಮಾಡಿಕೊಂಡಿದ್ದರು. ಆತ್ಮಹತ್ಯೆ ಸುದ್ದಿ ತಿಳಿದು ಶೋಭಿತಾ ಅವರ ತಾಯಿ ದೇವಕಿ ಹೈದರಾಬಾದ್‌ಗೆ ತೆರಳಿದ್ದಾರೆ. ಶನಿವಾರ ರಾತ್ರಿ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು, ಶವವನ್ನು ಆಸ್ಪತ್ರೆಗೆ ರವಾನಿಸಲಾಗಿದೆ. ಶೋಭಿತಾ ಮೃತದೇಹವನ್ನು ಬೆಂಗಳೂರು ಅಥವಾ ಹಾಸನಕ್ಕೆ ಸೋಮವಾರ ತರುವ ಸಾಧ್ಯತೆ ಇದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮಹಿಳಾ ಕ್ರಿಕೆಟ್ ದಂತಕಥೆ ಶಾಂತಾ ರಂಗಸ್ವಾಮಿ ಹೆಸರನ್ನು ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗೆ ಇಡುವಂತೆ ಆಗ್ರಹಿಸಿ ಕಲ್ಪನಾ ವೆಂಕಟಾಚಾರ್ ಮತ್ತು ಮಹಿಳಾ ಕ್ರಿಕೆಟ್ ಆಟಗಾರ್ತಿಯರ ನಿಯೋಗವು ಭಾನುವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿಪತ್ರ ಸಲ್ಲಿಸಿತು. ಕಲ್ಪನಾ, ಕೆ.ಆರ್. ಗಾಯತ್ರಿ ಮತ್ತು ಜಾಹ್ನವಿ ಚಿತ್ರದಲ್ಲಿದ್ದಾರೆ

ನದೀಮ್ ವಿರುದ್ಧದ ಎಫ್‌ಐಆರ್ ರದ್ದತಿಗೆ ಆಗ್ರಹ

ಬೆಂಗಳೂರು: 'ಮಾನವ ಹಕ್ಕುಗಳ ಹೋರಾಟಗಾರ ನದೀಮ್ ಖಾನ್ ವಿರುದ್ಧ ದೆಹಲಿ ಪೊಲೀಸರು ದಾಖಲಿಸಿರುವ ದುರುದ್ದೇಶ ಪೂರಿತ ಎಫ್‌ಐಆರ್ ಅನ್ನು ಕೂಡಲೇ ರದ್ದುಪಡಿಸಬೇಕು' ಎಂದು ಬಹುತ್ವ ಕರ್ನಾಟಕ, ತಮಟೆ, ಪಿಯುಸಿಎಲ್ ಕರ್ನಾಟಕ, ದ್ವೇಷದ ಮಾತಿನ ವಿರುದ್ಧ ಜನಾಂದೋಲನ, ಎದ್ದೇಳು ಕರ್ನಾಟಕ, ಕರ್ನಾಟಕ ಜನಶಕ್ತಿ, ಜಾಗೃತ ಕರ್ನಾಟಕ ಒತ್ತಾಯಿಸಿವೆ.

'ಎಕ್ಸ್'ನಲ್ಲಿ ಕೆಲವು ಸಾಮಾಜಿಕ ಮಾಧ್ಯಮ ಖಾತೆಗಳ ಹೊಂದಿದ್ದರು' ಎಂಬ ಕಾರಣದಿಂದ ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ (ಎಪಿಸಿಆರ್) ರಾಷ್ಟ್ರೀಯ ಪ್ರಧಾನ ಕಾರ್ಯ ದರ್ಶಿ ನದೀಮ್ ಖಾನ್ ಅವರಿಗೆ ದೆಹಲಿ ಪೊಲೀಸರು ಉದ್ದೇಶ ಪೂರ್ವಕವಾಗಿ ಕಿರುಕುಳ ನೀಡುತ್ತಿದ್ದಾರೆ' ಎಂದು ಸಂಘಟ ನೆಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

'ಕಾನೂನು ಬಾಹಿರ ಕಿರುಕುಳ ಹಾಗೂ ಬೆದರಿಕೆ ಹಾಕುತ್ತಿರುವ ದಿಲ್ಲಿ ಪೊಲೀಸರ ವಿರುದ್ಧ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು. ಒಕ್ಕೂಟ ಸರ್ಕಾರವು, ಪ್ರಜಾಪ್ರಭುತ್ವ ಎತ್ತಿ ಹಿಡಿಯಲು ಕೆಲಸ ಮಾಡುತ್ತಿರುವ ಮಾನವ ಹಕ್ಕುಗಳ ಹೋರಾಟಗಾರರ ಮೇಲೆ ಕಿರುಕುಳ ನೀಡು ವುದನ್ನು ನಿಲ್ಲಿಸಬೇಕು' ಎಂದು ಆಗ್ರಹಿಸಿವೆ.

'ಶನಿವಾರ ದೆಹಲಿಯ ಶಾಹೀನ್ ಬಾಗ್ ಠಾಣೆಯ ನಾಲ್ವರು ಸಿಬ್ಬಂದಿ, ನದೀಮ್ ಖಾನ್ ತಂಗಿದ್ದ ನಗರದ ನಿವಾಸ ಪ್ರವೇಶಿಸಿ, ವಾರಂಟ್ ಅಥವಾ ನೋಟಿಸ್ ಇಲ್ಲದೆ ಅವರನ್ನು ಬಂಧಿಸಲು ಪ್ರಯತ್ನಿಸಿದರು. ಆರು ತಾಸು ನದೀಮ್ ಹಾಗೂ ಕುಟುಂಬದ ಸದಸ್ಯರಿಗೆ ಕಿರುಕುಳ ನೀಡಿ ನೋಟಿಸ್ ನೀಡಿದರು' ಎಂದು ಸಂಘಟನೆಗಳು ಆರೋಪಿಸಿವೆ.

'ವಾರಂಟ್ ಇಲ್ಲದೆ ಮನೆಗೆ ಪ್ರವೇಶ ಮಾಡಿ, ನದೀಮ್ ಅವರನ್ನು ಬಂಧಿಸಲು ಪ್ರಯತ್ನಿಸಿದ ದೆಹಲಿ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಅವರ ಸಹೋದರ ಸಂಪಿಗೆಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ.

ಚರ್ಚಿಸಿ ಕ್ರಮ: 'ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿನ ಪೊಲೀಸರು ಅವರನ್ನು ವಿಚಾರಣೆ ನಡೆಸಿ, ನೋಟಿಸ್ ಕೊಟ್ಟು ಹೋಗಿದ್ದಾರೆ. ಪೊಲೀಸರು ಮನೆಗೆ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಅವರ ಸಹೋದರ ದೂರು ನೀಡಿದ್ದಾರೆ. ಹಿರಿಯ ಅಧಿಕಾರಿಗಳು ಹಾಗೂ ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಸಂಪಿಗೆಹಳ್ಳಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಸದರ್ನ್ ಬ್ಲೂಸ್ ತಂಡಕ್ಕೆ ಜಯ

ಬೆಂಗಳೂರು: ರೋಷನ್ (35) ಅವರ ಆಟದ ಬಲದಿಂದ ಸದರ್ನ್ ಬ್ಲೂಸ್ ತಂಡವು ಎಚ್‌ಬಿಆರ್ ಬಿ.ಸಿ ತಂಡವು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಕಪ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಪಂದ್ಯದಲ್ಲಿ 78–75ರಿಂದ ರಾಜ್‌ಕುಮಾರ್ ಬಿ.ಸಿ ತಂಡವನ್ನು ಮಣಿಸಿತು.

ಇಲ್ಲಿನ ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಗಣದಲ್ಲಿ ಟೂರ್ನಿಯ ಮೂರನೇ ದಿನವಾದ ಭಾನುವಾರ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆ ರಾಜ್‌ಕುಮಾರ್ ತಂಡ 10 ಅಂಕಗಳ ಮುನ್ನಡೆ ಗಳಿಸಿತ್ತು. ಆದರೆ, ಉತ್ತರಾರ್ಧದಲ್ಲಿ ಬ್ಲೂಸ್ ತಂಡ ಪಾರಮ್ಯ ಮೆರೆಯಿತು.

ಫಲಿತಾಂಶ: ಪುರುಷರ ವಿಭಾಗ: ಚಿಕ್ಕಬಳ್ಳಾಪುರ ಜಿಲ್ಲೆ 74–72ರಿಂದ ಮೈಸೂರು ಜಿಲ್ಲೆ ಬಿ ವಿರುದ್ಧ; ಕೆಎಸ್‌ಪಿ 91–66ರಿಂದ ಹಾಸನ ಜಿಲ್ಲೆ ವಿರುದ್ಧ; ಸದರ್ನ್ ಬ್ಲೂಸ್ 78–75 ರಾಜ್‌ಕುಮಾರ್ ಬಿ.ಸಿ ವಿರುದ್ಧ; ಸಿಜೆಸಿ 61–39ರಿಂದ ಧಾರವಾಡ ಜಿಲ್ಲೆ ಬಿ ವಿರುದ್ಧ; ಬ್ಯಾಂಕ್ ಆಫ್ ಬರೋಡಾ 53–28ರಿಂದ ಎಚ್‌ಬಿಆರ್ ಬಿ.ಸಿ ವಿರುದ್ಧ; ಬೀಗಲ್ಸ್ ಬಿ.ಸಿ 56–36ರಿಂದ ಬೆಳಗಾವಿ ಜಿಲ್ಲೆ ವಿರುದ್ಧ ಜಯ ಸಾಧಿಸಿತು.

ಡಿವೈಇಎಸ್ ಬೆಂಗಳೂರು 62–40ರಿಂದ ಬಾಷ್ ಎದುರು; ಐಬಿಬಿಸಿ 75–61ರಿಂದ ಮೈಸೂರು ಜಿಲ್ಲೆ ಎ ಎದುರು; ಬೆಂಗಳೂರು ಸ್ಪೋರ್ಟಿಂಗ್ 66–63ರಿಂದ ಧಾರವಾಡ ಜಿಲ್ಲೆ ಎ ಎದುರು; ದಕ್ಷಿಣ ಕನ್ನಡ ಜಿಲ್ಲೆ 77–55ರಿಂದ ಮೌಂಟ್ಸ್ ಕ್ಲಬ್ ಎದುರು; ಭಾರತ್ ಎಸ್‌ಯು 75–39ರಿಂದ ಮಂಡ್ಯ ಜಿಲ್ಲೆ ಎದುರು ಗೆಲುವು ಸಾಧಿಸಿತು.

ಮಹಿಳೆಯರ ವಿಭಾಗ: ಮೈಸೂರು ಜಿಲ್ಲೆ ಎ 73–32ರಿಂದ ಎಂಸಿಎಚ್‌ಎಸ್ ವಿರುದ್ಧ; ಬೀಗಲ್ಸ್ ಬಿ.ಸಿ 74–58ರಿಂದ ಯಲಹಂಕ ನ್ಯೂಟೌನ್ ವಿರುದ್ಧ; ವಿಜಯಪುರ ಜಿಲ್ಲೆ 69–30 ಮೈಸೂರು ಜಿಲ್ಲೆ ಬಿ ವಿರುದ್ಧ ಜಯ ಸಾಧಿಸಿತು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ಪಾದಚಾರಿ ಮಾರ್ಗದಲ್ಲಿ ದೇವಾಲಯ'

ಪದ್ಮನಾಭನಗರದ ಸಹಕಾರಿ ಸಂಸ್ಥೆಯ ಸಮುದಾಯ ಭವನದ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ದೇವಾಲಯವೊಂದು ತಲೆ ಎತ್ತುತ್ತಿದೆ. ಇದರ ಹತ್ತಿರವೇ ಬಿಬಿಎಂಪಿ ಕಚೇರಿ ಇದೆ. ಈ ದೇವಸ್ಥಾನ ಈಗ ಚಿಕ್ಕದಾಗಿ ಪ್ರಾರಂಭವಾಗಿದ್ದರೂ, ಮುಂದೆ ದೊಡ್ಡ ಸಮಸ್ಯೆ ತರಲಿದೆ. ರಸ್ತೆಯಲ್ಲಿ ಅನಧಿಕೃತ ದೇವಾಲಯಗಳ ನಿರ್ಮಿಸಬಾರದು ಎಂಬ ಕೋರ್ಟ್ ಆದೇಶವಿದ್ದರೂ, ಬಿಬಿಎಂಪಿ ಅಧಿಕಾರಿಗಳಿಗೆ ಇದು ಕಾಣಿಸುತ್ತಿಲ್ಲವೆ? ಇದನ್ನು ತೆರವುಗೊಳಿಸುವ ಜವಾಬ್ದಾರಿ ಯಾರದು?

ಎನ್. ರಮೇಶ್, ಪದ್ಮನಾಭನಗರ



ಪದ್ಮನಾಭನಗರದ ಪಾದಚಾರಿ ಮಾರ್ಗದಲ್ಲಿರುವ ದೇವಾಲಯ

'ರಸ್ತೆಯಲ್ಲಿನ ಕಸದ ರಾಶಿ ತೆರವುಗೊಳಿಸಿ'



ಕಾಡುಗೋಡಿ ಕುಂಬೇನ ಅಗ್ರಹಾರ ರಸ್ತೆಯಲ್ಲಿ ಹಾಕಿರುವ ಕಸ

ಕಾಡುಗೋಡಿಯ ಬೆಳತ್ತೂರು ಕಾಲೊನಿ ಕುಂಬೇನ ಅಗ್ರಹಾರ ರಸ್ತೆಯಲ್ಲಿರುವ ಸರ್ಕಾರಿ ಶಾಲೆಯ ಮುಂಭಾಗದಲ್ಲಿ ಕಸ ಹಾಕಲಾಗುತ್ತಿದೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಪ್ರತಿದಿನ ಬೆಳಿಗ್ಗೆ ಇಲ್ಲಿ ಕಸದ ರಾಶಿಯೇ ಬಿದ್ದಿರುತ್ತದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಶಾಲೆಗೆ ಬರುವ ಮಕ್ಕಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ಇಲ್ಲಿನ ಕಸ ತೆರವುಗೊಳಿಸಬೇಕು. ಇಲ್ಲಿ ಕಸ ಹಾಕದಂತೆ ಕ್ರಮ ಕೈಗೊಳ್ಳಬೇಕು.

ಮುನೀಂದ್ರ, ಬೆಳತ್ತೂರು



ಬೇಗೂರಿನ ಮದರ್ ತೆರೇಸಾ ರಸ್ತೆಯಲ್ಲಿ ಹರಿಯುವ ಚರಂಡಿ ನೀರು.

'ನಿರುಪಯುಕ್ತವಾದ ಲಿಫ್ಟ್'

ಕೆಂಗೇರಿ ಬಸ್ ತಂಗುದಾಣದಿಂದ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಯಲ್ಲಿ ಅಳವಡಿಸಿರುವ ಲಿಫ್ಟ್ ಕೆಟ್ಟು ಹೋಗಿದೆ. ಇದರಿಂದ, ವೃದ್ಧರು, ಮಕ್ಕಳು, ಮಹಿಳೆಯರು ಮೆಟ್ಟಿಲುಗಳ ಮೂಲಕವೇ ಹಾದು ಹೋಗಬೇಕಾಗಿದೆ. ಸಂಬಂಧಪಟ್ಟವರು ಕೂಡಲೇ ಈ ಲಿಫ್ಟ್ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಕೆ.ವಿ. ಸೀತಾರಾಮಯ್ಯ



ಕೆಂಗೇರಿ ಮೇಲ್ಸೇತುವೆ ಲಿಫ್ಟ್ ಕೆಟ್ಟಿರುವುದು

'ರಸ್ತೆ ಮೇಲೆ ಹರಿಯುವ ಚರಂಡಿ ನೀರು'

ಬೇಗೂರಿನ ಮದರ್ ತೆರೇಸಾ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆ ಆಗಿದೆ. ಜೊತೆಗೆ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಒಂದು ವರ್ಷದಿಂದ ರಸ್ತೆಯ ಮೇಲೆಯೇ ತ್ಯಾಜ್ಯ ನೀರು ಉಕ್ಕಿ ಹರಿಯುತ್ತಿದೆ. ಈ ಬಗ್ಗೆ ಜಲಮಂಡಳಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ.

ನಾಗರಾಜ ಎ., ಬೇಗೂರು

ಹೆಬ್ರಿ: ಕೂಡ್ಲು ಫಾಲ್ಸ್‌ಗೆ ತೆರಳದಂತೆ ಡಿ.4ರ ತನಕ ಪ್ರವಾಸಿಗರಿಗೆ ನಿರ್ಬಂಧ

ನಕ್ಸಲರ ಪತ್ತೆಗೆ ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಹೆಬ್ರಿ (ಉಡುಪಿ ಜಿಲ್ಲೆ): ನಕ್ಸಲ್ ನಾಯಕ ವಿಕ್ರಂ ಗೌಡ ಎನ್‌ಕೌಂಟರ್ ಸಂದರ್ಭದಲ್ಲಿ ತಪ್ಪಿಸಿಕೊಂಡಿದ್ದಾರೆ ಎನ್ನಲಾದ ನಕ್ಸಲರ ಪತ್ತೆಗಾಗಿ ಬಿರುಸಿನ ಶೋಧ ಕಾರ್ಯ ನಡೆಯುತ್ತಿದೆ. ನಕ್ಸಲ್ ಪೀಡಿತ ಪ್ರದೇಶಗಳಾದ ಹೆಬ್ರಿ ತಾಲ್ಲೂಕಿನ ನಾಡ್ಪಾಲು, ಕಬ್ಬಿನಾಲೆ, ಚಿಕ್ಕಮಗಳೂರಿನ ಕೊಪ್ಪ, ಕೆರೆಕಟ್ಟೆ ಪರಿಸರದ ಅರಣ್ಯದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಎಎನ್‌ಎಫ್ ಎಸ್.ಪಿ. ಜಿತೇಂದ್ರ ದಯಾಮ ಮಾರ್ಗದರ್ಶನದಲ್ಲಿ ಶೋಧ ಕಾರ್ಯ ನಡೆಯುತ್ತಿದೆ. ಹೆಬ್ರಿ ಪೊಲೀಸ್ ಠಾಣಾ ವ್ಯಾಪ್ತಿ ಹಾಗೂ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಗಡಿಭಾಗದಲ್ಲೂ ನಕ್ಸಲ್ ನಿಗ್ರಹ ಪಡೆಯ ವಿವಿಧ ತಂಡಗಳ 500 ಸಿಬ್ಬಂದಿ ಶೋಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಉಡುಪಿ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣವಾದ ಕೂಡ್ಲು ಫಾಲ್ಸ್‌ಗೆ ಡಿ. 4ರವರೆಗೆ ಪ್ರವಾಸಿಗರು ತೆರಳದಂತೆ ನಿರ್ಬಂಧ ಹೇರಲಾಗಿದೆ ಎಂದು ಕುದುರೆಮುಖ ವನ್ಯಜೀವಿ ವಿಭಾಗದ ಡಿಸಿಎಫ್ ಶಿವರಾಮ್ ಬಾಬು ತಿಳಿಸಿದ್ದಾರೆ.

ಶೋಧ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಯೋಧರನ್ನು ನಿಯೋಜಿಸಲಾಗಿತ್ತು. ಸದ್ಯಕ್ಕೆ ವಿಶೇಷ ಭದ್ರತಾ ಪಡೆಯನ್ನು ರಾಜ್ಯ ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣವ್ ಮೊಹಂತಿ ಅವರು ವಾಪಸ್ ಪಡೆದಿದ್ದಾರೆ ಎಂದು ತಿಳಿದು ಬಂದಿದೆ.

ಕಾಡಿನಲ್ಲಿ ಟಾರ್ಚ್ ಬೆಳಕು: ನಕ್ಸಲರು ಶೃಂಗೇರಿ ಭಾಗದಲ್ಲಿರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಶೃಂಗೇರಿ ಕೆರೆಕಟ್ಟೆಯ ಸುತ್ತಿನಗುಡ್ಡ ಎಂಬಲ್ಲಿ ಶುಕ್ರವಾರ ನಡುರಾತ್ರಿ ವೇಳೆ ದಟ್ಟ ಕಾಡಿನ ನಡುವೆ ಟಾರ್ಚ್ ಬೆಳಕು ಕಂಡುಬಂದಿದೆ. ಇದು ನಕ್ಸಲರ ಓಡಾಟ ಇರಬಹುದು ಎಂಬ ಅನುಮಾನದಲ್ಲಿ ನಕ್ಸಲ್ ನಿಗ್ರಹ ಪಡೆ ಶೋಧ ಕಾರ್ಯಾಚರಣೆ ತೀವ್ರಗೊಳಿಸಿದೆ. ನಕ್ಸಲರು ಮರಳಿ ಕೇರಳಕ್ಕೆ ಹೋಗಿರಬಹುದು ಎಂದು ಅನುಮಾನಿಸಲಾಗಿತ್ತು. ಆದರೆ, ಈಗ ಕೆರೆಕಟ್ಟೆ ಪರಿಸರದಲ್ಲಿ ಟಾರ್ಚ್ ಬೆಳಕು ಕಂಡಿರುವುದರಿಂದ ಅವರು ಇನ್ನೂ ಇಲ್ಲೇ ಇರುವ ಶಂಕೆ ಇದೆ ಎಂದು ಮೂಲಗಳು ತಿಳಿಸಿವೆ.

'ಟಾರ್ಚ್ ಬೆಳಕು ಕಂಡಿರುವ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ. ನಕ್ಸಲ್ ನಿಗ್ರಹ ಪಡೆಯಿಂದ ನಿರಂತರವಾಗಿ ಶೋಧ ಕಾರ್ಯ ನಡೆಯುತ್ತಿದೆ. ಜಿಲ್ಲೆಯ ಗಡಿ ಭಾಗ, ನಕ್ಸಲ್‌ಪೀಡಿತ ವಿವಿಧ ಜಿಲ್ಲೆಯ ಗಡಿಯಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ' ಎಂದು ನಕ್ಸಲ್ ನಿಗ್ರಹ ಪಡೆಯ ವರಿಷ್ಠಾಧಿಕಾರಿ ಜಿತೇಂದ್ರ ದಯಾಮ ತಿಳಿಸಿದ್ದಾರೆ.

ಕ್ಯಾನ್ಸರ್‌ನಿಂದ ಬಳಲುತ್ತಿರುವ ಸ್ವಾಮೀಜಿಗೆ ಕಿರುಕುಳ ಸರಿಯಲ್ಲ: ಆರ್‌.ಅಶೋಕ

‘ಕ್ಷಮೆ ಕೇಳಿದ ಮೇಲೆ ಕೇಸು ಯಾಕೆ?’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ರೈತರ, ಮಠಗಳ ಭೂಮಿಯನ್ನು ವಕ್ಫ್ ಮಂಡಳಿ ಕಸಿಯುತ್ತಿರುವುದನ್ನು ಹಿನ್ನೆಲೆಯಾಗಿಟ್ಟುಕೊಂಡು ಚಂದ್ರಶೇಖರನಾಥ ಸ್ವಾಮೀಜಿ ಹೇಳಿಕೆ ನೀಡಿದ್ದರು. ಅದಕ್ಕಾಗಿ ಅವರು ಕ್ಷಮೆ ಕೋರಿದ ಮೇಲೂ ಪ್ರಕರಣ ಯಾಕೆ? ಅವರೇನಾದರೂ ಪಾಕಿಸ್ತಾನ ಜಿಂದಾಬಾದ್ ಎಂದಿದ್ದಾರಾ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಪ್ರಶ್ನಿಸಿದರು.

ಬಳ್ಳಾರಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ನಾವು ಈಗಾಗಲೇ ಒಂದು ಪಾಕಿಸ್ತಾನವನ್ನು ಕೊಟ್ಟುಬಿಟ್ಟಿದ್ದೇವೆ. ಇನ್ನೊಂದು ಪಾಕಿಸ್ತಾನ ಸೃಷ್ಟಿಯಾಗಬಾರದು ಎಂಬುದು ಸ್ವಾಮೀಜಿ ಆತಂಕ. ಇಳಿ ವಯಸ್ಸಿನಲ್ಲಿ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಅವರ ಮೇಲೆ ಕೇಸು ಹಾಕಿ ಕಿರುಕುಳ ನೀಡುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಒಳ್ಳೆಯದಾಗುತ್ತದೆಯೇ’ ಎಂದು ಹೇಳಿದರು.

‘ಸ್ವಾಮೀಜಿ ಮೇಲೆ ಕೇಸು ಹಾಕುವವರು ಕುಮಾರಸ್ವಾಮಿ ಅವರನ್ನು ಕರಿಯ ಎಂದವರ ಮೇಲೆ ಯಾಕೆ ಕ್ರಮ ಕೈಗೊಂಡಿಲ್ಲ? ಅದು ವರ್ಣ ದ್ವೇಷ ಅಲ್ಲವೇ? ಇದೇ ಮಾತು ಅಮೆರಿಕದಲ್ಲಿ ಹೇಳಿದ್ದರೆ 10 ವರ್ಷ ಸಜೆಯಾಗುತ್ತಿತ್ತು’ ಎಂದರು.

‘ಕಾವಿ ಹಾಕಿದರೆ ಕಾನೂನಿಗಿಂತ ಮೇಲಲ್ಲ’ ಎಂಬ ಗೃಹ ಸಚಿವ ಪರಮೇಶ್ವರ ಮಾತಿಗೆ ಪ್ರತಿಕ್ರಿಯಿಸಿದ ಅವರು ‘ಟೋಪಿ ಹಾಕಿದರೆ ಕಾನೂನಿಗಿಂತಲೂ ಮಿಗಿಲಾ?’ ಎಂದರು.

ಡಿಕೆಶಿ ಕುಂಟೆತ್ತಾದರೇ?: ‘ನಿರ್ಮಲಾನಂದನಾಥ ಸ್ವಾಮೀಜಿ ಫೋನ್ ಟ್ಯಾಪ್ ಆದಾಗ ಅಶೋಕ ಎಲ್ಲಿದ್ದರು?’ ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಫೋನ್ ಟ್ಯಾಪ್ ವಿಚಾರ ಬಯಲಾದಾಗ ಡಿ.ಕೆ. ಶಿವಕುಮಾರ್ ಅವರು ಎಚ್‌.ಡಿ. ಕುಮಾರಸ್ವಾಮಿ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದರು. ಆಗೆಲ್ಲ ಜೋಡೆತ್ತು ಎಂದವರು ಇಂದು ಕುಂಟೆತ್ತಾದರೇ’ ಎಂದು ಗೇಲಿ ಮಾಡಿದರು.

ಕಾನೂನು ಚೌಕಟ್ಟಿನಲ್ಲಿ ಕ್ರಮ– ಸಿದ್ದರಾಮಯ್ಯ

ಬೆಂಗಳೂರು: ‘ಚಂದ್ರಶೇಖರನಾಥ ಸ್ವಾಮೀಜಿ ಅವರ ಪ್ರಕರಣದಲ್ಲಿ ಪೊಲೀಸರು ಕಾನೂನಿನ ದೃಷ್ಟಿಯಲ್ಲಿ ಏನು ಮಾಡಬೇಕೊ ಅದನ್ನು ಮಾಡುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕಾನೂನು ಚೌಕಟ್ಟಿನ ಒಳಗೆ ಬಂದರೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇಲ್ಲವಾದರೆ ಇಲ್ಲ’ ಎಂದರು.

ಕಾನೂನು ಎಲ್ಲರಿಗೂ ಒಂದೇ: ಚಂದ್ರಶೇಖರನಾಥ ಸ್ವಾಮೀಜಿ ಅವರ ಮೇಲೆ ಎಫ್‌ಐಆರ್ ದಾಖಲಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಮುಖ್ಯಮಂತ್ರಿ ಈ ಬಗ್ಗೆ ಉತ್ತರ ನೀಡಿದ್ದಾರೆ. ಸ್ವಾಮೀಜಿಗಳು ಯಾರ ಹಕ್ಕಿನ ಬಗ್ಗೆಯೂ ಪ್ರಶ್ನೆ ಮಾಡುವುದು ಬೇಡ ಎಂದು ಮನವಿ ಮಾಡುತ್ತೇನೆ. ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ’ ಎಂದರು.

‘ಸ್ವಾಮೀಜಿ ಮೇಲೆ ಕೇಸ್ ದಾಖಲಿಸಿದರೆ ಉಗ್ರ ಹೋರಾಟ ಮಾಡುವುದಾಗಿ ವಿಪಕ್ಷ ನಾಯಕ ಆರ್‌. ಅಶೋಕ ಹೇಳಿದ್ದಾರೆ. ಜೆಡಿಎಸ್ ಸರ್ಕಾರ ಬಾಲಗಂಗಾಧರನಾಥ ಸ್ವಾಮೀಜಿ ಮೇಲೆ ಪ್ರಕರಣ ದಾಖಲಿಸಿದಾಗ ಅಶೋಕ, ಬಿಜೆಪಿ ನಾಯಕರು ಎಲ್ಲಿ ಹೋಗಿದ್ದರು? ಕುಮಾರಸ್ವಾಮಿ ಸರ್ಕಾರದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ದೂರವಾಣಿ ಕದ್ದಾಲಿಕೆ ಮಾಡಿದಾಗ ಏಕೆ ಮಾತನಾಡಲಿಲ್ಲ? ಈ ಬಗ್ಗೆ ಸಿಬಿಐ ವರದಿ ಇದೆ. ಅದರ ಬಗ್ಗೆ ಯಾಕೆ ಮಾತನಾಡುತ್ತಿಲ್ಲ. ಬಿಜೆಪಿಯವರು ಒಣ ರಾಜಕಾರಣ ನಿಲ್ಲಿಸಲಿ. ಬೆಂಕಿ ಹಚ್ಚಿ ಬೀಡಿ ಸೇದುವ ಪ್ರಯತ್ನ ನಿಲ್ಲಿಸಲಿ’ ಎಂದರು.

ಆಯೋಜಕ ಸಂಸ್ಥೆಯ ಹಿನ್ನೆಲೆ ಪರಿಶೀಲಿಸಿ ತೀರ್ಮಾನಿಸಿದ್ದೇನೆ: ಸಿದ್ದರಾಮಯ್ಯ

ಭಾರತೀಯ ಸಂಸ್ಕೃತಿ ಉತ್ಸವ: ಹಿಂದೆ ಸರಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಸೇಡಂನಲ್ಲಿ ಮುಂಬರುವ ಜ. 29 ರಿಂದ ಫೆ. 6ರವರೆಗೆ ನಡೆಯಲಿರುವ ‘ಭಾರತೀಯ ಸಂಸ್ಕೃತಿ ಉತ್ಸವ–7’ದಲ್ಲಿ ಭಾಗವಹಿಸದಿರಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧರಿಸಿದ್ದಾರೆ.

ಈ ಕುರಿತು ತಮ್ಮ ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿರುವ ಅವರು, ‘ಭಾರತ ವಿಕಾಸ ಸಂಗಮ ಸಂಸ್ಥೆಯವರು ಆಯೋಜಿಸಿರುವ ಭಾರತೀಯ ಸಂಸ್ಕೃತಿ ಉತ್ಸವ ಉದ್ಘಾಟನೆಯ ಆಮಂತ್ರಣ ಪತ್ರಿಕೆಯಲ್ಲಿ ನನ್ನ ಹೆಸರು ಮುದ್ರಣ ಆಗಿರುವುದನ್ನು ಗಮನಿಸಿದ್ದೇನೆ. ಈ ಬಗ್ಗೆ ನನಗೆ ಅಧಿಕೃತ ಆಹ್ವಾನ ಬಂದಿಲ್ಲ. ಈ ಕಾರ್ಯಕ್ರಮವನ್ನು ಆಯೋಜಿಸಿರುವ ಸಂಸ್ಥೆಯ ಹಿನ್ನೆಲೆಯ ವಿವರವನ್ನು ತರಿಸಿ, ಪರಿಶೀಲಿಸಿದ ನಂತರ ಅದರಲ್ಲಿ ಭಾಗವಹಿಸದೆ ಇರಲು ತೀರ್ಮಾನಿಸಿದ್ದೇನೆ’ ಎಂದಿದ್ದಾರೆ.

ಭಾರತ ವಿಕಾಸ ಸಂಗಮ, ಕಲಬುರಗಿಯ ವಿಕಾಸ ಅಕಾಡೆಮಿ, ಸೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಜಂಟಿ ಸಹಯೋಗದಲ್ಲಿ ಈ ಉತ್ಸವ ನಡೆಯುತ್ತಿದ್ದು, 52 ಪುಟಗಳ ಆಮಂತ್ರಣ ಪತ್ರಿಕೆ ಈಗಾಗಲೇ ಬಿಡುಗಡೆಗೊಂಡಿದೆ. ಕೆ.ಎನ್. ಗೋವಿಂದಾಚಾರ್ಯ ಅವರು ಭಾರತ ವಿಕಾಸ ಸಂಗಮದ ಸಂಸ್ಥಾಪಕರಾಗಿದ್ದು, ಕಲಬುರಗಿಯ ವಿಕಾಸ ಅಕಾಡೆಮಿಯ ಅಧ್ಯಕ್ಷರೂ ಆಗಿರುವ ರಾಜ್ಯಸಭೆ ಮಾಜಿ ಸದಸ್ಯ ಬಸವರಾಜ ಪಾಟೀಲ ಸೇಡಂ ಇದರ ಸಂರಕ್ಷಕರಾಗಿದ್ದಾರೆ.

ಉತ್ಸವದ ಭಾಗವಾಗಿ ಜ. 28ರಂದು ಶೋಭಾ ಯಾತ್ರೆ ನಡೆಯಲಿದ್ದು, ಜ. 29ರಂದು ಬೆಳಿಗ್ಗೆ ನಡೆಯಲಿರುವ ಮಾತೃ ಸಮಾವೇಶ– ‘ಮಾತೃ ದೇವೋಭವ’ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ ಎಂದು ಆಮಂತ್ರಣ ಪತ್ರಿಕೆಯಲ್ಲಿದೆ.

‘ಸ್ವಾಮೀಜಿ ನೇತೃತ್ವದಲ್ಲಿ ಆಹ್ವಾನಿಸಿದ್ದೆವು’

ಸಿಎಂ ಸಿದ್ದರಾಮಯ್ಯ ಅವರ ನಿಲುವಿನ ಕುರಿತು ಅಚ್ಚರಿ ವ್ಯಕ್ತಪಡಿಸಿದ ಬಸವರಾಜ ಪಾಟೀಲ ಸೇಡಂ, ‘ಸ್ವತಃ ನಮ್ಮ ಸಂಸ್ಥೆ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಅಧ್ಯಕ್ಷ ಸದಾಶಿವ ಸ್ವಾಮೀಜಿ ಹಾಗೂ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಆಹ್ವಾನಿಸಲಾಗಿತ್ತು. ಸಿದ್ದರಾಮಯ್ಯ ಅವರು ಒಪ್ಪಿದ ಮೇಲೆಯೇ ಉದ್ಘಾಟನೆಗೆ ಅವರ ಹೆಸರು ಹಾಕಿಕೊಂಡಿದ್ದೆವು. ಅವರನ್ನು ಭೇಟಿ ಮಾಡಿ ಆಹ್ವಾನಿಸಿದ್ದ ಚಿತ್ರವೂ ಜಾಲತಾಣದಲ್ಲಿ ಹರಿದಾಡುತ್ತಿದೆ. ಸಿಎಂ ಬಂದರೂ ಸಂತೋಷ, ಬರದಿದ್ದರೂ ಸಂತೋಷ’ ಎಂದರು.

‘ಆಹ್ವಾನ ನೀಡದೆ ಆಮಂತ್ರಣ ಪತ್ರಿಕೆಯಲ್ಲಿ ಹೆಸರು’

‘ಭಾರತ ವಿಕಾಸ ಸಂಗಮ ಸಂಸ್ಥೆ ಆಯೋಜಿಸಿರುವ ಉತ್ಸವ ಎಂಬ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ನೀಡಿಲ್ಲ. ಆದರೆ, ನನ್ನ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿ ಹಂಚಲಾಗುತ್ತಿದೆ. ಇದು ಸಮಂಜಸವಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ ಈ ಕುರಿತು ಬರೆದುಕೊಂಡಿರುವ ಅವರು, ‘ಆಮಂತ್ರಣ ಪತ್ರಿಕೆಯಲ್ಲಿ ನನ್ನ ಹೆಸರು ಮುದ್ರಣ ಆಗಿರುವುದನ್ನು ಮಾಧ್ಯಮಗಳ ಮೂಲಕ ಗಮನಿಸಿದೆ. ನನಗೆ ಈ ಕಾರ್ಯಕ್ರಮದ ಬಗ್ಗೆ ಮಾಹಿತಿಯೇ ಇಲ್ಲ. ನನಗೆ ಆಹ್ವಾನವೂ ಬಂದಿಲ್ಲ’ ಎಂದಿದ್ದಾರೆ.

‘ಕಳಪೆ ಐವಿ ದ್ರಾವಣ ಖರೀದಿಸಿದ್ದೇಕೆ?’

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ವಿಪಕ್ಷ ನಾಯಕ ಪರಿಶೀಲನೆ

ಪ್ರಜಾವಾಣಿ ವಾರ್ತೆ



ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭಾನುವಾರ ಭೇಟಿ ನೀಡಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಔಷಧ ಉಗ್ರಾಣಕ್ಕೆ ತೆರಳಿ ಐವಿ ದ್ರಾವಣಗಳನ್ನು ಪರಿಶೀಲಿಸಿದರು. ಜಿಲ್ಲಾ ಶಸ್ತ್ರಚಿಕಿತ್ಸಕ ಬಸರೆಡ್ಡಿ, ಶಾಸಕ ಜನಾರ್ದನ ರೆಡ್ಡಿ ಇದ್ದರು

ಬಳ್ಳಾರಿ: ‘ಬಳ್ಳಾರಿಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾಗಿದೆ ಎನ್ನಲಾದ ‘ಪಶ್ಚಿಮ ಬಂಗಾಳ ಫಾರ್ಮಸ್ಯುಟಿಕಲ್’ ಕಂಪನಿಯ ಐವಿ ದ್ರಾವಣ ಕಳಪೆ ಗುಣಮಟ್ಟದ್ದು ಎಂದು ಆರು ತಿಂಗಳ ಹಿಂದೆ ರಾಜ್ಯ ಔಷಧ ನಿಯಂತ್ರಕರು ವರದಿ ನೀಡಿದ್ದರು. ಆದರೂ ಯಾರ ಚಿತಾವಣೆಯಿಂದ ಔಷಧ ಖರೀದಿ ಮಾಡಲಾಯಿತು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಪ್ರಶ್ನಿಸಿದರು.

ಬಳ್ಳಾರಿ ಜಿಲ್ಲಾ ಆಸ್ಪತ್ರೆ ಹಾಗೂ ಬಳ್ಳಾರಿ ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗೆ ಭಾನುವಾರ ಭೇಟಿ ನೀಡಿದ್ದ ಅವರು ಬಾಣಂತಿಯರ ಸರಣಿ ಸಾವಿನ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಐವಿ ದ್ರಾವಣದ 92 ಬ್ಯಾಚ್‌ಗಳಲ್ಲಿ 23 ಬ್ಯಾಚ್ ಕಳಪೆ ಗುಣಮಟ್ಟದ್ದು ಎಂದು ಔಷಧ ನಿಯಂತ್ರಕರು ವರದಿ ನೀಡಿದ್ದರು. ಈ ಔಷಧ ಬಳಸಲು ಅನುಮತಿ ನೀಡಿದ ಬಲಾಢ್ಯರು ಯಾರು? ಈ ಔಷಧ ಕಂಪನಿಯ ಸಂಪರ್ಕಾಧಿಕಾರಿ ಅನ್ಸಾರಿ ಎಂಬುವವರ ಹಣಬಲದಿಂದ ಈ ಐವಿ ದ್ರಾವಣ ರಾಜ್ಯಕ್ಕೆ ಬಂದಿದೆ. ಆತನನ್ನು ಬಂಧಿಸಿದರೆ ಇದರ ಹಿಂದೆ ಯಾರಿದ್ದಾರೆ ಎಂಬುದು ಬಯಲಾಗಲಿದೆ’ ಎಂದು ಹೇಳಿದರು.

‘ಕಳಪೆ ಗುಣಮಟ್ಟದ ಐವಿ ದ್ರಾವಣ ನೀಡಿ ಸರ್ಕಾರವೇ ಬಾಣಂತಿಯರ ಕೊಲೆ ಮಾಡಿದೆ. ರಾಜ್ಯದಲ್ಲಿ ಈ ವರ್ಷ 28 ಬಾಣಂತಿಯರ ಸಾವಿನ ಸಂಭವಿಸಿದೆ. ಈ ಕುರಿತು ಲೋಕಾಯುಕ್ತ ತನಿಖೆಯಾಗಬೇಕು. ಮೃತ ಬಾಣಂತಿಯರಿಗೆ ತಲಾ ₹25 ಲಕ್ಷ ಪರಿಹಾರ ನೀಡಬೇಕು’ ಎಂದು ಅವರು ಒತ್ತಾಯಿಸಿದರು.

‘ಫೆಬ್ರುವರಿಯಲ್ಲಿ ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಫೆಬ್ರವರಿ ವೇಳೆಗೆ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಹಾಸನದಲ್ಲಿ ಡಿ. 5ರಂದು ನಡೆಯಲಿರುವ ಕಾಂಗ್ರೆಸ್ ಸಮಾವೇಶವನ್ನು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ದೃಷ್ಟಿಯಿಂದ ಮಾಡುತ್ತಿದ್ದೀರಾ’ ಎಂಬ ಪ್ರಶ್ನೆಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ಯಾವುದೋ ಒಂದು ಉದ್ದೇಶ ಇಟ್ಟುಕೊಂಡು ನಾವು ವೇದಿಕೆ ಸಿದ್ಧ ಮಾಡಬೇಕಲ್ಲವೇ? ಚುನಾವಣೆ ಸದ್ಯದಲ್ಲಿ ನಡೆಯಲಿರುವುದಂತೂ ನಿಜ’ ಎಂದರು.

‘ರಾಜ್ಯದಾದ್ಯಂತ ಪಕ್ಷದ ಸಮಾವೇಶ ಮಾಡುತ್ತೀರಾ’ ಎಂಬ ಪ್ರಶ್ನೆಗೆ, ‘ನಾವು ಇಡೀ ರಾಜ್ಯವನ್ನು ತಲುಪಬೇಕಿದೆ. ಹೀಗಾಗಿ, ಹಾಸನದ ಸಮಾವೇಶದ ನಂತರ ಬೆಳಗಾವಿಯಲ್ಲಿ ದೊಡ್ಡ ಕಾರ್ಯಕ್ರಮ ನಡೆಯಲಿದೆ’ ಎಂದರು.

‘ಫೆಬ್ರವರಿಯಲ್ಲಿ ಸಂಪುಟ ವಿಸ್ತರಣೆ ಆಗುವುದೇ’ ಎಂದು ಕೇಳಿದಾಗ, ‘ಸದ್ಯಕ್ಕೆ ಈ ಬಗ್ಗೆ ಚರ್ಚೆ ಇಲ್ಲ. ಅದರ ಅವಶ್ಯಕತೆಯೂ ಇಲ್ಲ. ಒಂದು ಸಚಿವ ಸ್ಥಾನ ಮಾತ್ರ ಬಾಕಿಯಿದೆ. ಈ ಬಗ್ಗೆ ಮುಖ್ಯಮಂತ್ರಿ ಉತ್ತರ ನೀಡಿದ್ದಾರೆ. ಬೇರೆ ಯಾವುದೇ ಸ್ಥಾನ ಖಾಲಿ ಇಲ್ಲ’ ಎಂದರು.

‘ಸಚಿವರ ಕಾರ್ಯವೈಖರಿ ಬಗ್ಗೆ ನಿಮ್ಮಿಂದ ಹೈಕಮಾಂಡ್ ವರದಿ ಪಡೆಯುತ್ತಿದೆಯೇ’ ಎಂದು ಕೇಳಿದಾಗ, ‘ನಾನು ಕಳುಹಿಸುವುದು ಏನೂ ಇಲ್ಲ. ನಮ್ಮ ಹೈಕಮಾಂಡ್ ನಾಯಕರು ಅವರದೇ ಆದ ವ್ಯವಸ್ಥೆ ಹೊಂದಿದ್ದು, ಎಲ್ಲರ ಮಾಹಿತಿ ಪಡೆಯುತ್ತಿದ್ದಾರೆ’ ಎಂದರು.

ಶಂಕರ ಮಹಾಸ್ವಾಮೀಜಿ ಲಿಂಗೈಕ್ಯ

ಪ್ರಜಾವಾಣಿ ವಾರ್ತೆ



ಶಂಕರ ಮಹಾಸ್ವಾಮೀಜಿ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಉತ್ತಂಗಿಯ ಶಂಕರ ಸ್ವಾಮಿ ಮಠದ ಪೀಠಾಧಿಪತಿ, ಕೊಟ್ಟೂರು ಗುರುಬಸವೇಶ್ವರ ದೇವಸ್ಥಾನದ ಕ್ರಿಯಾಮೂರ್ತಿಗಳಾಗಿದ್ದ ಶಂಕರ ಮಹಾಸ್ವಾಮೀಜಿ (98) ಶನಿವಾರ ಮಧ್ಯರಾತ್ರಿ ವಯೋಸಹಜ ಅನಾರೋಗ್ಯದಿಂದ ಉತ್ತಂಗಿ ಮಠದಲ್ಲಿ ಲಿಂಗೈಕ್ಯರಾದರು.

1962ರಲ್ಲಿ ಶಂಕರಸ್ವಾಮಿ ಸಂಸ್ಥಾನ ಮಠದ ಪೀಠಾಧಿಪತಿಯಾಗಿ ನಿಯುಕ್ತಿಗೊಂಡ ಶಂಕರ ಸ್ವಾಮೀಜಿ, ಕೊಟ್ಟೂರು, ಉತ್ತಂಗಿ, ಇಟ್ಟಿಗಿ, ಹೊಳಗುಂದಿ, ಕೂಡ್ಲಿಗಿ ತಾಲ್ಲೂಕು ಎಂ.ಬಿ.ಅಯ್ಯನಹಳ್ಳಿ, ಶಿಕಾರಿಪುರ ತಾಲ್ಲೂಕಿನ ನಿಡಗೊಂದಿ, ಹಿರೇಕೆರೂರು ತಾಲ್ಲೂಕು ಒಡೆಯಂಪುರ ಸೇರಿ ಅಷ್ಟಮಠಗಳ ಒಡೆಯರಾಗಿ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು.

ಸ್ವಾಮೀಜಿ ಅವರು ಮಠದ 138 ಎಕರೆ ಜಮೀನಿನ ಬಹುಪಾಲು ಆಸ್ತಿಯನ್ನು ಸಮಾಜದ ಅಭಿವೃದ್ಧಿ ಕೆಲಸಗಳಿಗೆ ನೀಡಿದ್ದರು. ಅವರು ನೀಡಿದ ಜಮೀನಿನಲ್ಲೇ ಉತ್ತಂಗಿಯಲ್ಲಿ ಸರ್ಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಗ್ರಾಮ ಪಂಚಾಯಿತಿ, ಸಮುದಾಯ ಭವನ, ಸರ್ಕಾರಿ ಆಸ್ಪತ್ರೆ, ರಂಗಮಂದಿರ ಕಟ್ಟಡಗಳು ನಿರ್ಮಾಣಗೊಂಡಿವೆ. ಜತೆಗೆ ಹೊಳಗುಂದಿ,ಹನಸಿ,ಒಡೆಯಂಪುರದಲ್ಲಿ ಶಾಲೆ, ವಸತಿ ನಿಲಯ, ಆಶ್ರಯ ಪ್ಲಾಟ್, ಸ್ಮಶಾನಕ್ಕೆ ಮಠದ ಜಮೀನುಗಳನ್ನು ಬಿಟ್ಟುಕೊಟ್ಟಿದ್ದರು.

ಪೀಠದ ಉತ್ತರಾಧಿಕಾರಿ ಸೋಮಶಂಕರ ಸ್ವಾಮೀಜಿ ನೇತೃತ್ವದಲ್ಲಿ ಭಾನುವಾರ ಮಧ್ಯಾಹ್ನ ಉತ್ತಂಗಿ ಮಠದ ಆವರಣದಲ್ಲಿ ಸ್ವಾಮೀಜಿ ಕ್ರಿಯಾ ಸಮಾಧಿ ನೆರವೇರಿಸಲಾಯಿತು.

‘ಮಾನವೀಯತೆಗಾಗಿ ಧರ್ಮಗಳ ಒಗ್ಗಟ್ಟು’ ಅಧಿವೇಶನ

ಸರ್ವಧರ್ಮ ಸಮ್ಮೇಳನ: ಖಾದರ್ ಭಾಗಿ

ಪ್ರಜಾವಾಣಿ ವಾರ್ತೆ



ರೋಮ್ ನಗರದ ವ್ಯಾಟಿಕನ್ ಸಿಟಿಯಲ್ಲಿ ನಡೆದ ಅಂತರರಾಷ್ಟ್ರೀಯ ಸರ್ವಧರ್ಮ ಸಮ್ಮೇಳನದಲ್ಲಿ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಭಾಗವಹಿಸಿದರು

ಬೆಂಗಳೂರು: ರೋಮ್ ನಗರದ ವ್ಯಾಟಿಕನ್ ಸಿಟಿಯಲ್ಲಿ ನಡೆದ ಅಂತರ ರಾಷ್ಟ್ರೀಯ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಭಾಷಣದ ಮೂಲಕ ಧರ್ಮದ ಕುರಿತಾದ ತಮ್ಮ ನಿಲುವು ಮಂಡಿಸಿದರು.

ಅದಕ್ಕೂ ಮೊದಲು ಅವರು ಕ್ರೈಸ್ತರ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರನ್ನು ವ್ಯಾಟಿಕನ್ ಸಿಟಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು.

ಮೊದಲ ಅಂತರರಾಷ್ಟ್ರೀಯ ಸರ್ವಧರ್ಮ ಸಮ್ಮೇಳನವನ್ನು ಶ್ರೀ ನಾರಾಯಣ ಗುರುಗಳು ಆಯೋಜಿಸಿ ಶತಮಾನೋತ್ಸವ ಸಂದಿರುವ ಸ್ಮರಣಾರ್ಥ ಈ ಸಮ್ಮೇಳನವನ್ನು ವ್ಯಾಟಿಕನ್ ಸಿಟಿಯ ಆಗಸ್ತಿನ್ಯೇನಂನಲ್ಲಿ ಆಯೋಜಿಸಲಾಗಿದೆ.

‘ಮಾನವೀಯತೆಗಾಗಿ ಧರ್ಮಗಳ ಒಗ್ಗಟ್ಟು’ ಎಂಬ ವಿಷಯದ ಕುರಿತು ನಡೆದ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಖಾದರ್ ಮಾತನಾಡಿದರು. ವಿಶ್ವದ ವಿವಿಧ ಭಾಗಗಳಿಂದ ವಿವಿಧ ಧರ್ಮಗಳ ಗಣ್ಯರು ಈ ಸಮಾವೇಶದಲ್ಲಿ ಭಾಗವಹಿಸಿದರು.

ಕಾಂಗ್ರೆಸ್ ಸರ್ಕಾರದಿಂದ ಉತ್ತರ ಕರ್ನಾಟಕಕ್ಕೆ ಅನ್ಯಾಯ: ಸಂಸದ ಕಾರಜೋಳ ಆರೋಪ

ಆಲಮಟ್ಟಿ: 522 ಮೀ.ಗೆ ನೀರು ನಿಲ್ಲಿಸುವ ಹುನ್ನಾರ

ಪ್ರಜಾವಾಣಿ ವಾರ್ತೆ



ಬಾಗಲಕೋಟೆಯಲ್ಲಿ ಡಿ. 3ರಿಂದ ಸಂತ್ರಸ್ತ ರೈತರು ಹೋರಾಟಕ್ಕೆ ಮುಂದಾಗಿದ್ದಾರೆ. ಸರ್ಕಾರದ ವಿಳಂಬ ಧೋರಣೆಯೇ ಇದಕ್ಕೆ ಕಾರಣ

ಗೋವಿಂದ ಕಾರಜೋಳ ಸಂಸದ

ಬಾಗಲಕೋಟೆ: ‘ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ, ಆಲಮಟ್ಟಿ ಜಲಾಶಯದಲ್ಲಿ 524.256 ಮೀಟರ್‌ವರೆಗೆ ನೀರು ನಿಲ್ಲಿಸಲು ಅವಕಾಶವಿದ್ದರೂ 522 ಮೀಟರ್‌ವರೆಗೆ ಮಾತ್ರ ನೀರು ನಿಲ್ಲಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಲು ಮುಂದಾಗಿರುವುದು ಈ ಭಾಗದ ರೈತರಿಗೆ ಮಾಡುತ್ತಿರುವ ದ್ರೋಹವಾಗಿದೆ’ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆಲಮಟ್ಟಿ ಜಲಾಶಯದಿಂದ ಉತ್ತರ ಕರ್ನಾಟಕದ 5 ಜಿಲ್ಲೆಗಳ 15 ಲಕ್ಷ ಎಕರೆ ಭೂಮಿ ನೀರಾವರಿಗೆ ಒಳಪಡಿಸಬೇಕಾಗಿದೆ. ಯುಕೆಪಿ ನ್ಯಾಯಾಧಿಕರಣದ ಅನ್ವಯ ಆಲಮಟ್ಟಿ ಜಲಾಶಯದಲ್ಲಿ 130 ಟಿಎಂಸಿ ಅಡಿ ನೀರನ್ನು ಹಿಡಿದಿಟ್ಟುಕೊಳ್ಳುವ ಅವಕಾಶವಿದೆ. ಇದಕ್ಕಾಗಿ 20 ಹಳ್ಳಿಗಳನ್ನು ಸ್ಥಳಾಂತರಿಸಿ, ಭೂಸ್ವಾಧೀನ ಮಾಡಿ ಕೊಳ್ಳಬೇಕಿದ್ದರೂ ಸರ್ಕಾರ ಮುಂದಾಗುತ್ತಿಲ್ಲ. ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆಯುತ್ತ ಬಂದರೂ ಸಿದ್ದರಾಮಯ್ಯ ಸರ್ಕಾರ ಒಂದು ಎಕರೆ ಭೂಮಿಯನ್ನು ಕೂಡ ಸ್ವಾಧೀನಪಡಿಸಿಕೊಂಡಿಲ್ಲ. ಕಟ್ಟಡಗಳಿಗೆ ಪರಿಹಾರ ನೀಡಿಲ್ಲ’ ಎಂದು ದೂರಿದರು.

‘ಹಿಂದಿನ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 524 ಮೀಟರ್ ವ್ಯಾಪ್ತಿಯ 26 ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಂಡು ಪರಿಹಾರ ಕೂಡ ವಿತರಿಸಿದೆ. ಈಗಿನ ಸರ್ಕಾರ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆಯಲ್ಲಿ ಉಳಿದಿದ್ದ ₹ 1,900 ಕೋಟಿ ಹಣವನ್ನು ವಾಪಸ್ ತೆಗೆದುಕೊಂಡಿದೆ. ಇದು ಉತ್ತರ ಕರ್ನಾಟಕದ ಯೋಜನೆಗಳ ಬಗೆಗಿನ ನಿರ್ಲಕ್ಷ್ಯ ಹಾಗೂ ತಾರತಮ್ಯ ಧೋರಣೆ’ ಎಂದು ಆಕ್ಷೇಪಿಸಿದರು.

‘ಯುಕೆಪಿ ಯೋಜನೆಗಳಿಗೆ ಅಧಿಕ ಹಣ ತೆಗೆದಿರಿಸಿ ಯೋಜನೆಯನ್ನು ತ್ವರಿತವಾಗಿ ಮುಗಿಸಿ ರಾಜ್ಯದ ಪಾಲಿನ ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕೂಡಲೇ 20 ಹಳ್ಳಿಗಳ ಸ್ಥಳಾಂತರಕ್ಕೆ ಆದ್ಯತೆ ನೀಡಬೇಕು. ಸಂತ್ರಸ್ತರಿಗೆ ಸೂಕ್ತ ಪುನರ್ವಸತಿ ಕಲ್ಪಿಸಿ ಪರಿಹಾರ ನೀಡಬೇಕು’ ಎಂದು ಆಗ್ರಹಿಸಿದರು. ಮಾಜಿ ಶಾಸಕ ವೀರಣ್ಣ ಚರಂತಿಮಠ, ಯಲ್ಲಪ್ಪ ಬೆಂಡಿಗೇರಿ, ಶಿವಾನಂದ ಟವಳಿ ಇದ್ದರು.

ಸರ್ಕಾರದಿಂದ ಕೇವಲ ₹548 ಕೋಟಿ ವೆಚ್ಚ

2013ರಿಂದ ಕೃಷ್ಣಾ ಭಾಗ್ಯ ಜಲ ನಿಗಮದ ಯೋಜನೆಗಳಿಗೆ ಮಾಡಿದ ವೆಚ್ಚದ ಅಂಕಿ ಅಂಶ ನೀಡಿದ ಸಂಸದ ಗೋವಿಂದ ಕಾರಜೋಳ, ‘2013-14 ರಿಂದ 2018ರವರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ₹ 7,795 ಕೋಟಿ, ಜೆಡಿಎಸ್-ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ₹ 1,079 ಕೋಟಿ ಹಾಗೂ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ (2019 ರಿಂದ 2023 ರವರೆಗೆ) ಅವಧಿಯಲ್ಲಿ ₹ 6,407 ಕೋಟಿ ವೆಚ್ಚ ಮಾಡಿದ್ದು, ಈಗ ಮತ್ತೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೇವಲ ₹548 ಕೋಟಿಗಳನ್ನು ವೆಚ್ಚ ಮಾಡಿದೆ’ ಎಂದು ತಿಳಿಸಿದರು.

ಆರು ಮಂದಿಗೆ ಗೌರವ ಡಾಕ್ಟರೇಟ್

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಘಟಿಕೋತ್ಸವ ಇಂದು


ಪ್ರಜಾವಾಣಿ ವಾರ್ತೆ



ಹನುಮಂತಪ್ಪ ದಡ್ಡಿ



ಜ್ಯೋತಿರ್ಲಿಂಗ ಹೊನಕಟ್ಟಿ



ರಘು ಹಾಸನ



ಶಾಂತಿ ನಾಯಕ



ಸಿದ್ದು ಹೊನ್ನಲ್



ಎಸ್‌.ಸಿ. ಶರ್ಮಾ

ಹಾವೇರಿ: ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 8 ಹಾಗೂ 9ನೇ ಘಟಿಕೋತ್ಸವ ಸಮಾರಂಭವನ್ನು ಸೋಮವಾರ ಹಮ್ಮಿಕೊಳ್ಳಲಾಗಿದ್ದು, ಆರು ಮಂದಿಗೆ ಗೌರವ ಡಾಕ್ಟರೇಟ್ ಹಾಗೂ ಒಂಬತ್ತು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುತ್ತಿದೆ.

‘ಜಮಖಂಡಿಯ ಡಾ. ಹಣಮಂತಪ್ಪ ಗೋವಿಂದಪ್ಪ ದಡ್ಡಿ, ಉತ್ತರ ಕನ್ನಡ ಜಿಲ್ಲೆಯ ಶಾಂತಿ ನಾಯಕ, ರಾಮನಗರದ ಹಾಸನ ರಘು, ವಿಜಯಪುರದ (ಸದ್ಯ ಬೆಂಗಳೂರಿನಲ್ಲಿ ಇನ್‌ಸ್ಪೆಕ್ಟರ್) ಜ್ಯೋತಿರ್ಲಿಂಗ ಹೊನಕಟ್ಟಿ, ಬೆಂಗಳೂರಿನ ಎಸ್‌.ಸಿ. ಶರ್ಮಾ ಹಾಗೂ ಯಾದಗಿರಿಯ ಸಿದ್ದರಾಮ ಹೊನ್ಕಲ್ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ’ ಎಂದು ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್ ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘2021–22 ಹಾಗೂ 2022–23ನೇ ಸಾಲಿನ ಶೈಕ್ಷಣಿಕ ವರ್ಷದ ಎರಡೂ ಘಟಿಕೋತ್ಸವ ಸಮಾರಂಭವನ್ನು ಡಿಸೆಂಬರ್ 2ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಪದವಿ ಪ್ರದಾನ ಮಾಡಲಿದ್ದಾರೆ. ಆಂಧ್ರಪ್ರದೇಶದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಟಿ.ವಿ. ಕಟ್ಟಿಮನಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ’ ಎಂದರು.

‘ಶೈಕ್ಷಣಿಕವಾಗಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಮಂಜುನಾಥ ಶಿವಲಿಂಗಮ್ಮನವರ, ಭಾಗ್ಯಮ್ಮ ಸಿ., ಸವಿತಾ ಶಾಮಪ್ಪ, ಈಶ್ವರಪ್ಪ ಛತ್ರದ, ಅನ್ನಪೂರ್ಣ ಗಾಣಿಗೇರ, ಶಶಿಕುಮಾರ ಹೊಸಮನಿ, ವಸಂತ ಭಜಂತ್ರಿ, ಶ್ರುತಿ ಸಂಸಗಿ ಹಾಗೂ ಮಧುಚಂದ್ರ ಎಂ.ಆರ್ ಅವರಿಗೆ ಚಿನ್ನದ ಪದಕ ನೀಡಲಾಗುತ್ತಿದೆ’ ಎಂದು ತಿಳಿಸಿದರು.



ಪುಸ್ತಕ ಪ್ರಶಸ್ತಿ

ವಿಜಯಪುರದ ಕನ್ನಡ ಪುಸ್ತಕ ಪರಿಷತ್ ಭಾನುವಾರ ಆಯೋಜಿಸಿದ್ದ ಸಮ್ಮೇಳನದಲ್ಲಿ ‘ಪ್ರಜಾವಾಣಿ’ ಮುಖ್ಯ ಉಪಸಂಪಾದಕಿ ರಶ್ಮಿ ಎಸ್, ರಾಜಕುಮಾರ ಬಿ, ಸೋಮಲಿಂಗ ಬೇಡರ ಮತ್ತು ಗುಂಡಣ್ಣ ಕಲಬುರ್ಗಿ ಅವರಿಗೆ ‘ಡಾ.ತೋಂಟದ ಸಿದ್ಧಲಿಂಗ ಶ್ರೀ’ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕವಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ, ಸಾಹಿತಿ ಪ್ರೊ.ಎಚ್‌.ಟಿ.ಪೋತೆ, ಸಮ್ಮೇಳನಾಧ್ಯಕ್ಷ ಸಾಹಿತಿ ಪ್ರಕಾಶ ಖಾಡೆ, ಆಲಮೇಲ ವಿರಕ್ತಮಠದ ಜಗದೇವ ಮಲ್ಲಿಬೊಮ್ಮಯ್ಯ ಸ್ವಾಮೀಜಿ, ಸಾಹಿತಿ ಶಂಕರ ಬೈಚಬಾಳ, ಪರಿಷತ್ತಿನ ಅಧ್ಯಕ್ಷ ಪ.ಗು. ಸಿದ್ದಾಪುರ, ಸಾಹಿತಿಗಳಾದ ಸಂಗಮೇಶ ಮೇತ್ರಿ, ಸಿದ್ದರಾಮ ಬಿರಾದಾರ ಇದ್ದಾರೆ ಪ್ರಜಾವಾಣಿ ಚಿತ್ರ

ಇಬ್ಬರು ವೈದ್ಯರು ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕ-ಆಂಧ್ರಪ್ರದೇಶ ಗಡಿಯ ವಿಡಪನಕಲ್ಲು ಬಳಿ ಭಾನುವಾರ ನಸುಕಿನಲ್ಲಿ ಭೀಕರ ಅಪಘಾತ ಸಂಭವಿಸಿದ್ದು ಬಳ್ಳಾರಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ (ವಿಮ್ಸ್) ಇಬ್ಬರು ವೈದ್ಯರು ಸೇರಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿಮ್ಸ್‌ನ ಕ್ಯಾನ್ಸರ್ ವಿಭಾಗದ ಡಾ. ಇ. ಗೋವಿಂದರಾಜು (52), ನೇತ್ರತಜ್ಞ ಡಾ. ಆರ್‌.ಬಿ ಯೋಗೇಶ್ (55) ಮತ್ತು ವಕೀಲ ವೆಂಕಟೇಶ್ವರ ನಾಯ್ಡು (52) ಮೃತರು. ಆಯುರ್ವೇದ ವೈದ್ಯ ಅಮರೇಗೌಡ ಪಾಟೀಲ್ ಅವರಿಗೆ ತೀವ್ರ ಗಾಯಗಳಾಗಿದ್ದು ಅವರನ್ನು ವಿಮ್ಸ್‌ಗೆ ದಾಖಲಿಸಲಾಗಿದೆ.

ನಾಲ್ವರೂ ನವೆಂಬರ್ 26ರಂದು ಪ್ರವಾಸಕ್ಕೆಂದು ಬ್ಯಾಂಕಾಕ್‌ಗೆ ತೆರಳಿದ್ದರು. ಶನಿವಾರ ರಾತ್ರಿ ಬೆಂಗಳೂರಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ಅವರು ಕಾರಿನಲ್ಲಿ ಅನಂತಪುರ ಮಾರ್ಗವಾಗಿ ಬಳ್ಳಾರಿಗೆ ಬರುತ್ತಿದ್ದರು. ವಿಡಪನಕಲ್ಲು ದಾಟಿದ ಬಳಿಕ ನಸುಕಿನ 4ರ ಸುಮಾರಿನಲ್ಲಿ ಕಾರು ಮರಕ್ಕೆ ಡಿಕ್ಕಿ ಹೊಡೆದಿದೆ. ಗೋವಿಂದರಾಜು ಅವರು ಬಳಸುತ್ತಿದ್ದ ಐಫೋನ್‌ನಿಂದ ಅವರ ಪತ್ನಿಗೆ ಅಪಾಯದ ಬಗ್ಗೆ ಸಂದೇಶ ಹೋಗಿತ್ತು ಎನ್ನಲಾಗಿದೆ.

ಅನಂತಪುರ ಜಿಲ್ಲೆಯ ಉರವಕೊಂಡ ತಾಲ್ಲೂಕಿನ ವಿಡಪನಕಲ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ದೇಹಗಳನ್ನು ಬಳ್ಳಾರಿಯ ವಿಮ್ಸ್‌ಗೆ ತಂದು ಶವಪರೀಕ್ಷೆ ನಡೆಸಿ ಸಂಬಂಧಿಗಳಿಗೆ ಹಸ್ತಾಂತರಿಸಲಾಯಿತು.

₹11,000 ಕೋಟಿ ಹೂಡಿಕೆಗೆ ಒಪ್ಪಂದ

ಬೆಂಗಳೂರು: ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ₹11,000 ಕೋಟಿ ಹೂಡಿಕೆ ಮಾಡುವ ಸಂಬಂಧ ಹೀರೊ ಫ್ಯೂಚರ್ ಎನರ್ಜೀಸ್ ಲಿಮಿಟೆಡ್ (ಎಚ್‌ಎಫ್‌ಇಪಿಎಲ್) ರಾಜ್ಯ ಸರ್ಕಾರದ ಜತೆಗೆ ಒಪ್ಪಂದ ಮಾಡಿಕೊಂಡಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ತಿಳಿಸಿದರು.

2025ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆ ಸಮಾವೇಶದ ಪೂರ್ವಸಿದ್ಧತೆಯ ಭಾಗವಾಗಿ ಸಚಿವ ಪಾಟೀಲ ಅವರ ನೇತೃತ್ವದ ನಿಯೋಗವು ಲಂಡನ್‌ನಲ್ಲಿ ಕೈಗೊಂಡಿರುವ ಉದ್ಯಮಿಗಳ ಸಭೆಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

‘ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಲ್ಲಿ ₹11,000 ಕೋಟಿ ಬಳಕೆ ಆಗಲಿದೆ. ಎಚ್‌ಎಫ್‌ಇಪಿಎಲ್‌ನ ಈ ಪ್ರಸ್ತಾವಿತ ಯೋಜನೆಗಳು 2025-26ರಿಂದ ಕಾರ್ಯಗತವಾಗಲಿವೆ. 2ರಿಂದ 3 ವರ್ಷಗಳಲ್ಲಿ ಈ ಮೊತ್ತ ಹೂಡಿಕೆ ಆಗಲಿದೆ. ಈ ಒಪ್ಪಂದದಿಂದ ಸುಮಾರು 3,000 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ’ ಎಂದು ಅವರು ತಿಳಿಸಿದರು.

ಹೀರೊ ಗ್ರೂಪ್‌ನ ಅಂಗಸಂಸ್ಥೆಯಾಗಿರುವ ಎಚ್‌ಎಫ್‌ಇಪಿಎಲ್ ಸೌರಶಕ್ತಿ, ಪವನಶಕ್ತಿ, ಹಸಿರು ಜಲಜನಕ ಉತ್ಪಾದನೆಯಲ್ಲಿ ಪರಿಣತಿ ಹೊಂದಿದೆ.

‘ದಂಪತಿಗೆ ಮೂರು ಮಕ್ಕಳು ಇರಲಿ’

ಒಂದನೇ ಪುಟದಿಂದ..

‘ಅಳಿವಿನಂಚಿನಲ್ಲಿರುವ ಸಮಾಜ ಕಣ್ಮರೆಯಾಗಲು ಬಾಹ್ಯ ಬೆದರಿಕೆಗಳ ಅಗತ್ಯವಿಲ್ಲ; ಅದು ತಾನಾಗೆ ನಶಿಸಿಹೋಗುತ್ತದೆ. ಇದರಿಂದಾಗಿ, ಅನೇಕ ಭಾಷೆಗಳು ಮತ್ತು ಸಮಾಜಗಳು ಅಸ್ತಿತ್ವ ಕಳೆದುಕೊಳ್ಳುತ್ತವೆ. ಆದ್ದರಿಂದ, ನಮ್ಮ ಜನಸಂಖ್ಯೆಯ ಬೆಳವಣಿಗೆ ದರವು 2.1ಕ್ಕಿಂತ ಕಡಿಮೆಯಾಗಬಾರದು’ ಎಂದು ಅವರು ಎಚ್ಚರಿಸಿದರು.

‘ನಮ್ಮ ದೇಶದ ಜನಸಂಖ್ಯಾ ನೀತಿ ನಿರ್ಧಾರವಾಗಿದ್ದು 1998 ಅಥವಾ 2002ರಲ್ಲಿ. ಈ ನೀತಿಯಲ್ಲಿ ಸಮಾಜದ ಜನಸಂಖ್ಯೆಯ ಬೆಳವಣಿಗೆ ದರವು 2.1ಕ್ಕಿಂತ ಕಡಿಮೆ ಇರಬಾರದೆಂದು ಹೇಳಲಾಗಿದೆ. ಸಮಾಜ ಉಳಿಯಬೇಕೆಂದರೆ ಜನಸಂಖ್ಯೆ ಬಹಳ ಮುಖ್ಯವಾಗಿದೆ. ಹಾಗಾಗಿ, ಪ್ರತಿ ದಂಪತಿ ಮೂವರು ಮಕ್ಕಳನ್ನು ಹೊಂದಲೇಬೇಕು’ ಎಂದು ಅವರು ಹೇಳಿದರು.

ಭಾಗವತ್ ಅವರ ಈ ಹೇಳಿಕೆಯು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಇದಕ್ಕೆ ಸಕಾರಾತ್ಮಕ ಮತ್ತು ನಕಾರಾತ್ಮಕ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಟಿಎಫ್‌ಆರ್ 2ಕ್ಕೆ ಕುಸಿದಿದೆ: 2021ರಲ್ಲಿ ಬಿಡುಗಡೆಯಾದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ, ಭಾರತದ ಟಿಎಫ್‌ಆರ್ 2.2ರಿಂದ 2ಕ್ಕೆ ಕುಸಿದಿದ್ದರೆ, ಗರ್ಭನಿರೋಧಕಗಳ ಬಳಕೆ ಪ್ರಮಾಣವು ಶೇ 54ರಿಂದ ಶೇ 67ಕ್ಕೆ ಏರಿದೆ.

ಶಿಕ್ಷಣ

ಮಕ್ಕಳು ಕಲಿಕೆಯಲ್ಲಿ ನಿಧಾನವೇ?



ಆರ್. ಶ್ರೀನಾಗೇಶ್

ಪ್ರತಿ ತಂದೆ-ತಾಯಿಗೆ ತನ್ನ ಮಗು ಕಲಿಕೆಯಲ್ಲಿ, ನಡವಳಿಕೆಯಲ್ಲಿ ಎಲ್ಲರಿಂದ ಮೆಚ್ಚುಗೆ ಗಳಿಸಬೇಕು ಎಂಬ ತುಡಿತ ಇರುತ್ತದೆ. ಇದಕ್ಕಾಗಿ ಅವರು ತಮ್ಮದೇ ಆದ ಮಾನದಂಡವನ್ನು ಇಟ್ಟುಕೊಂಡು ಮಗುವನ್ನು ಮಾಪನ ಮಾಡುತ್ತಿರುತ್ತಾರೆ.

ಶಿಕ್ಷಕರು ತರಗತಿಗಳಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕಾಗಿರುವುದರಿಂದ ಬೋಧನೆ ಎಲ್ಲರಿಗೂ ಒಂದೇ ರೀತಿಯದ್ದೇ ಆಗಿರುತ್ತದೆ. ಅವರ ನಿರೀಕ್ಷೆಗೆ ತಕ್ಕಂತೆ ಫಲಿತಾಂಶ ಪಡೆಯದ ಮಕ್ಕಳನ್ನು ದಡ್ಡರ ಗುಂಪಿಗೆ ಸೇರಿಸಲಾಗುತ್ತದೆ. ಆ ಮಕ್ಕಳ ನಡವಳಿಕೆ ತರಗತಿಯ ಶಿಸ್ತಿಗೆ ಒಳಪಡದಿದ್ದರೆ ಅವರನ್ನು ತರಲೆಗಳು ಎಂದು ಹಣೆಪಟ್ಟಿ ಕಟ್ಟಲಾಗುತ್ತದೆ.

ಇಂಥ ಹಣೆಪಟ್ಟಿ ಮಕ್ಕಳ ಮನಸ್ಸಿನ ಮೇಲೆ ಎಂಥ ಪರಿಣಾಮ ಬೀರಬಲ್ಲದು ಎಂಬುದರ ಸಣ್ಣ ಸುಳಿವು ಹಲವು ಪೋಷಕರು ಹಾಗೂ ಶಿಕ್ಷಕರಿಗೆ ಇರುವುದಿಲ್ಲ. ಮಾನದಂಡಕ್ಕೆ ಸರಿಯಾಗಿ ಮಗು ಫಲಿತಾಂಶ ಪಡೆಯದೇ ಇದ್ದಾಗ ಮಾನದಂಡವನ್ನು ಬದಲಾಯಿಸಬೇಕು ಎಂದು ಹೊಳೆಯುವುದಿಲ್ಲ.

ಕಲಿಕೆಯಲ್ಲಿ ಹಿಂದುಳಿದವರು ಎಂದು ಪರಿಗಣಿಸಿ, ಈ ಮಕ್ಕಳನ್ನು ಹೊರಗೆ ಕಳುಹಿಸುವುದು ಶಾಲೆಗೆ ಒಂದು ಉಪಾಯವಾದರೆ, ಅವಮಾನಕ್ಕೆ ಕಾರಣವಾದ ಇಂಥ ಮಕ್ಕಳು ನಿಷ್ಪ್ರಯೋಜಕ ಎಂದು ಪೋಷಕರು ಯೋಚಿಸುವ ಸಾಧ್ಯತೆ ಇರುತ್ತದೆ.

ಮಗುವಿನ ಸಾಮರ್ಥ್ಯ ಹಾಗೂ ದೌರ್ಬಲ್ಯಗಳ ಹಿನ್ನೆಲೆಯ ಬಗ್ಗೆ ಶಿಕ್ಷಕರು ಯೋಚಿಸಬೇಕು. ಮಕ್ಕಳ ಬೆಳವಣಿಗೆಯ ಹಂತಗಳನ್ನು ಅರ್ಥ ಮಾಡಿಕೊಂಡು ಆಯಾ ಹಂತದಲ್ಲಿ ಏನು ನೀಡಬೇಕು ಎಂಬುದರ ಬಗ್ಗೆ ಪೋಷಕರಿಗೆ ಗೊತ್ತಿರಬೇಕು.

ಮಗುವಿಗೆ ಅಗತ್ಯವಿರುವ ಭಾವಾನಾತ್ಮಕ ಬೆಂಬಲ ಒದಗಿಸುವುದು ಮುಖ್ಯ. ಅದರ ಆಸಕ್ತಿಯೇನು, ಆಸಕ್ತಿ ಹೊಂದಲು ಏನು ಮಾಡಬೇಕು ಎಂಬುದರ ಬಗ್ಗೆ ಪೋಷಕರು ಹಾಗೂ ಶಿಕ್ಷಕರಿಗೆ ಸ್ಪಷ್ಟತೆ ಇರಬೇಕು. ಕೌಶಲವಿಲ್ಲದ ಮಕ್ಕಳನ್ನು ಕೌಶಲವಿರುವ ಮಕ್ಕಳೊಂದಿಗೆ ಹೋಲಿಸಿ, ಹಂಗಿಸಬೇಡಿ.

ಕಲಿಕೆಯಲ್ಲಿ ಹಿಂದುಳಿಯಲು ಆನುವಂಶಿಕ ಕಾರಣಗಳಿರಬಹುದು. ಮನೆಯ ವಾತಾವರಣವೂ ಇರಬಹುದು. ಮೌಖಿಕ ಹಾಗೂ ದೈಹಿಕ ಹಿಂಸೆಯ ವಾತಾವರಣ ಮನೆಯಲ್ಲಿದ್ದರೆ ಮಗು ಭಯಭೀತಗೊಳ್ಳುವ ಸಾಧ್ಯತೆ ಹೆಚ್ಚು. ಕುಟುಂಬದ ಸದಸ್ಯರು ಪರಸ್ಪರ ಕದನದಲ್ಲಿಯೇ ನಿರತರಾಗಿದ್ದರೆ ಅದು ಮಗುವಿನ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಮಗು ಕಲಿಯಬೇಕಾದ ಸಮಯದಲ್ಲಿ ‘ಮುಂದೆ ಕಲಿಯತ್ತೆ ಬಿಡು’ ಎಂದು ಕಲಿಸುವ ಪ್ರಯತ್ನಕ್ಕೆ ಅಡ್ಡಿಯಾದರೆ, ವಯೋಮಾನಕ್ಕೆ ತಕ್ಕ ಕೌಶಲ ಮಗುವಿನಲ್ಲಿ ಕಾಣದಿರಬಹುದು. ಅಸಮರ್ಪಕ ನಡವಳಿಕೆಯನ್ನು ಪ್ರಾರಂಭದಲ್ಲಿಯೇ ತಿದ್ದದಿದ್ದರೆ, ಆ ನಡವಳಿಕೆಯೇ ಸಮರ್ಪಕ ನಡವಳಿಕೆ ಎಂದು ಮಗುವಿಗೆ ಎನಿಸಿಬಿಡಬಹುದು.

ಮಗು ಏನೆಲ್ಲ ಕಲಿಯಬೇಕು, ಅದರ ನಡವಳಿಕೆ ಯಾವ ರೀತಿ ಇರಬೇಕು, ಅದಕ್ಕೆ ಸರಿ-ತಪ್ಪುಗಳನ್ನು ಮನದಟ್ಟು ಮಾಡಲು ಏನು ಮಾಡಬೇಕು ಎನ್ನುವ ಬಗ್ಗೆ ಪೋಷಕರು ಒಮ್ಮತದ ತೀರ್ಮಾನಕ್ಕೆ ಬರಬೇಕು. ಭಿನ್ನಾಭಿಪ್ರಾಯವಿದ್ದರೆ, ಅದನ್ನು ಮಗುವಿನ ಉಪಸ್ಥಿತಿಯಲ್ಲಿ ಹೊರಹಾಕದೆ, ಅದು ಇಲ್ಲದಿದ್ದಾಗ ಮಾತನಾಡಿ ಬಗೆಹರಿಸಿಕೊಳ್ಳಬೇಕು.

ಬಾಲ್ಯದಲ್ಲಿ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರೆ, ಕಲಿಕೆಗೆ ಪೂರಕ ವಾತಾವರಣ ಇಲ್ಲದೇ ಇದ್ದರೆ, ಪೋಷಕರಲ್ಲಿ ಕೇಳಿಸಿಕೊಳ್ಳುವ ವ್ಯವಧಾನ ಇಲ್ಲದರೆ ಇದ್ದರೆ, ಹಿಂಸೆಯನ್ನು ಕಂಡಿದ್ದರೆ, ಸ್ವತಃ ಅನುಭವಿಸಿದ್ದರೆ, ಕಾಯಿಲೆಯಿಂದ ನರಳುತ್ತಿದ್ದರೆ, ಅಂಥ ಮಕ್ಕಳ ಸ್ವಭಾವ ಮಂದವಾಗಿರುವ ಸಾಧ್ಯತೆ ಇರುತ್ತದೆ.

ಕೆಲವು ವಿಷಯಗಳಲ್ಲಿ ನಿಧಾನ ಕಲಿಕೆ ತೋರಿದರೆ ಮತ್ತೆ ಕೆಲವುದರಲ್ಲಿ ಚುರುಕಾಗಿರಬಹುದು. ಮಕ್ಕಳಲ್ಲಿ ವಿಶಿಷ್ಟ ಕೌಶಲಗಳಿರಬಹುದು. ಆಟೋಟದಲ್ಲಿ ಉತ್ತಮ ಸಾಧನೆ ಮಾಡಬಹುದು. ಕೆಲವರು ಸಂಗೀತದಲ್ಲಿ, ಕೆಲವರು ನೃತ್ಯ ಪ್ರಕಾರದಲ್ಲಿ, ಮತ್ತೆ ಕೆಲವರು ಚಿತ್ರ ಬಿಡಿಸುವುದರಲ್ಲಿ ಅತ್ಯಂತ ಕುಶಲಿಗಳಿರಬಹುದು. ಇದನ್ನು ಗೌರವಿಸದೆ, ಅದಕ್ಕೆ ಮನ್ನಣೆ ನೀಡದೆ, ಕೇವಲ ಓದು, ಪರೀಕ್ಷೆಯಲ್ಲಿ ತೆಗೆಯುವ ಅಂಕಗಳಿಂದ ಮಾಪನ ಮಾಡಿದಾಗ ಅವರ ಕೌಶಲ ಹುದುಗಿ ಹೋಗುತ್ತದೆ. ಆತ್ಮವಿಶ್ವಾಸ ಕುಗ್ಗಿ ಹೋಗಬಹುದು. ಪ್ರತಿಭೆ ಹಾಗೂ ಓದು ಎರಡರ ನಡುವೆ ಸಮತೋಲನ ಕಾಯ್ದುಕೊಳ್ಳುವಂತೆ ಪೋಷಕರು ಮತ್ತು ಶಿಕ್ಷಕರು ಪ್ರೋತ್ಸಾಹ ನೀಡಬೇಕು.

ಪೋಷಕರು ಗಮನಿಸಬೇಕಾದ ಕೆಲವು ನಡವಳಿಕೆಗಳು

- ದೃಷ್ಟಿ, ಶ್ರವಣ ಶಕ್ತಿ ಸಮರ್ಪಕವಾಗಿದೆಯೇ?, ಭಾಷೆ ಕಲಿಕೆ ಮಗುವಿನ ವಯೋಮಾನಕ್ಕೆ ಸರಿಯಾಗಿದೆಯೇ?
- ತನ್ನ ವಸ್ತುಗಳನ್ನು ಗುರುತಿಸುವ, ತೆಗೆದಿಟ್ಟುಕೊಳ್ಳುವ ಕೌಶಲವಿದೆಯೇ?
- ಮೂರು ನಾಲ್ಕು ಆಯಾಮಗಳ ಕೆಲಸಗಳನ್ನು ಹೇಳಿದರೆ, ಮಗು ಎಷ್ಟರ ಮಟ್ಟಿಗೆ ಎಲ್ಲವನ್ನೂ ಮಾಡಬಲ್ಲದು?
- ಪ್ರಶ್ನೆ ಕೇಳಿದರೆ, ಸ್ವತಂತ್ರವಾಗಿ ಪದಗಳನ್ನು ಜೋಡಿಸಿಕೊಂಡು ಉತ್ತರ ಹೇಳಬಲ್ಲದೇ?
- ಮಗುವಿನ ಮನಸ್ಸಿನಲ್ಲಿ ಯಾವ ಹೆದರಿಕೆಗಳಿರಬಹುದು? ಬಾಲ್ಯದಲ್ಲಿ ಪೋಷಕರೇ ತುಂಬಿಸಿದ ಹೆದರಿಕೆಗಳ ಜತೆಗೆ ತನ್ನದೇ ಆದ ಹೆದರಿಕೆಗಳೇನಿರಬಹುದು ಎಂದು ಅದರ ಮಾತುಗಳಿಂದ ವ್ಯಕ್ತವಾಗುತ್ತದೆ. ಈ ಎಲ್ಲಾ ಹೆದರಿಕೆಗಳನ್ನೂ ಹೋಗಲಾಡಿಸುವ ಪ್ರಯತ್ನಕ್ಕೆ ಆದ್ಯತೆ ಕೊಡಬೇಕು.
- ಅದಕ್ಕೆ ಹಲವು ಆಟಿಕೆಗಳನ್ನು ಕೊಟ್ಟಾಗ ಯಾವ ರೀತಿಯ ಆಟವಾಡುತ್ತದೆ? ಇತರ ಮಕ್ಕಳ ಜೊತೆ ಆಟದಲ್ಲಿ ಎಷ್ಟರ ಮಟ್ಟಿಗೆ ಬೆರೆಯುತ್ತದೆ?

ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಗುವಿನ ಕೌಶಲದ ಕುರಿತು ಅಂದಾಜು ಸಿಗುತ್ತದೆ.

ಶಿಕ್ಷಕರು ಗಮನಿಸಬೇಕಾದ ಅಂಶಗಳು

- ಮಗು ಒಂದೆಡೆ ಕೂರಲಾಗದೆ ಚಡಪಡಿಸುತ್ತಿರುವುದೇ?
- ಸದಾ ಮಾತು/ಕೀಟಲೆಯಲ್ಲಿ ತೊಡಗಿರುವುದೇ?
- ಅನ್ಯಮನಸ್ಕನಾಗಿ ಕುಳಿತಿರುವುದೇ?
- ತನ್ನ ಸರದಿಗೆ ಕಾಯುವ ತಾಳ್ಮೆ ಇಲ್ಲವೇ?
- ಓದಲು/ಬರೆಯಲು ಮಗುವಿಗೆ ನೆರವಿನ ಅಗತ್ಯವಿದೆಯೇ?
- ತನ್ನ ಪುಸ್ತಕಗಳನ್ನು, ಊಟದ ಡಬ್ಬಿಯನ್ನು ಅಚ್ಚುಕಟ್ಟಾಗಿ ಜೋಡಿಸಿಕೊಳ್ಳಬಲ್ಲದೇ?
- ಸಹಪಾಠಿಗಳೊಂದಿಗೆ ಹೇಗೆ ನಡೆದುಕೊಳ್ಳುತ್ತದೆ?
- ಹಿಂಸಾ ಸ್ವರೂಪದ ಲಕ್ಷಣಗಳೇನಾದರೂ ಇವೆಯೇ?

ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಎಂದಾಕ್ಷಣ ಅವರನ್ನು ದಂಡಿಸುವ ಅಥವಾ ಹಣೆಪಟ್ಟಿ ಹಚ್ಚುವ ಬದಲಿಗೆ ಸಮಸ್ಯೆಗೆ ಪರಿಹಾರ ಹುಡುಕಿಕೊಳ್ಳುವುದು ಮುಖ್ಯ.

ದಡ್ಡ ಮಕ್ಕಳಿರಲ್ಲ. ಸರಿಯಾದ ಸಮಯಕ್ಕೆ ಅವರಲ್ಲಿರಬಹುದಾದ ಕೌಶಲಗಳನ್ನು ಗುರುತಿಸಿ, ಪ್ರೋತ್ಸಾಹಿಸಬೇಕಷ್ಟೆ.

ಪರಿಹಾರಗಳು

- ಬಹಳ ಮುಖ್ಯವಾಗಿ ತಾಳ್ಮೆ, ಎರಡನೆಯದಾಗಿ, ಮಕ್ಕಳಲ್ಲಿರುವ ಕೌಶಲದ ಕುರಿತು ಹೊಗಳಿಕೆ, ಪ್ರೋತ್ಸಾಹಕ ನುಡಿಗಳು. ಅವರ ಗಮನವನ್ನು ಬೇರೆಡೆ ಸೆಳೆಯುವ ಅಂಶಗಳನ್ನು ಕಡಿಮೆ ಮಾಡುವುದು, ತುಂಬ ಚಡಪಡಿಸುತ್ತಿದ್ದರೆ, ದೈಹಿಕ ಶಕ್ತಿಗೆ ಒಂದು ಕೆಲಸ ಕೊಡುವುದು. ಪ್ರಶ್ನೆಗಳನ್ನು ಕೇಳುತ್ತ, ಉತ್ತರವನ್ನು ಕೊಡುವಾಗ ಪ್ರೋತ್ಸಾಹಿಸಬೇಕು.
- ಕೆಲವು ಮಕ್ಕಳಿಗೆ ವಿಶಿಷ್ಟ ತರಬೇತಿ ಬೇಕಾಗಬಹುದು. ಶಾಲೆಗೆ ಮೊದಲು ಅಥವಾ ಅನಂತರ ಒಂದು ತಾಸು ಈ ಉದ್ದೇಶಕ್ಕೆ ವಿನಿಯೋಗಿಸಿ, ಅದಕ್ಕೆ ಪಠ್ಯೇತರ ವಿಷಯಗಳಲ್ಲಿ ಚಟುವಟಿಕೆಗಳನ್ನು ಮಾಡಿಸಬೇಕು. ಅದಕ್ಕೆ ಗೊತ್ತಿರುವ ಪದಗಳನ್ನು ಅರ್ಥದ ಪ್ರಕಾರವೋ, ಶಬ್ದದ ಪ್ರಕಾರವೋ ಹೇಳಿಸುವುದು, ಸಂಖ್ಯೆಗಳನ್ನು ಉಲ್ಟಾ ಹೇಳಿಸುವುದು, ನಾಲಿಗೆ ಕ್ಲಿಷ್ಟವಾಗುವ ವಾಕ್ಯಗಳನ್ನು ಹೇಳಿಸುವುದು ಇಂಥ ಉಪಾಯಗಳಿಂದ ಆ ಮಕ್ಕಳ ಕಲಿಕೆಗೆ ಒಂದು ಸಕಾರಾತ್ಮಕ ದಾರಿಯನ್ನು ತೋರಿಸಬಹುದು. ಶಿಕ್ಷಕರ ಈ ಪ್ರಯೋಗಗಳಿಗೆ ಕುಟುಂಬದ ಸದಸ್ಯರು ಪ್ರೋತ್ಸಾಹಿಸಬೇಕು.

ಐಎಎಸ್ ಪರೀಕ್ಷೆಗೆ ತಯಾರಿ ಹೀಗಿರಲಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ನಾನು ಪದವಿ ಕೋರ್ಸ್ ಮುಗಿಸಿ, ಐಎಎಸ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ. ದುಬಾರಿ ಕೋಚಿಂಗ್ ತೆಗೆದುಕೊಳ್ಳಲು ಸಾಧ್ಯವಿಲ್ಲ. ಖುದ್ದಾಗಿ ತಯಾರಾಗುವುದು ಹೇಗೆ?**
  ಚಂದ್ರಿಕ, ಬೆಂಗಳೂರು
- **ಸರ್, ನನಗೀಗ 32 ವರ್ಷ. ಐಎಎಸ್ ಪರೀಕ್ಷೆ ಬರೆಯಲು ಸಾಧ್ಯವೇ? ಹೆಸರು, ಊರು ತಿಳಿಸಿಲ್ಲ**

ಐಎಎಸ್ ನೇಮಕಾತಿಗೆ, ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಯನ್ನು ಬರೆಯಲು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 32 ವರ್ಷದವರೆಗೂ, ಹಾಗೂ ಇನ್ನಿತರ ವರ್ಗಗಳಿಗೆ 37 ವರ್ಷದವರೆಗೂ ಅವಕಾಶವಿರುತ್ತದೆ
ಕಠಿಣವಾದ ಈ ಪರೀಕ್ಷೆಗೆ ತಯಾರಾಗಲು ಕೋಚಿಂಗ್ ಕಡ್ಡಾಯವಲ್ಲ. ಈ ಸಲಹೆಗಳನ್ನು ಅನುಸರಿಸಿ.

- ಮೊದಲಿಗೆ, ಪೂರ್ವಭಾವಿ ಮತ್ತು ಅಂತಿಮ ಪರೀಕ್ಷೆಗಳ ಮಾದರಿ, ಪಠ್ಯಕ್ರಮವನ್ನು ಅರ್ಥೈಸಿಕೊಳ್ಳಬೇಕು.
- ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನಿಸಿ, ಅದಕ್ಕೆ ಅನುಗುಣವಾಗಿ ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿಕೊಳ್ಳಬೇಕು.
- ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ, ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಮತ್ತು ಆಳವಾದ ಓದುವಿಕೆ, ಸಮೀಕ್ಷೆ, ಪುನರುಚ್ಚಾರಣೆ ಮತ್ತು ಪುನರಾವರ್ತನೆಯಿಂದ ಓದುವಿಕೆ ಪರಿಣಾಮಕಾರಿಯಾಗಿಬೇಕು.
- ಸೂಕ್ತವಾದ ಪೀಠಿಕೆ, ವಿಮರ್ಶಾತ್ಮಕ ವಿಷಯ ನಿರೂಪಣೆ ಹಾಗೂ ಮುಕ್ತಾಯ ಭಾಗದಲ್ಲಿ ವಿಷಯದ ಕುರಿತ ಪರಿಹಾರ ಮಾರ್ಗಗಳು, ಸಲಹೆಗಳು ಮತ್ತು ತಜ್ಞರ ಸಲಹೆಗಳೊಂದಿಗೆ, ಉತ್ತಮವಾದ ಪ್ರಬಂಧಗಳನ್ನು ಬರೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಿ.
- ಖುದ್ದಾಗಿ ತಯಾರಾಗಿ ಐಎಎಸ್ ಅಧಿಕಾರಿಗಳಾಗಿರುವ ಸಾಧಕರ ಕಥೆಗಳನ್ನು, ಸಂದರ್ಶನಗಳನ್ನು ಮತ್ತು ವಿಡಿಯೊಗಳನ್ನು ಗಮನಿಸಿ.
- ಗೂಗಲ್ ಮತ್ತು ಯೂಟ್ಯೂಬಿನಲ್ಲಿ, ತಯಾರಿ ಕುರಿತ ಮಾಹಿತಿ ಮತ್ತು ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ.
- ಸ್ವಯಂ-ಮೌಲ್ಯಮಾಪನಕ್ಕಾಗಿ, ಅಣಕು ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿರಬೇಕು.
- ಸುದ್ದಿವಾಹಿನಿಗಳಲ್ಲಿ ನಡೆಯುವ ಪ್ರಮುಖ ಚರ್ಚೆಗಳು, ದಿನಪತ್ರಿಕೆಗಳ ಸಂಪಾದಕೀಯ ಮತ್ತು ನಿಯತಕಾಲಿಕೆಗಳನ್ನು ಗಮನಿಸುತ್ತಿರಬೇಕು.
- ಪರಿಶ್ರಮ, ಬದ್ಧತೆ, ಆತ್ಮ ವಿಶ್ವಾಸ ಮತ್ತು ನಿಗದಿತ ವೇಳಾಪಟ್ಟಿಯಂತೆ ಸಮಯದ ನಿರ್ವಹಣೆ ಅತ್ಯಗತ್ಯ.

ಪರಿಣಾಮಕಾರಿ ಅಧ್ಯಯನದ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಫೆಡರಲ್ ಬ್ಯಾಂಕ್ ಸ್ಕಾಲರ್‌ಶಿಪ್

ಫೆಡರಲ್ ಬ್ಯಾಂಕ್‌ನ ಓಹೊಮಿ ಮೆಮೊರಿಯಲ್ ಫೌಂಡೇಷನ್ ಆರ್ಥಿಕ ನೆರವು ಒದಗಿಸಲಿದೆ.

ಅರ್ಹತೆ: ಅಭ್ಯರ್ಥಿಗಳು 2024-25ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ / ಅನುದಾನಿತ / ಸರ್ಕಾರಿ-ಮಾನ್ಯತೆ ಪಡೆದ ಸೆಲ್ಫ್-ಫೈನಾನ್ಸಿಂಗ್ / ಸ್ವಾಯತ್ತ ಕಾಲೇಜುಗಳಲ್ಲಿ ಎಂಬಿಬಿಎಸ್, ಬಿ.ಇ./ಬಿ.ಟೆಕ್., ಎಂಬಿಎ, ಬಿ.ಎಸ್‌ಸಿ ಇನ್ ನರ್ಸಿಂಗ್, ಬಿ.ಎಸ್‌ಸಿ ಇನ್ ಅಗ್ರಿಕಲ್ಚರ್, ಬಿ.ಎಸ್‌ಸಿ (ಆನರ್ಸ್) ಕೋ-ಆಪರೇಷನ್ ಅಂಡ್ ಬ್ಯಾಂಕಿಂಗ್ ಕೋರ್ಸ್‌ಗಳಿಗೆ ಮೆರಿಟ್‌ನಲ್ಲಿ ದಾಖಲಾಗಿರಬೇಕು. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ₹3,00,000ಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ನೆರವು: ಟ್ಯೂಷನ್ ಶುಲ್ಕ ಮರುಪಾವತಿ ಮತ್ತು ಇತರ ಪ್ರಯೋಜನಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 18-12-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/FHMF1

ಅಮೆಜಾನ್ ಫ್ಯೂಚರ್ ಎಂಜಿನಿಯರ್ ಸ್ಕಾಲರ್‌ಶಿಪ್

ಅಮೆಜಾನ್‌ನ ಉಪಕ್ರಮವಾಗಿದ್ದು, ಶೈಕ್ಷಣಿಕವಾಗಿ ಪ್ರತಿಭಾನ್ವಿತರಾದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೆರವು ನೀಡಲಿದೆ.

ಅರ್ಹತೆ: ಬಿ.ಇ ಅಥವಾ ಬಿ.ಟೆಕ್, ಕಂಪ್ಯೂಟರ್ ವಿಜ್ಞಾನ ಕೋರ್ಸ್‌ಗಳಿಗೆ ದಾಖಲಾಗಿರುವ ಭಾರತೀಯ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹3,00,000ಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ನೆರವು: ಪದವಿಯವರೆಗೆ ವಾರ್ಷಿಕ ₹50,000 ಮತ್ತು ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೆ ದಿನ: 31-12-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/pjvi/AFES2

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜವಿಜ್ಞಾನ: ಇತಿಹಾಸ

ಅಧ್ಯಾಯ–4 ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಬಹು ಆಯ್ಕೆ ಪ್ರಶ್ನೆಗಳು

33) ಕಿತ್ತೂರು ರಾಣಿ ಚೆನ್ನಮ್ಮ ಯಾವುದರ ವಿರುದ್ಧ ಹೋರಾಡಿದಳು?
ಎ) ಖಾಯಂ ಜಮಿನುದಾರಿ ಪದ್ಧತಿ ಬಿ) ರೈತುವಾರಿ ಪದ್ಧತಿ
ಸಿ) ಸಹಾಯಕ ಸೈನ್ಯ ಪದ್ಧತಿ ಡಿ) ದತ್ತು ಮಕ್ಕಳಿಗೆ ಹಕ್ಕಿಲ್ಲ
ಉತ್ತರ:– ಡಿ

34) ಕಿತ್ತೂರಿನ ಚೆನ್ನಮ್ಮಳನ್ನು ಬೆಂಬಲ ನೀಡುತ್ತಿದ್ದ ಸಂಗೊಳ್ಳಿ ರಾಯಣ್ಣನ ವಿರುದ್ಧ ಸಂಚನ್ನು ರೂಪಿಸಿದವರು ಯಾರು?
ಎ) ಅಮಲ್ದಾರನಾಗಿದ್ದ ಕೃಷ್ಣರಾಯ ಬಿ) ಪೊಲೀಸ್ ಪರಮಪ್ಪ
ಸಿ) ದಿವಾನ್ ಚೆಮ್ಮಪ್ಪ ಡಿ) ಚಿಪ್ಪುರಂಡ ಸೊಮಣ್ಣ
ಉತ್ತರ:– ಎ

35) ಬ್ರಿಟಿಷರು ಚಿಕ್ಕವೀರರಾಜೇಂದ್ರನನ್ನು 1834ರಲ್ಲಿ ಪದಚ್ಯುತಗೊಳಿಸಿ ಅವನನ್ನು ಬೆಂಗಳೂರಿನ ಮೂಲಕ ಅಂತಿಮವಾಗಿ ಎಲ್ಲಿಗೆ ಸಾಗಿಸಿದರು?
ಎ) ಕಾಶಿ ಬಿ) ಮದ್ರಾಸ್
ಸಿ) ಕೋಲ್ಕತ್ತಾ ಡಿ) ದ್ವಾರಕಾ
ಉತ್ತರ:– ಎ

36) ರಾಜಮುಡಿ ಎಂಬ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು?
ಎ) ಚಿಕ್ಕದೇವರಾಜ ಒಡೆಯರ್ ಬಿ) ರಾಜ ಒಡೆಯರು
ಸಿ) ಜಯಚಾಮರಾಜೇಂದ್ರ ಒಡೆಯರ್ ಡಿ) ಯಾರೂ ಅಲ್ಲ
ಉತ್ತರ:– ಬಿ

ಪ್ರಶ್ನೋತ್ತರ:–

1) ಯಾವ ಕಾರಣಕ್ಕಾಗಿ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು?
ಉತ್ತರ:– 18ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ರಾಜಕೀಯ ಅಧಿಪತ್ಯವನ್ನು ಸಾಧಿಸುವ ಜೊತೆಜೊತೆಯಲ್ಲಿ ವ್ಯಾಪಾರ ಮತ್ತು ಕೃಷಿ ಕ್ಷೇತ್ರಗಳಲ್ಲಿ ಜನರನ್ನು ತಮ್ಮ ಹಿತಾಸಕ್ತಿಗಳಿಗಾಗಿ ಶೋಷಿಸಲು ತೊಡಗಿದರು. ಈ ಶೋಷಣೆಗಳು ಕರ್ನಾಟಕವೂ ಸೇರಿದಂತೆ ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನು ಸೃಷ್ಟಿಸಿದವು. ದೇಶೀ ರಾಜರು ರಾಜಕೀಯ ಅಸ್ಥಿರತೆಯನ್ನು ಅನುಭವಿಸತೊಡಗಿದರು. ಇದರಿಂದ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು.

2) ಗುಜರಾತಿನ ದ್ವಾರಕೆಯಿಂದ ಬಂದ ಯದುರಾಯನಿಗೆ ಶ್ರೀರಂಗಪಟ್ಟಣದ ರಾಣಿ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವ ಪರಿಸ್ಥಿತಿ ಯಾಕೆ ಉದ್ಭವವಾಯಿತು?
ಉತ್ತರ:– ವಿಜಯನಗರ ಸಾಮ್ರಾಜ್ಯದ ಪತನಾನಂತರ, ಮೈಸೂರು ನಗರದ ಬಳಿಯ ಹದಿನಾಡು ಎಂಬ ಪಾಳೆಯಪಟ್ಟಿನಲ್ಲಿ ಶ್ರೀರಂಗಪಟ್ಟಣದ ಮಾಂಡಲಿಕನಿಗೆ ಅಧೀನನಾಗಿ ಚಾಮರಾಜ ಎಂಬುವವನು ಆಳುತ್ತಿದ್ದನು. ಗಂಡು ಮಕ್ಕಳಿಲ್ಲದ ಇವನ ಕಾಲಾನಂತರ ಅವನ ದಳವಾಯಿ ಕಾರುಗಳ್ಳಿಯ ಮಾರನಾಯಕನು ರಾಜ್ಯಾಡಳಿತ ಮಾಡುತ್ತಿದ್ದ ಈತ ರಾಜಕುಮಾರಿಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಒತ್ತಾಯ ಮಾಡಿದನು. ಆದರೆ ಇದಕ್ಕೆ ಯಾರೂ ಒಪ್ಪಿಗೆ ನೀಡಲಿಲ್ಲ. ಇದೇ ವೇಳೆಗೆ ಗುಜರಾತಿನ ದ್ವಾರಕೆಯಿಂದ ಯದುರಾಯನು ತನ್ನ ತಮ್ಮ ಕೃಷ್ಣರಾಯನೊಂದಿಗೆ ಮೈಸೂರಿಗೆ ಬಂದನು. ತಾನಾಗಿಯೇ ಮುಂದೆ ಬಂದು ರಾಣಿಗೆ ಸಹಾಯ ಮಾಡಲು ಒಪ್ಪಿ ಮಾರನಾಯಕನನ್ನು ಕೊಂದನು. ಇದರಿಂದ ಸಂತೋಷಗೊಂಡ ರಾಣಿಯು ತನ್ನ ಮಗಳನ್ನು ಯದುರಾಯರಿಗೆ ವಿವಾಹ ಮಾಡಿಕೊಟ್ಟಳು.

3) ಗುಜರಾತಿನ ದ್ವಾರಕೆಯಿಂದ ಯದುರಾಯನು ತನ್ನ ತಮ್ಮ ಕೃಷ್ಣರಾಯನೊಂದಿಗೆ ಮೈಸೂರಿಗೆ ಬಂದು. ತಾನಾಗಿಯೇ ಮುಂದೆ ಬಂದು ರಾಣಿಗೆ ಸಹಾಯ ಮಾಡಿದ ಪರಿಣಾಮ ಏನಾಯಿತು?
ಉತ್ತರ:– ಇದರ ಪರಿಣಾಮ:–
1) ಮಾರನಾಯಕನ ಉಪಟಳದಿಂದ ರಾಜ್ಯ ಮುಕ್ತವಾಯಿತು
2) ಮೈಸೂರಿನಲ್ಲಿ ಒಡೆಯರ ಪರಂಪರೆ ಆರಂಭವಾಯಿತು

4) ಮೈಸೂರಿನಲ್ಲಿ ಎಷ್ಟು ಒಡೆಯರು ಆಳ್ವಿಕೆ ಮಾಡಿದ್ದಾರೆ?
ಉತ್ತರ:– ಮೈಸೂರಿನಲ್ಲಿ ಯದುರಾಯರಿಂದ ಜಯಚಾಮರಾಜ ಒಡೆಯರ್‌ವರೆಗೆ 25 ಒಡೆಯರು ಆಳಿದ್ದಾರೆ

5) ಯಾರು ಶ್ರೀರಂಗಪಟ್ಟಣವನ್ನು ವಿಜಯನಗರದ ರಾಜ ಪ್ರತಿನಿಧಿಯಿಂದ ವಶಪಡಿಸಿಕೊಂಡು ರಾಜಧಾನಿಯನ್ನಾಗಿ ಮಾಡಿದರು?
ಉತ್ತರ:– ರಾಜ ಒಡೆಯರು

6) ಮೈಸೂರಿನಲ್ಲಿ ನವರಾತ್ರಿ ಉತ್ಸವ ಆರಭಿಸಿದವರು ಯಾರು?
ಉತ್ತರ:– ರಾಜ ಒಡೆಯರು

7) ರಾಜಮುಡಿ ಎಂಬ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು?
ಉತ್ತರ:– ರಾಜ ಒಡೆಯರು

8) ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟಿಸಿದರು. ಮಾಗಡಿ, ಮಧುಗಿರಿ, ಕೊರಟಗೆರೆ ಮತ್ತಿತರ ಪ್ರಾಂತ್ಯಗಳನ್ನು ವಶಪಡಿಸಿಕೊಂಡವರು ಯಾರು?
ಉತ್ತರ:– ಚಿಕ್ಕದೇವರಾಜ ಒಡೆಯರು

9) ಚಿಕ್ಕದೇವರಾಜ ಒಡೆಯರಿಗೆ ಇರುವ ಬಿರುದುಗಳು ಯಾರು?
ಉತ್ತರ:– ಚಿಕ್ಕದೇವರಾಜ ಒಡೆಯರಿಗೆ ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ, ನವಕೋಟಿ ನಾರಾಯಣ ಎಂಬ ಬಿರುದುಗಳಿದ್ದವು.

10) ಚಿಕ್ಕದೇವರಾಜ ಒಡೆಯರ ಸಾಧನೆಗಳೇನು?
ಉತ್ತರ:– ಇವರು ಒಂದು ಸಚಿವ ಸಂಪುಟ(ಅಠಾರ ಕಛೇರಿ)ವನ್ನು ನೇಮಕ ಮಾಡಿದ್ದರು. ಅಂಚೆ ವ್ಯವಸ್ಥೆಯು ಇವರ ಕಾಲದಲ್ಲಿ ಜಾರಿಯಾಯಿತು. ಕಾವೇರಿ ನದಿಗೆ ಅಣೆಕಟ್ಟು ಕಟ್ಟಿ ಚಿಕ್ಕದೇವರಾಜ ನಾಲೆ ಮತ್ತು ದೊಡ್ಡ ದೇವರಾಜ ನಾಲೆ ಎಂಬ ಎರಡು ಕಾಲುವೆಗಳನ್ನು ನಿರ್ಮಿಸಿ ಅಧಿಕ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯುವಂತೆ ಮಾಡಿದರು.

11) ಚಿಕ್ಕದೇವರಾಜ ಒಡೆಯರು ಯಾರು ಯಾರಿಗೆ ಆಶ್ರಯ ನೀಡಿದರು?
ಉತ್ತರ:– ಅನೇಕ ಕವಿಗಳಿಗೆ ಮತ್ತು ಪಂಡಿತರಿಗೆ ಆಶ್ರಯ ನೀಡಿದರು. ಉದಾ:– ತಿರುಮಲಾರ್ಯ, ಸಂಚಿ ಹೊನ್ನಮ್ಮ ಮುಂತಾದವರು

12) ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿದ್ದು ಯಾವಾಗ?
ಉತ್ತರ:– ಮೊಘಲ್ ಚಕ್ರವರ್ತಿ ಔರಂಗಜೇಬ್‌ನ ಮರಣ 1707ರಲ್ಲಿ ಸಂಭವಿಸಿತು ಇದರೊಂದಿಗೆ ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿತು.

13) ಯಾವ ವರ್ಷ ಚಿಕ್ಕದೇವರಾಜ ಒಡೆಯರ ಮರಣ ಹೊಂದಿದರು?
ಉತ್ತರ:– 1704

14) ಹೈದರಾಲಿಯು ಅರಸರಾಗಿದ್ದ ಯಾರನ್ನು ಗೃಹ ಬಂಧನದಲ್ಲಿರಿಸಿ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡನು?
ಉತ್ತರ:– ಎರಡನೇ ಕೃಷ್ಣರಾಜ ಒಡೆಯ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - MATHEMATICS

VECTOR ALGEBRA

1. Define a unit vector.
Ans:A Unit vector is a vector whose magnitude is 1.

2. Define a zero vector.
Ans:- Zero vector is a vector whose magnitude is zero.

3. Define a position vector of a point.
Ans:- Position vector of a point P with respect to O is $\overrightarrow{OP}$.

4. Find the direction cosines of the vector $6i - 2j + 3k$.
Soln:- Let $a = 6i - 2j + 3k$
Then the unit vector in the direction of ‘a’ is given by -

$$\hat{a} = \frac{a}{|a|} = \frac{6i-2j+3k}{\sqrt{6^2+(-2)^2+3^2}} = \frac{6i-2j+3k}{\sqrt{49}} = \frac{6i-2j+3k}{7} = \frac{6}{7}i - \frac{2}{7}j + \frac{3}{7}k$$

Hence direction cosines of ‘a’ are $\frac{6}{7}, -\frac{2}{7}, \frac{3}{7}$

5. Find the cosine of the angle between the vectors - $i + j + k$ and $2i + 3j - 4k$.
Soln: - Let $a = i + j + k$, $b = 2i + 3j - 4k$.

$$\therefore |a| = \sqrt{1^2+1^2+1^2} = \sqrt{3},$$
$$|b| = \sqrt{2^2+3^2+(-4)^2} = \sqrt{29}$$

and $a \cdot b = (i + j + k) \cdot (2i + 3j - 4k) = 1$


$$\therefore \cos\theta = \frac{a.b}{|a|.|b|} = \frac{1}{\sqrt{3}.\sqrt{29}} = \frac{1}{\sqrt{87}}$$

6. If ABCDE is a pentagon. Prove that $\overrightarrow{AB}+\overrightarrow{AE}+\overrightarrow{BC}+\overrightarrow{DC}+\overrightarrow{ED}+\overrightarrow{AC} = 3\overrightarrow{AC}$
Soln:- Consider the L.H.S –

$$\overrightarrow{AB}+\overrightarrow{AE}+\overrightarrow{BC}+\overrightarrow{DC}+\overrightarrow{ED}+\overrightarrow{AC}$$
$$=(\overrightarrow{AB}+\overrightarrow{BC})+(\overrightarrow{AE}+\overrightarrow{ED})+(\overrightarrow{DC}+\overrightarrow{AC})$$
$$=\overrightarrow{AC}+\overrightarrow{AD}+\overrightarrow{DC}+\overrightarrow{AC}=2\overrightarrow{AC}+(\overrightarrow{AD}+\overrightarrow{DC})$$
$$=2\overrightarrow{AC}+\overrightarrow{AC}=3\overrightarrow{AC}=\text{R.H.S}$$

7. Write a brief note on negative of a vector.
Ans:- Negative of a vector is a vector having the same magnitude as that of a given vector $\vec{a}$ and the direction opposite to that of $\vec{a}$ is called the negative vector of $\vec{a}$ and it is denoted by $-\vec{a}$.

8. State the parallelogram law of addition.
Ans:-




Ans:-
Let $\vec{a}$ and $\vec{b}$ be two vectors such that $\vec{a} = \overrightarrow{AB}$ and $\vec{b} = \overrightarrow{AC}$

Let AB and AC be the adjacent sides of the parallelogram. Then the vector $\overrightarrow{AD}$, represented by the diagonal, is called the sum $\vec{a}+\vec{b}$ of the vectors $\vec{a} = \overrightarrow{AB}$ & $\vec{b} = \overrightarrow{AC}$. This is parallelogram law of addition of vectors.


9. What is a proper vector?
Ans:- A vector which is not a zero vector, is called a proper vector.

10. What are Co-initial vectors?
Ans:- Vectors having the same initial point are known as co-initial vectors.



$\overrightarrow{OA}$ and $\overrightarrow{OB}$ are co-initial vectors with the same initial point O in the fig above.

11. What are Collinear vectors?
Ans:- Vectors having the same or parallel supports are known as collinear vectors.



$\overrightarrow{AB}$, $\overrightarrow{BC}$ and $\overrightarrow{AC}$ are collinear vectors in the figure above.

12. What are Like vectors?
Ans:- Vectors having the same direction are known as like vectors.

13. What are Unlike vectors?
Ans:- Collinear vectors having opposite directions are known as unlike vectors.

14. What are Free vectors?
Ans:- If the initial point of a vector is not specified, it is said to be a free vector.

15. What is a localised vector?
Ans:- A vector drawn parallel to a given vector through a specified point as the initial point is known as a localized vector.

16. What are Coplanar vectors?
Ans:- Three or more non-zero vectors lying in the same plane or parallel to the same plane are said to be coplanar vector.

17. What are Equal vectors?
Ans:- Two vectors $\vec{a}$ and $\vec{b}$ are said to be equal, if they have - the same magnitude
(i) the same or parallel supports
(ii) the same sense (i.e., direction)
and we write $\vec{a} = \vec{b}$

(Contd.....)

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರಗೆ ಅರವಿಂದ ಲಿಂಬಾವಳಿ ಎಚ್ಚರಿಕೆ

'ಹೊಂದಾಣಿಕೆಗಾಗಿ ಅಧ್ಯಕ್ಷರನ್ನಾಗಿ ಮಾಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಹೊಂದಾಣಿಕೆ ರಾಜಕಾರಣ ಮಾಡಲು ನಿಮ್ಮನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿಲ್ಲ. ಹುಷಾರ್!' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಬಿ.ವೈ.ವಿಜಯೇಂದ್ರ ಅವರಿಗೆ ಎಚ್ಚರಿಕೆ ಕೊಟ್ಟರು.

ವಕ್ಫ್ ಮಂಡಳಿಯಿಂದ ಭೂಕಬಳಿಕೆ ವಿರೋಧಿಸಿ ಭಾನುವಾರ ಇಲ್ಲಿ ಹಮ್ಮಿಕೊಂಡಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಬಿಜೆಪಿ ಜನಜಾಗೃತಿ ಹೋರಾಟ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕಳೆದ ಬಾರಿ ಲೋಕಸಭೆ ಚುನಾವಣೆಯಲ್ಲಿ ಹಲವು ಕ್ಷೇತ್ರಗಳಲ್ಲಿ ಸೋತರೂ, ಆತ್ಮಾವಲೋಕನಕ್ಕೆ ಮುಂದಾಗಲಿಲ್ಲ. ವಾಲ್ಮೀಕಿ ಹಗರಣದ ವಿರುದ್ಧ ನಾವು ಮಾಡಲು ಉದ್ದೇಶಿಸಿದ್ದ ಪಾದಯಾತ್ರೆಗೂ ಅನುಮತಿ ಕೊಡಲಿಲ್ಲ' ಎಂದು ಹರಿಹಾಯ್ದರು.

'ವಕ್ಫ್ ಮಂಡಳಿಯಿಂದ ಭೂಕಬಳಿಕೆ ವಿರುದ್ಧದ ಹೋರಾಟ ಜನಪರವಾದದ್ದು. ಇದರ ನೇತೃತ್ವ ವಹಿಸಿದ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸುತ್ತೇನೆ ಎನ್ನುತ್ತೀರಾ?' ಎಂದು ಪ್ರಶ್ನಿಸಿದ ಅವರು, 'ರಾಜ್ಯದಲ್ಲಿ ಉಪಚುನಾವಣೆ ಮುಗಿದು ಬಹಳ ದಿನಗಳಾಯಿತು. ಇನ್ನಾದರೂ ನಮ್ಮ ಜತೆಗೆ ಸೇರಿಕೊಂಡು, ವಕ್ಫ್ ಮಂಡಳಿ ವಿರುದ್ಧ ರಸ್ತೆಗಿಳಿದು ಹೋರಾಟಕ್ಕೆ ಬನ್ನಿ. ನಮ್ಮೊಂದಿಗೆ ಬರಲು ಇಷ್ಟ ಇಲ್ಲದಿದ್ದರೆ ನೀವೇ ಪ್ರತ್ಯೇಕವಾಗಿ ಹೋರಾಡಿ. ನಮ್ಮ ಪಾಡಿಗೆ ನಾವು ಹೋರಾಟ ಮಾಡುತ್ತೇವೆ' ಎಂದರು.

'ಜನಪರವಾಗಿ ಕೆಲಸ ಮಾಡಲೆಂದು ನಿಮ್ಮನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರೆ ನೀವು ಹಾದಿಬೀದಿಯಲ್ಲಿ ನಿಂತು ಮಾತನಾಡುತ್ತೀರಾ? ನಾವು ಹಾದಿಬೀದಿಯಲ್ಲಿ ನಿಂತು ಹೇಳಿಕೆ ಕೊಡುತ್ತೇವೆ. ಬೆಂಗಳೂರಿನಲ್ಲಿ ಕುಳಿತು ನೀವೇ ಗೊಂದಲ ಸೃಷ್ಟಿಸುತ್ತೀರಿ. ಇದು ಪಕ್ಷಕ್ಕೂ ಹಾಗೂ ನಿಮಗೂ ಗೌರವ ತರುವುದಿಲ್ಲ. ನೀವು ಹೊಂದಾಣಿಕೆ ರಾಜಕಾರಣ ಮಾಡಿದ್ದರಿಂದ ನಾವು ಇಂದು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ನೀವು ಚುನಾವಣೆಯಲ್ಲಿ ಏನೇನು ಮಾಡಿದ್ದೀರಿ ಎಂದು ಹೇಳುವ ಸಂದರ್ಭ ಇದಲ್ಲ. ಜನರು ಬಿಜೆಪಿ ಮೇಲೆ ನಂಬಿಕೆ ಇಟ್ಟಿದ್ದಾರೆ. ನೀವು ಜನರ ಜತೆಗೆ ಹೋರಾಟಕ್ಕೆ ಇಳಿಯಿರಿ. ಆಗ ಶಭಾಷ್ ಎನ್ನುತ್ತೇವೆ' ಎಂದು ವಾಗ್ದಾಳಿ ನಡೆಸಿದರು.

ಗೋಪ್ಯ ಸಭೆ: ಸಮಾವೇಶಕ್ಕೂ ಮುನ್ನ, ನಗರದ ಹೋಟೆಲ್‌ನಲ್ಲಿ ಶಾಸಕರಾದ ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಮುಖಂಡರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಜಿ.ಎಂ. ಸಿದ್ದೇಶ್ವರ, ಪ್ರತಾಪ್ ಸಿಂಹ ಮತ್ತಿತರರು ಗೋಪ್ಯ ಸಭೆ ನಡೆಸಿ ಚರ್ಚಿಸಿದರು.



ಬೆಳಗಾವಿಯಲ್ಲಿ ಭಾನುವಾರ ನಡೆದ ಜನಜಾಗೃತಿ ಹೋರಾಟ ಸಮಾವೇಶಕ್ಕೂ ಮುನ್ನ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಸೇರಿದ್ದ ಜನರೊಂದಿಗೆ ಬಿಜೆಪಿ ಮುಖಂಡರಾದ ಕುಮಾರ ಬಂಗಾರಪ್ಪ, ಅರವಿಂದ ಲಿಂಬಾವಳಿ, ಶಾಸಕರಾದ ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಮಹೇಶ ಕುಮಠಳ್ಳಿ ಹೆಜ್ಜೆ ಹಾಕಿದರು ಪ್ರಜಾವಾಣಿ ಚಿತ್ರ

'₹1 ಕೋಟಿ ನಿಧಿ ಕೊಡುತ್ತೇವೆ'

'ವಕ್ಫ್ ವಿರುದ್ಧದ ಹೋರಾಟದ ಕೊನೆಗೆ ದಾವಣಗೆರೆಯಲ್ಲಿ ಸಮಾವೇಶ ಮಾಡುತ್ತೇವೆ. ಅಲ್ಲಿ 10 ಲಕ್ಷ ಜನರನ್ನು ಸೇರಿಸುತ್ತೇವೆ. ಬೆಳಗಾವಿಯಿಂದ 1 ಲಕ್ಷ ಜನರನ್ನು ಕರೆದೊಯ್ಯುತ್ತೇವೆ. ಬೆಳಗಾವಿಯ ಬಿಜೆಪಿ ಕಾರ್ಯಕರ್ತರಿಂದ ₹1 ಕೋಟಿ ನಿಧಿ ನೀಡುತ್ತೇವೆ. ನಾನು, ಯತ್ನಾಳ ಸೇರಿ ನಾಯಕರೇ ಸಮಾವೇಶಕ್ಕೆ ಬೇಕಿರುವ ಹಣ ಕೊಡಬಹುದು. ಹಾಗೆ ಮಾಡಿದರೆ ನಾವು 'ಪೂಜ್ಯ ತಂದೆ, ಪೂಜ್ಯ ಮಗ' ಆಗುತ್ತೇವೆ. ಹಾಗಾಗಿ ಕಾರ್ಯಕರ್ತರಿಂದ ಹಣ ಸಂಗ್ರಹಿಸುತ್ತೇವೆ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಬೆಳಗಾವಿ ಸಮಾವೇಶ ರಮೇಶ ಜಾರಕಿಹೊಳಿ ಅವರ ತಾತ್ಪರ್ಯ ಟ್ರೇಲರ್ ಅಷ್ಟೇ. ದಾವಣಗೆರೆಯಲ್ಲಿ ಪಿಕ್ಚರ್ ಅಭಿ ಬಾಕಿ ಹೈ
ಬಸನಗೌಡ ಪಾಟೀಲ ಯತ್ನಾಳ, ಶಾಸಕ

'ನನ್ನ ಭವಿಷ್ಯದ ಬಗ್ಗೆ ಚಿಂತೆ ಬೇಡ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಿಜೆಪಿಯಿಂದ ನನ್ನನ್ನು ಉಚ್ಚಾಟಿಸುವುದು ಖಚಿತ. ನನಗೆ ನೋಟಿಸ್ ಕೊಡಲಾಗಿದೆ ಎಂದು ಮಾಧ್ಯಮದಲ್ಲಿ ವರದಿ ಬರುತ್ತಿವೆ. ನನಗೆ ಏನೂ ಆಗುವುದಿಲ್ಲ. ಯಾರೂ ಆತಂಕಪಡಬೇಡಿ. ನನ್ನ ಭವಿಷ್ಯದ ಬಗ್ಗೆ ಯಾರೂ ಚಿಂತಿಸಬೇಡಿ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಯತ್ನಾಳ ಉಚ್ಚಾಟನೆಗೆ ಆಗ್ರಹಿಸಿ ಬಿಜೆಪಿಯ ಕೆಲವು ನಾಯಕರು ಹೋರಾಟ ಮಾಡುತ್ತಿರುವ ಕುರಿತ ಪ್ರಶ್ನೆಗೆ, ಇಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಹಲವು ವರ್ಷಗಳಿಂದ ಇದನ್ನೇ ಕೇಳುತ್ತಿದ್ದೇನೆ. ಆದರೆ, ಈವರೆಗೂ ನನ್ನನ್ನು ಏಕೆ ಉಚ್ಚಾಟಿಸಿಲ್ಲ ಎಂದು ಮಾಧ್ಯಮಗಳಲ್ಲಿ ವಿಶೇಷ ಕಾರ್ಯಕ್ರಮ ಮಾಡಿ' ಎಂದು ವ್ಯಂಗ್ಯವಾಡಿದರು.

'ವಾಸ್ತವದಲ್ಲಿ ಮಾಧ್ಯಮದವರಿಗೆ ನನ್ನ ಮೇಲೆ ಪ್ರೀತಿ ಇದೆಯೋ ಅಥವಾ ನನ್ನನ್ನು ಮುಗಿಸಬೇಕು ಎಂಬ ಉದ್ದೇಶ ಹೊಂದಿದ್ದಾರೆಯೋ ಗೊತ್ತಿಲ್ಲ. ಮೊದಲು ಪ್ರೀತಿಯಿಂದ ನನ್ನನ್ನು ಮಾತನಾಡಿಸುತ್ತಾರೆ. ನಂತರ ಹೊಡೆಯುತ್ತಾರೆ' ಎಂದೂ ಅಸಮಾಧಾನ ಹೊರಹಾಕಿದರು.

'ವಕ್ಫ್ ಮಂಡಳಿ ವಿರುದ್ಧ ನಾವು ಹೋರಾಟ ಮಾಡುತ್ತಿದ್ದೇವೆ. ಬಿಜೆಪಿಯ ಎಲ್ಲ ನಾಯಕರು ದೆಹಲಿಗೆ ಹೋಗುತ್ತಿದ್ದೇವೆ. ಬೇರೆ ಬೇರೆ ವಿಮಾನದಲ್ಲಿ ಹೋಗಿ, ದೆಹಲಿಯಲ್ಲಿ ಸೇರುತ್ತೇವೆ. ಹಾಗೆಂದು ನಮ್ಮ ತಂಡದಲ್ಲಿ ಒಡಕು ಮೂಡಿದೆ ಎಂದರ್ಥವಲ್ಲ. ದೆಹಲಿಯಿಂದ ವಾಪಸ್ಸಾದ ನಂತರ ಎರಡನೇ ಹಂತದ ಹೋರಾಟ ಮುಂದುವರಿಯಲಿದೆ. ರಾಜಕೀಯವಾಗಿ ನಾನೇನೂ ಸನ್ಯಾಸಿಯಲ್ಲ. ಕರ್ನಾಟಕದಲ್ಲಿ ಮುಂದೆ ನಾನೂ ನಂಬರ್ 1 ಆಗುತ್ತೇನೆ. ಮುಖ್ಯಮಂತ್ರಿ ಆಗಿಯೇ ಆಗುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನಾವು ಯತ್ನಾಳ ವಿರುದ್ಧ ದೂರು ಕೊಟ್ಟಿಲ್ಲ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಯತ್ನಾಳ, 'ನಾವೂ ಯಡಿಯೂರಪ್ಪ ಕುಟುಂಬದ ಬಗ್ಗೆ ದೂರು ಕೊಟ್ಟಿಲ್ಲ. ವಕ್ಫ್ ಮಂಡಳಿ ಭೂಕಬಳಿಕೆ ಮಾಡುತ್ತಿರುವುದನ್ನು ವಿರೋಧಿಸಿ ನಾವು ಮಾತನಾಡುವುದು ತಪ್ಪೇ' ಎಂದು ಪ್ರಶ್ನಿಸಿದರು.

'ವಕ್ಫ್ ಕಾಯ್ದೆ ಕ್ಯಾನ್ಸರ್ ಇದ್ದಂತೆ. ಅದು ಇಡೀ ದೇಶದಲ್ಲಿ ಹರಡಿದೆ. ಸಚಿವ ಜಮೀರ್ ಅಹಮದ್ ಖಾನ್ ಹೊತ್ತಿಸಿದ ಬೆಂಕಿಯ ಕಿಡಿ ಇದು. ಆರಂಭದಲ್ಲಿ ರಾಜ್ಯದಲ್ಲಿ ವಕ್ಫ್ ಮಂಡಳಿಗೆ ಸೇರಿದ 1.15 ಲಕ್ಷ ಎಕರೆ ಭೂಮಿ ಇದೆ ಎಂದಿದ್ದ ಅವರು, ಈಗ 6 ಲಕ್ಷ ಎಕರೆ ಇದೆ ಎನ್ನುತ್ತಿದ್ದಾರೆ' ಎಂದು ದೂರಿದರು.

'ಬಿಜೆಪಿಯಿಂದ ಬಸವಣ್ಣನ ವ್ಯಕ್ತಿತ್ವಕ್ಕೆ ಮಸಿ'

ಯತ್ನಾಳ ಹೇಳಿಕೆಯನ್ನು ಬಿಜೆಪಿ ನಾಯಕರು ಖಂಡಿಸಿದ್ದಾರೆಯೇ: ಡಿ.ಕೆ. ಶಿವಕುಮಾರ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸನಗೌಡ ಪಾಟೀಲ ಯತ್ನಾಳ ಒಬ್ಬರೇ ಬಸವಣ್ಣನವರ ವ್ಯಕ್ತಿತ್ವಕ್ಕೆ ಮಸಿ ಬಳಿದಿಲ್ಲ. ಇಡೀ ಬಿಜೆಪಿಯೇ ಮಸಿ ಬಳಿಯುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಯತ್ನಾಳ ಹೇಳಿಕೆಯನ್ನು ಯಡಿಯೂರಪ್ಪ, ವಿಜಯೇಂದ್ರ, ಅಶೋಕ, ಸೋಮಣ್ಣ, ಬೊಮ್ಮಾಯಿ.. ಯಾರಾದರು ಖಂಡಿಸಿದ್ದಾರೆಯೇ? ಬಿಜೆಪಿ ಬಸವಣ್ಣನವರ ವಿರೋಧಿ ಎಂಬುದನ್ನು ಇದು ನಿರೂಪಿಸುತ್ತದೆ' ಎಂದರು.


'ಬಸವಣ್ಣನವರ ಬಗ್ಗೆ ಹುಚ್ಚರಂತೆ ಮಾತನಾಡಿರುವ ಯತ್ನಾಳ ಅವರನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕು ಎಂದು ಅನೇಕ ಮಠಾಧೀಶರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ' ಎಂದರು.

'ಬಸವಣ್ಣನವರ ಚಿಂತನೆಯೇ ಕಾಂಗ್ರೆಸ್ ಪಕ್ಷದ ಚಿಂತನೆ. ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಗಳಾದಾಗ ಬಸವಣ್ಣನವರ ಜಯಂತಿಯಂದೇ ಪ್ರಮಾಣವಚನ ತೆಗೆದುಕೊಂಡರು. ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣ ನವರ ಭಾವಚಿತ್ರ ಕಡ್ಡಾಯ ಮಾಡಿದ್ದು, ಬಸವಣ್ಣನವರ ಜಯಂತಿಗೆ ಶಕ್ತಿ ಕೊಟ್ಟಿದ್ದು, ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ್ದು ಕಾಂಗ್ರೆಸ್ ಸರ್ಕಾರ' ಎಂದರು.

ಯಡಿಯೂರಪ್ಪ ಬಂದಿದ್ದರು: 'ನಿಮ್ಮ ಮತ್ತು ವಿಜಯೇಂದ್ರ ನಡುವಿನ ಸ್ನೇಹ ಮತ್ತು ಅವರ ಪತ್ರಗಳಿಗೆ ಸಹಿ ಹಾಕಿರುವ ವಿಡಿಯೊಗಳನ್ನು ಬಹಿರಂಗ ಮಾಡುತ್ತೇನೆ' ಎಂಬ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಯಡಿಯೂರಪ್ಪನವರು ತಮ್ಮ ಕ್ಷೇತ್ರದ ಕೆಲಸಗಳಿಗೆ ಕೆಲವು ಪತ್ರಗಳಿಗೆ ಸಹಿ ಹಾಕಿಸಿಕೊಂಡಿದ್ದರು. ಯಡಿಯೂರಪ್ಪ ನವರು ಮುಖ್ಯಮಂತ್ರಿ ಆಗಿದ್ದಾಗ ನನ್ನ ಕ್ಷೇತ್ರದ ಕೆಲಸ ಮಾಡಿಕೊಡುವುದಾಗಿ ಸದನದಲ್ಲಿ ಮಾತು ಕೊಟ್ಟಿದ್ದರು. ಆದರೆ ಮಾಡಿ ಕೊಟ್ಟಿರಲಿಲ್ಲ. ಹೀಗಾಗಿ, ನಾನೇ ಅವರನ್ನು ಭೇಟಿ ಮಾಡಿದ್ದೆ' ಎಂದರು.

'ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ–ಶಿವಕುಮಾರ್ ನಡುವೆ ಭಿನ್ನಾಭಿಪ್ರಾಯ ಇದ್ದರೂ ತೋರಿಸಿಕೊಳ್ಳುತ್ತಿಲ್ಲ, ಬಿಜೆಪಿ ಜಗಳ ಬೀದಿರಂಪವಾಗಿದೆ' ಎನ್ನುವ ಬಿಜೆಪಿ ನಾಯಕರ ಹೇಳಿಕೆ ಬಗ್ಗೆ ಕೇಳಿದಾಗ, 'ನಾನು ಎಂದೂ ವ್ಯಕ್ತಿಗತವಾಗಿ ಹೋಗುವವನಲ್ಲ. ವ್ಯಕ್ತಿ ಪೂಜೆ ಮಾಡುವವನಲ್ಲ. ಪಕ್ಷದ ಪೂಜೆ ಮಾಡುವವನು. ನಾನು ಇಲ್ಲದೇ ಹೋದರೂ ಪಕ್ಷ ಇದ್ದೇ ಇರುತ್ತದೆ. ನನಗೆ ಪಕ್ಷವೇ ಮುಖ್ಯ' ಎಂದರು.

ಶಾಸಕ ಸ್ಥಾನದಿಂದ ಯತ್ನಾಳ ವಜಾಕ್ಕೆ ಸ್ವಾಮೀಜಿ ಆಗ್ರಹ



ಚನ್ನಬಸವಾನಂದ ಸ್ವಾಮೀಜಿ

ಬೀದರ್: 'ಬಸವಣ್ಣನವರಿಗೆ ಅಪಮಾನವಾಗುವಂತೆ ಮಾತನಾಡಿರುವ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಬೆಂಗಳೂರು ಬಸವ ಗಂಗೋತ್ರಿಯ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಆಗ್ರಹಿಸಿದರು.

ಯತ್ನಾಳ ಅವರು 'ಬಸವಣ್ಣನವರು ಹೊಳ್ಯಾಗ ಹಾರಿದ್ರು' ಎಂದು ಹೇಳಿಕೆ ನೀಡಿ ಬಸವಣ್ಣನವರು ಹಾಗೂ ಅವರ ಅನುಯಾಯಿಗಳಿಗೆ ಅಪಮಾನ ಮಾಡಿದ್ದಾರೆ. ಮತಿಭ್ರಮಣೆ ರೀತಿಯ ಹೇಳಿಕೆಗೆ ಕೂಡಲೇ ಅವರು ಕ್ಷಮೆಯಾಚಿಸಬೇಕು. ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸುವಂತೆ ಆಗ್ರಹಿಸಿ ಡಿ. 3ರಂದು ಪ್ರತಿಭಟನೆ ನಡೆಸಿ, ವಿಧಾನಸಭೆಯ ಸ್ಪೀಕರ್‌ಗೆ ಮನವಿ ಪತ್ರ ಸಲ್ಲಿಸಲಾಗುವುದು ಎಂದು ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನಾನೇ ಬಸವಣ್ಣ, ನಾನೇಕೆ ಕ್ಷಮೆ ಕೇಳಬೇಕು' ಎಂಬ ಅಹಂಕಾರದ ಮಾತುಗಳನ್ನೂ ಯತ್ನಾಳ ಆಡಿದ್ದಾರೆ. ಯತ್ನಾಳ ಅವರಿಗೆ ಅಧಿಕಾರದ ಪಿತ್ತ ನೆತ್ತಿಗೇರಿರುವುದಕ್ಕೆ ಇದು ಸಾಕ್ಷಿಯಾಗಿದೆ ಎಂದರು.

ಯತ್ನಾಳ ಜೋಕರ್: ಖಂಡ್ರೆ ಲೇವಡಿ

ಬೀದರ್: 'ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಒಬ್ಬ ಜೋಕರ್, ಮಾನಸಿಕ ರೋಗಿ. ವಿಶ್ವಗುರು ಬಸವಣ್ಣನವರ ಬಗ್ಗೆ ಅತ್ಯಂತ ಲಘುವಾಗಿ ಮತ್ತು ಅವಹೇಳನ ಕಾರಿಯಾಗಿ ಕೊಟ್ಟಿರುವ ಅವರ ಹೇಳಿಕೆ ತೀವ್ರ ಖಂಡನಾರ್ಹವಾದುದು' ಎಂದು ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಖಾತೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಯತ್ನಾಳ ವಿರುದ್ಧ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗೆ ಒತ್ತಾಯಿಸುತ್ತೇನೆ' ಎಂದು ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ದೀಪೋತ್ಸವ ಹುಬ್ಬಳ್ಳಿಯ ಸಿದ್ಧಾರೂಢಮಠದ ಆವರಣದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಭಾನುವಾರ ನಡೆದ ಲಕ್ಷದೀಪೋತ್ಸವದಲ್ಲಿ ಪಾಲ್ಗೊಂಡ ಭಕ್ತ ಸಮೂಹ ಪ್ರಜಾವಾಣಿ ಚಿತ್ರ:ಗೋವಿಂದರಾಜ ಜವಳಿ

ದೆಹಲಿ ಅಂಗಳಕ್ಕೆ ಬಿಜೆಪಿ ಬಣ ಕದನ

ಒಂದನೇ ಪುಟದಿಂದ..

'ವರಿಷ್ಠರಿಂದ ಯತ್ನಾಳ ಅವರಿಗೆ ನೋಟಿಸ್ ಬಂದಿದೆ' ಎಂದು ದಟ್ಟ ವದಂತಿ ಹರಡಿತ್ತು. ಈ ಕುರಿತು ಪ್ರತಿಕ್ರಿಯಿಸಿದ ಯತ್ನಾಳ ಅವರು 'ನೋಟಿಸ್ ಬಂದಿದೆ ಎಂಬುದು ಮಾಧ್ಯಮಗಳ ಸೃಷ್ಟಿ' ಎಂದರು.

ಯತ್ನಾಳ ಸೇರಿ ಪಕ್ಷದ ಕೆಲವು ನಾಯಕರು ದೆಹಲಿಗೆ ತೆರಳಿದ ವಿಚಾರವನ್ನು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೃಢಪಡಿಸಿದ್ದು, 'ನಾಲ್ಕು ಗೋಡೆಗಳ ನಡುವೆ ವಿವಾದ ಬಗೆಹರಿಯಬೇಕಿತ್ತು. ಆದರೆ ಎಲ್ಲವೂ ಬಯಲಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಎಲ್ಲ ನಾಯಕರನ್ನು ಹೈಕಮಾಂಡ್ ಕರೆಸಿಕೊಂಡಿದೆ. ಯತ್ನಾಳ ಅವರನ್ನು ಈವರೆಗೆ ಕರೆದು ಮಾತನಾಡಿರಲಿಲ್ಲ. ಈಗ ಮಾತನಾಡಲಾಗುತ್ತಿದೆ' ಎಂದರು.

ವಿಜಯೇಂದ್ರ ಬಣದಲ್ಲಿ ಗುರುತಿಸಿಕೊಂಡಿರುವ ಬಿಜೆಪಿಯ 25 ಮಾಜಿ ಶಾಸಕರು, ಕೆಲ ಹಾಲಿ ಶಾಸಕರು ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಮನೆಯಲ್ಲಿ ಭಾನುವಾರ ಬೆಳಿಗ್ಗೆ ಸಭೆ ನಡೆಸಿ, ಮುಂದಿನ ನಡೆಯ ಬಗ್ಗೆ ಚರ್ಚಿಸಿದರು. ಭಿನ್ನಮತೀಯರ ವಿರುದ್ಧ ಕಠಿಣ ಕ್ರಮಕ್ಕೆ ವರಿಷ್ಠರನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು.

'ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಲೇಬೇಕು ಮತ್ತು ಅವರ ಜತೆ ಗುರುತಿಸಿಕೊಂಡಿರುವ ಕುಮಾರ್ ಬಂಗಾರಪ್ಪ, ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಬಿ.ಪಿ.ಹರೀಶ ಮತ್ತು ಪ್ರತಾಪ ಸಿಂಹ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು' ಎಂದು ಯಡಿಯೂರಪ್ಪ ಅವರನ್ನು ಒತ್ತಾಯಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಎಂ.ಪಿ. ರೇಣುಕಾಚಾರ್ಯ, 'ಯತ್ನಾಳರನ್ನು ಉಚ್ಚಾಟನೆ ಮಾಡಬೇಕು ಎಂದು ವರಿಷ್ಠರಿಗೆ ದೂರು ನೀಡಲು ಸಿದ್ಧತೆ ನಡೆದಿದೆ' ಎಂದು ಹೇಳಿದರು.

ಯತ್ನಾಳ ಬಣದ ರಮೇಶ ಜಾರಕಿಹೊಳಿ, ಕುಮಾರ್ ಬಂಗಾರಪ್ಪ, ಅರವಿಂದ ಲಿಂಬಾವಳಿ, ಬಿ.ಪಿ.ಹರೀಶ, ಜಿ.ಎಂ. ಸಿದ್ದೇಶ್ವರ, ಪ್ರತಾಪ ಸಿಂಹ ಸೇರಿ ಹಲವು ನಾಯಕರು ಬೇರೆ–ಬೇರೆ ವಿಮಾನಗಳಲ್ಲಿ ದೆಹಲಿಗೆ ತೆರಳಿದರು.

'ಒಂದಾಗಿ ಕೆಲಸ ಮಾಡಬೇಕು'

ಎರಡೂ ಬಣಗಳ ಜತೆ ಗುರುತಿಸಿಕೊಳ್ಳದ ಪಕ್ಷದ ಕೆಲ ನಾಯಕರು, ಎಲ್ಲರೂ ಒಂದಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದ್ದಾರೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಒಂದೇ ವಿಷಯಕ್ಕೆ ಹೋರಾಟ ಮಾಡುತ್ತಿದ್ದಾರೆ. ಎಲ್ಲ ಗೊಂದಲಗಳನ್ನು ಪರಿಹರಿಸುವಷ್ಟು ನಮ್ಮ ಹೈಕಮಾಂಡ್ ಶಕ್ತಿಯುತವಾಗಿದೆ

ಗೋವಿಂದ ಕಾರಜೋಳ, ಬಿಜೆಪಿ ಸಂಸದ

ಯಾವುದೇ ಪಕ್ಷದಲ್ಲಿ ಈ ರೀತಿಯ ಗೊಂದಲಗಳು ಇರಬಾರದು. ಎಲ್ಲರೂ ಒಂದಾಗಿ ಕೆಲಸ ಮಾಡಬೇಕು. ಪಕ್ಷದಲ್ಲಿನ ಗೊಂದಲ ಈಗಾಗಲೇ ವರಿಷ್ಠರ ಗಮನಕ್ಕೆ ಬಂದಿದ್ದು, ಅವರು ಸೂಕ್ತ ಸಮಯದಲ್ಲಿ ಸರಿಯಾದ ಕ್ರಮ ಕೈಗೊಳ್ಳುವ ವಿಶ್ವಾಸವಿದೆ. ಬಿಜೆಪಿಯಲ್ಲಿನ ಗೊಂದಲ ಬೇಗ ಬಗೆಹರಿಯುತ್ತದೆ

ಜಗದೀಶ ಶೆಟ್ಟರ್, ಬಿಜೆಪಿ ಸಂಸದ

ಬಿಜೆಪಿಯೂ ಸೇರಿ ಯಾವ ಪಕ್ಷದಲ್ಲೂ ವೈಚಾರಿಕತೆ, ನೈತಿಕತೆ ಇಲ್ಲ. , ಬೊಗಳೆ ಬಿಡುವುದೇ ಕೆಲಸವಲ್ಲ. ರಾಜ್ಯದಿಂದ ಕೇಂದ್ರ ಸಚಿವರಾಗಿರುವ ಶೋಭಾ ಕರಂದ್ಲಾಜೆ, ಪ್ರಲ್ಹಾದ ಜೋಶಿ ರಾಜ್ಯಕ್ಕೆ ಬರುತ್ತಾರೆ, ಯಾರನ್ನೋ ಬೈದು ಹೋಗುತ್ತಾರೆ. ಜಿಲ್ಲಾ ಪಂಚಾಯಿತಿ ಸದಸ್ಯರಿಗಿಂತ ಕಡೆಯಾಗಿ ಮಾತನಾಡುತ್ತಿದ್ದೀರಲ್ಲಾ? ಅಭಿವೃದ್ಧಿ ಬಗ್ಗೆ ಮಾತನಾಡಿ

ಎ.ಎಚ್.ವಿಶ್ವನಾಥ್, ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ

'ನಿಷ್ಠೆ ಎಂಬುದು ಸನ್ನಿವೇಶದ ಅವಶ್ಯಕತೆ ಅಲ್ಲ, ಜೀವನದ ಜೀವಾಳ. ರಾಷ್ಟ್ರ ನಿಷ್ಠೆ - ಪಕ್ಷ ನಿಷ್ಠೆ ಅತ್ಯಂತ ಶ್ರೇಷ್ಠವಾದದ್ದು'. ಇವತ್ತಿನ ಬಿಜೆಪಿಯ ಕೆಲವರ ಹೇಳಿಕೆ-ಪ್ರತಿಹೇಳಿಕೆಗಳನ್ನು ಕೇಳಿಸಿಕೊಳ್ಳುವಾಗ, ಹಿರಿಯರಾದ ದಿವಂಗತ ಅನಂತ್ ಕುಮಾರ್ ಅವರು ಹೇಳುತ್ತಿದ್ದ ಮೇಲಿನ ಮಾತು ನೆನಪಾಯಿತು

ಸಿ.ಟಿ.ರವಿ, ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ

ಮನೆಗಳ ಮೇಲೆ ಬಿದ್ದ ಬಂಡೆ, 7 ಜನ ಸಿಲುಕಿರುವ ಶಂಕೆ

ತಿರುವಣ್ಣಾಮಲೈ/ತಿರುವನಂತಪುರ (ಪಿಟಿಐ): ಜಿಲ್ಲೆಯಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಇಲ್ಲಿನ ಅಣ್ಣಾಮಲೈಯರ್ ಬೆಟ್ಟದ ಕೆಳಗಿರುವ ಮನೆಗಳ ಮೇಲೆ ದೊಡ್ಡ ಬಂಡೆಯೊಂದು ಬಿದ್ದಿದ್ದು, ಅದರಡಿ 5–7 ಜನರು ಸಿಲುಕಿರುವ ಶಂಕೆ ಇದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಳೆ ನಡುವೆಯೇ, ಎನ್‌ಡಿಆರ್‌ಎಫ್ ಸಿಬ್ಬಂದಿ ತಡರಾತ್ರಿ ವರೆಗೂ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು.

ರೆಡ್ ಅಲರ್ಟ್: ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಕೇರಳದ ನಾಲ್ಕು ಜಿಲ್ಲೆಗಳಿಗೆ ಭಾನುವಾರ 'ರೆಡ್ ಅಲರ್ಟ್' ಘೋಷಿಸಿದ್ದು, ಡಿ.2ರಂದು ಭಾರಿ ಮಳೆ ಮುನ್ಸೂಚನೆ ನೀಡಿದೆ.

ಐಟಿಐ: 62 ಅಧಿಕಾರಿಗಳಿಗೆ ಹಿಂಬಡ್ತಿ

ಒಂದನೇ ಪುಟದಿಂದ..

ಈ ತಿದ್ದುಪಡಿಯ ನಂತರ ಇಲಾಖೆಯು (1999ರಿಂದ 2011ರವರೆಗೆ) 62 ಮಂದಿಗೆ ಜೆಟಿಒ ಹುದ್ದೆಯಿಂದ ನೇರವಾಗಿ ಪ್ರಾಂಶುಪಾಲ (ಸಹಾಯಕ ನಿರ್ದೇಶಕರು– ತರಬೇತಿ) ಹುದ್ದೆಗೆ ಮುಂಬಡ್ತಿ ನೀಡಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಕೆಎಟಿ 2008ರಲ್ಲಿಯೇ ಈ ಕೋಟಾವನ್ನು ಅನೂರ್ಜಿತಗೊಳಿಸಿತ್ತು. ವಿಶೇಷವೆಂದರೆ, ಕೆಎಟಿ ಆದೇಶ ನೀಡಿದ ನಂತರ 17 ಮಂದಿಗೆ ಇಲಾಖೆ ಬಡ್ತಿ ನೀಡಿದೆ.

ಕೆಎಟಿ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಕೆಎಟಿ ತೀರ್ಪನ್ನು ಹೈಕೋರ್ಟ್ 2012 ರಲ್ಲಿ ಎತ್ತಿಹಿಡಿದಿತ್ತು. ಇದರಿಂದ ಹಿಂಬಡ್ತಿ ಭೀತಿಗೆ ಒಳಗಾದ ಅಧಿಕಾರಿಗಳು ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ (ಎಸ್‌ಎಲ್‌ಪಿ) ಸಲ್ಲಿಸಿದ್ದರು. 2012ರಲ್ಲಿಯೇ ಮಧ್ಯಂತರ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 2024ರ ಜನವರಿಯಲ್ಲಿ ಎಸ್‌ಎಲ್‌ಪಿಯನ್ನು ವಜಾಗೊಳಿಸಿದೆ.

ಕೆಎಟಿ ತೀರ್ಪು ನೀಡಿ 16 ವರ್ಷ ಮತ್ತು ಹೈಕೋರ್ಟ್ ತೀರ್ಪು ನೀಡಿ 12 ವರ್ಷ ಕಳೆದಿದೆ. ಅದೇ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದರೂ ಜಾರಿಗೆ ಮುಂದಾಗದ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಮತ್ತು ಆಯುಕ್ತರ ವಿರುದ್ಧ ಮುಂಬಡ್ತಿಗೆ ಅರ್ಹರಾಗಿದ್ದ ಅಧಿಕಾರಿಗಳು ಕೆಎಟಿಯಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಲ್ಲಿಸಿದ್ದರು.

'ಹಲವು ವರ್ಷಗಳ ನಿರಂತರ ಕಾನೂನು ಹೋರಾಟದ ನಂತರ ಅನರ್ಹರಿಗೆ ಇಲಾಖೆ ಹಿಂಬಡ್ತಿ ನೀಡಿದೆ. ಆದರೆ, ಇಲಾಖೆ ಮಾಡಿದ ತಪ್ಪಿನಿಂದಾಗಿ 1998ರಿಂದಲೂ ಮುಂಬಡ್ತಿಯಿಂದ ವಂಚಿತರಾದ ಅರ್ಹರಿಗೆ ಪದೋನ್ನತಿ ನೀಡಬೇಕೆಂದು ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದ್ದರೂ ಹಿರಿಯ ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ. ಕೋರ್ಟ್ ಆದೇಶವನ್ನು ಜಾರಿ ಮಾಡದ ಕಾರಣ, ಕೆಪಿಎಸ್‌ಸಿ ಮೂಲಕ 2008ರಲ್ಲಿ ನೇರವಾಗಿ ನೇಮಕವಾದ ಅಧಿಕಾರಿಗಳು ಮುಂಬಡ್ತಿಯಿಂದ ವಂಚಿತರಾಗಿದ್ದಾರೆ' ಎಂದು ಅಧಿಕಾರಿಯೊಬ್ಬರು ದೂರಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಇಲಾಖೆಯ ಆಯುಕ್ತರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಲಭ್ಯರಾಗಲಿಲ್ಲ.

'ಎಸಿಎಸ್, ಆಯುಕ್ತರಿಗೆ ತಲಾ ₹5 ಸಾವಿರ ದಂಡ'

ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯ ವೇಳೆ, ತೀರ್ಪನ್ನು ಸಂಪೂರ್ಣವಾಗಿ ಪಾಲಿಸದ ಮತ್ತು ಈ ಹಿಂದಿನ ವಿಚಾರಣೆ ವೇಳೆ ಖುದ್ದು ಹಾಜರಾಗುವಂತೆ ಸೂಚಿಸಿದರೂ ಗೈರಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದ ಕೆಎಟಿ, ಇಲಾಖೆಯ ಆಯುಕ್ತರು ಮತ್ತು ಎಸಿಎಸ್‌ಗೆ ಜಾಮೀನು ಸಹಿತ ವಾರಂಟ್ ಹೊರಡಿಸಿ, ತಲಾ ₹5 ಸಾವಿರ ದಂಡ ವಿಧಿಸಿದೆ. ಅಲ್ಲದೆ, ವಿಚಾರಣೆಯನ್ನು ಡಿ. 13ಕ್ಕೆ ಮುಂದೂಡಿದೆ.

26 ವರ್ಷಗಳ ಹಿಂದಿನ ಪ್ರಕರಣ

ಒಂದನೇ ಪುಟದಿಂದ..

ಆದರೆ, ಹೆಚ್ಚಿನ ಸಮಯಾವಕಾಶ ಕೇಳಿದ ಕಾರಣ, ತೀರ್ಪನ್ನು ಯಥಾವತ್ ಜಾರಿಗೊಳಿಸಿ, ವರದಿ ಸಹಿತ ನ.8 ರಂದು ಹಾಜರಾಗುವಂತೆ ಇಲಾಖೆಯ ಎಸಿಎಸ್ ಮತ್ತು ಆಯುಕ್ತರಿಗೆ ಕೆಎಟಿ ಸೂಚಿಸಿತ್ತು. ಆದರೂ, ಅಧಿಕಾರಿಗಳು ಕ್ರಮ ತೆಗೆದುಕೊಳ್ಳದ ಕಾರಣ, ನ. 29ರ ಒಳಗೆ ಹಾಜರಾಗಲು ಸೂಚಿಸಿತ್ತು. ನ. 28ರಂದು ಹಿಂಬಡ್ತಿ ಆದೇಶ ಹೊರಡಿಸಿದ ಇಲಾಖೆ, ಅದನ್ನು ಕೆಎಟಿ ಗಮನಕ್ಕೆ ತಂದಿದೆ. ಆದರೆ, ಅರ್ಹರಿಗೆ ಮುಂಬಡ್ತಿ ನೀಡಲು ಮುಂದಾಗಿಲ್ಲ.

'ನನ್ನ ನೇತೃತ್ವದಲ್ಲೇ ಹಾಸನ ಸಮಾವೇಶ'

ಒಂದನೇ ಪುಟದಿಂದ..

'ಜನರ ಕಲ್ಯಾಣ, ಸಂವಿಧಾನ ರಕ್ಷಣೆ, ಸ್ವಾಭಿಮಾನ ರಕ್ಷಣೆ, ಸರ್ಕಾರದ ವಿರುದ್ಧ ಮಾಡುತ್ತಿರುವ ಸುಳ್ಳು ಆರೋಪಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಸಮಾವೇಶ ಆಯೋಜಿಸಲಾಗಿದೆ. ಸರ್ಕಾರದ ವಿರುದ್ಧ ನಡೆಯುತ್ತಿರುವ ಅಪಪ್ರಚಾರಕ್ಕೆ ಜನ ಈಗಾಗಲೇ ತೀರ್ಪು ಕೊಟ್ಟಿದ್ದಾರೆ. ಎಐಸಿಸಿ ನಾಯಕರ ನಿರ್ದೇಶನದಂತೆ ಮುಂದಿನ ಎರಡು ತಿಂಗಳು ಎಲ್ಲ ಜಿಲ್ಲೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ' ಎಂದರು.

'ಕೆಲವು ಸಚಿವರು ಈ ಸಮಾವೇಶಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಎಂದು ಹೇಳಿದ್ದು, ಸಮಾವೇಶದ ಸ್ವರೂಪ ಬದಲಾಗಿದ್ದು ಏಕೆ' ಎಂಬ ಪ್ರಶ್ನೆಗೆ, 'ಸಮಾವೇಶದ ಸ್ವರೂಪ ಎಲ್ಲಿ ನಿರ್ಧಾರ ಆಗಿತ್ತು? ಪಕ್ಷದ ಅಧ್ಯಕ್ಷನಾಗಿ ನಾನು ಹೇಳುತ್ತಿದ್ದೇನೆ, ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಯೇ ಹೊರತು ಮೈತ್ರಿ ಪಕ್ಷದ ಮುಖ್ಯಮಂತ್ರಿ ಅಲ್ಲ. ಇಲ್ಲಿ ಒಂದೇ ಪಕ್ಷ, ಒಂದೇ ಚಿಹ್ನೆ. ಕೆಲವರ ವೈಯಕ್ತಿಕ ಅಭಿಪ್ರಾಯವೇ ಬೇರೆ. ಈ ವಿಚಾರವಾಗಿ ಎಐಸಿಸಿ ಅಧ್ಯಕ್ಷರು, ಮುಖ್ಯಮಂತ್ರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಸೇರಿ ಚರ್ಚೆ ಮಾಡಿದ್ದೇವೆ' ಎಂದು ಅವರು ಹೇಳಿದರು.

ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷರ ಜೊತೆ ಕೆಲವು ಸಚಿವರು ಪ್ರತ್ಯೇಕ ಸಭೆ ಮಾಡಿರುವ ಬಗ್ಗೆ ಕೇಳಿದಾಗ, 'ಕೊನೆಗಳಿಗೆಯಲ್ಲಿ ಈ ಸಭೆ ನಿಗದಿಯಾಗಿದೆ. ನಮ್ಮ ಬಳಿ ಅನುಮತಿ ಪಡೆದು ಆ ನಾಯಕರು ಮೈಸೂರಿನಲ್ಲಿ ಸಭೆ ಮಾಡುತ್ತಿದ್ದಾರೆ. ಯಾರೂ ಪಕ್ಷಕ್ಕಿಂತ ದೊಡ್ಡವರಲ್ಲ. ಎಲ್ಲರಿಗಿಂತ ಪಕ್ಷ ದೊಡ್ಡದು ಎನ್ನುವುದು ಎಲ್ಲರಿಗೂ ಗೊತ್ತಿದೆ' ಎಂದರು.

'ಹೈಕಮಾಂಡ್‌ಗೆ ಹೋಗಿರುವ ಅನಾಮಧೇಯ ಪತ್ರ ಇಷ್ಟೆಲ್ಲ ಕೆಲಸ ಮಾಡಿದೆಯೇ' ಎಂಬ ಪ್ರಶ್ನೆಗೆ, 'ಎಐಸಿಸಿ ಅಧ್ಯಕ್ಷರಿಗೆ ಬರೆಯಲಾಗಿದೆ ಎಂಬ ಪತ್ರ ಯಾರ ಸೃಷ್ಟಿಯೊ ಗೊತ್ತಿಲ್ಲ. ಯಾರು ಕೂಡ ನನ್ನ ಬಳಿ ಈ ವಿಚಾರವಾಗಿ ಚರ್ಚೆ ಮಾಡಿಲ್ಲ' ಎಂದು ತಿಳಿಸಿದರು.

'ಪಕ್ಷ– ಸ್ವಾಭಿಮಾನ ಒಕ್ಕೂಟದ ಜಂಟಿ ಸಮಾವೇಶ'



ಸಿದ್ದರಾಮಯ್ಯ

ಬೆಂಗಳೂರು: 'ರಾಜ್ಯದ ಜನರಿಗೆ ಕೃತಜ್ಞತೆ ಸಲ್ಲಿಸಲು ಕಾಂಗ್ರೆಸ್ ಪಕ್ಷ ಹಾಗೂ ಸ್ವಾಭಿಮಾನಿಗಳ ಒಕ್ಕೂಟದ ಜಂಟಿ ಆಶ್ರಯದಲ್ಲಿ ಹಾಸನದಲ್ಲಿ ಸಮಾವೇಶ ನಡೆಸಲಾಗುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಹಿಂದೆ ಜೆಡಿಎಸ್ ಬಿಟ್ಟಾಗಲೂ ಸಿದ್ದರಾಮಯ್ಯ ಸಮಾವೇಶ ಮಾಡಿದ್ದರು' ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಜೆಡಿಎಸ್ ಬಿಡಲಿಲ್ಲ. ನನ್ನನ್ನು ದೇವೇಗೌಡರು ಉಚ್ಚಾಟಿಸಿದರು. ನಂತರ ನಾನು ಬೇರೆ ದಾರಿ ಇಲ್ಲದೆ ಅಹಿಂದ ಸಮಾವೇಶ ನಡೆಸಿದೆ. ಹಾಸನದಲ್ಲಿಯೂ ಸಮಾವೇಶ ಮಾಡಿದ್ದೆ' ಎಂದರು.


'ಹಾಸನ ಸಮಾವೇಶಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಆಹ್ವಾನಿಸಲಾಗಿದೆ. ಈ ಸಮಾವೇಶದಲ್ಲಿ ಪಕ್ಷವು ಸಕ್ರಿಯವಾಗಿ ಭಾಗವಹಿಸುತ್ತಿದೆ' ಎಂದರು.

'ಜೆಡಿಎಸ್ ಪಕ್ಷ ಕಟ್ಟಿದವರು ನಾವು. ಜೆಡಿಎಸ್ ಈಗ ಜಾತ್ಯತೀತವಾಗಿ ಉಳಿದಿದೆಯೇ' ಎಂದು ಪ್ರಶ್ನಿಸಿದ ಮುಖ್ಯಮಂತ್ರಿ, 'ಕೋಮುವಾದಿಗಳ ಜೊತೆಗೆ ಸೇರಿದ ಮೇಲೆ ಯಾವ ಜಾತ್ಯತೀತ ಆಗಿದೆ? ಸಂವಿಧಾನದಲ್ಲಿ ಜಾತ್ಯತೀತ, ಸಮಾಜವಾದಿ ಎಂದು ಸೇರ್ಪಡೆಯಾಗಿದೆ. ಸುಪ್ರೀಂ ಕೋರ್ಟ್ ಕೂಡಾ ಜಾತ್ಯತೀತ ಇರಲೇಬೇಕೆಂದು ಹೇಳಿದೆ. ಪಕ್ಷವನ್ನು ಯಾವ ಹಿನ್ನೆಲೆಯಲ್ಲಿ ಕಟ್ಟಲಾಗಿದೆ ಎನ್ನುವುದು ಜೆಡಿಎಸ್‌ನವರಿಗೇ ಗೊತ್ತಿಲ್ಲ. ಪಕ್ಷ ರಚನೆಗೊಂಡಾಗ ಕುಮಾರಸ್ವಾಮಿ ಇರಲಿಲ್ಲ. ನಾನು ದೇವೇಗೌಡ, ಇಬ್ರಾಹಿಂ, ಸತೀಶ ಜಾರಕಿಹೊಳಿ, ಮಹದೇವಪ್ಪ, ವೆಂಕಟೇಶ್, ಲಕ್ಷ್ಮೀ ಸಾಗರ್ ಸೇರಿ ಆಗಿದ್ದು. ದೇವೇಗೌಡರು ರಾಷ್ಟ್ರೀಯ ಅಧ್ಯಕ್ಷರಾದರು. ನಾನು ರಾಜ್ಯ ಘಟಕದ ಅಧ್ಯಕ್ಷನಾದೆ' ಎಂದು ಮುಖ್ಯಮಂತ್ರಿ ನೆನಪಿಸಿಕೊಂಡರು.

'ಫೆಂಜಲ್' ಚಂಡಮಾರುತ: 8 ಸಾವು

ಒಂದನೇ ಪುಟದಿಂದ..

ಕೇಂದ್ರಕ್ಕೆ ಮೊರೆ: 'ವಿಲುಪ್ಪುರಂ, ಕಡಲೂರು ಹಾಗೂ ಚೆಂಗಲ್‌ಪಟ್ಟು ಗಳಲ್ಲಿ ಸಂಭವಿಸಿರುವ ನಷ್ಟವನ್ನು ಅಂದಾಜಿಸಲು ತಂಡವೊಂದನ್ನು ಕಳುಹಿಸಿಕೊಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುವುದು. ಇದುವರೆಗೂ ಮಳೆ ನಿಲ್ಲದ ಕಾರಣ ಪರಿಹಾರ ಕಾರ್ಯಕ್ಕೆ ತೊಡಕಾಗಿದೆ. ಜೊತೆಗೆ, ಬೆಳೆ ಹಾನಿಯ ಕುರಿತೂ ಪರಿಶೀಲನೆ ನಡೆಸಲು ಆಗುತ್ತಿಲ್ಲ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದರು.



ಮೂರು ದಶಕಗಳಲ್ಲೇ ಅಧಿಕ ಮಳೆ

ಪುದುಚೇರಿಯಲ್ಲಿ 48 ಸೆಂ.ಮೀನಷ್ಟು ಮಳೆ ಸುರಿದಿದೆ. ಕಳೆದ 3 ದಶಕಗಳಲ್ಲೇ ಸುರಿದಿರುವ ಅಧಿಕ ಮಳೆ ಇದು. 2004 ಅಕ್ಟೋಬರ್‌ನಲ್ಲಿ ಪುದುಚೇರಿಯಲ್ಲಿ 24 ಸೆಂ.ಮೀನಷ್ಟು ಮಳೆಯಾಗಿತ್ತು. ಇಲ್ಲಿನ ಜನರು ಮನೆಯಿಂದ ಹೊರಬರದಂಥ ಪರಿಸ್ಥಿತಿ ಉಂಟಾಗಿದೆ. ಲಕ್ಷಾಂತರ ಮಂದಿ ನಿರಾಶ್ರಿತರಾಗಿದ್ದಾರೆ. ನೂರಾರು ಮರಗಳು ಧರೆಗುರುಳಿವೆ. ಜನದಟ್ಟಣೆ ಹೆಚ್ಚಿರುವ ವಸತಿ ಪ್ರದೇಶಗಳ ರಸ್ತೆಗಳಲ್ಲಿ ಸುಮಾರು 5 ಅಡಿ ನೀರು ನಿಂತಿದೆ. ಇದರಿಂದ ರಕ್ಷಣಾ ಕಾರ್ಯಕ್ಕೂ ಅಡ್ಡಿಯುಂಟಾಗಿದೆ. ನೆಲಮಹಡಿಯಲ್ಲಿ ವಾಸಿಸುವ ಜನರು ಮೊದಲ ಅಥವಾ ಎರಡನೇ ಮಹಡಿಯಲ್ಲಿ ಆಶ್ರಯ ಪಡೆಯುವಂತಾಗಿದೆ. ರಸ್ತೆಯಲ್ಲಿ ನೀರು ನಿಂತಿರುವ ಕಾರಣ ಸಂತ್ರಸ್ತರಿಗೆ ಆಹಾರ–ನೀರು ವಿತರಣೆಗೂ ಅಡಚಣೆಯಾಗಿದೆ.

- ಮಳೆ ನೀರು ನಿಂತಿದ್ದ ಕಾರಣ ತಮಿಳುನಾಡು–ಪುದುಚೇರಿಯ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡಿತ್ತು
- 60 ಸೈನಿಕರ ಎರಡು ತಂಡಗಳ ರಚನೆ. ಒಟ್ಟು 600 ಜನರ ರಕ್ಷಣೆ
- ಶನಿವಾರ ರಾತ್ರಿ 11 ಗಂಟೆಯಿಂದ ವಿದ್ಯುತ್ ಕಡಿತ. ಕೃಷಿ ಜಮೀನುಗಳಲ್ಲಿ ನಿಂತ ಮಳೆ ನೀರು

ಜಾಲತಾಣಗಳಲ್ಲಿ ಆಕ್ರೋಶ

'ಮೆಟ್ರೊಪಾಲಿಟನ್ ನಗರಗಳ ಕುರಿತು ಮಾತ್ರವೇ ಗಮನಹರಿಸಲಾಗುತ್ತದೆ. ಚಂಡಮಾರುತ ಅಪ್ಪಳಿಸುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದರೂ ನಗರ ಪ್ರದೇಶಗಳಲ್ಲಿ ಮಾತ್ರವೇ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುತ್ತದೆ. ನಗರಗಳ ಸುತ್ತಮುತ್ತಲಿನ ಪ್ರದೇಶಗಳನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಪುದುಚೇರಿ ಅಥವಾ ವಿಲುಪ್ಪುರಂ ಜಿಲ್ಲೆಗಳಲ್ಲಿ ಯಾವುದೇ ರಕ್ಷಣಾ ತಂಡಗಳು ಕಾಣಸಿಗಲಿಲ್ಲ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.

14 ಜಿಲ್ಲೆಗಳಿಗೆ ಭಾರಿ ಮಳೆ 'ಅಲರ್ಟ್'

ಬೆಂಗಳೂರು: ತಮಿಳುನಾಡಿನಲ್ಲಿ ಭೂಸ್ಪರ್ಶ ಮಾಡಿರುವ 'ಫೆಂಜಲ್' ಚಂಡಮಾರುತದ ಪರಿಣಾಮ ರಾಜ್ಯಕ್ಕೂ ತಟ್ಟಿದ್ದು, ಸೋಮವಾರ 14 ಜಿಲ್ಲೆಗಳಲ್ಲಿ ಭಾರಿ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಕೆಲವೆಡೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉಡುಪಿ, ದಕ್ಷಿಣ ಕನ್ನಡ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಕರಾವಳಿ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಹೆಚ್ಚಿನ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ತುಂತುರು ಮಳೆಯಾಗುವ ಸಂಭವವಿದೆ.

ಮಂಗಳವಾರವೂ ರಾಜ್ಯದ ಕೆಲವೆಡೆ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಿದೆ.


ಸಮುದ್ರದ ಅಲೆಗಳು ಎತ್ತರವಾಗಿ ಬಡಿಯುತ್ತಿವೆ. ಈ ಕಾರಣಕ್ಕೆ ನಗರ ಪ್ರದೇಶಗಳಲ್ಲಿ ಸುರಿದ ಮಳೆ ನೀರು ಸಮುದ್ರಕ್ಕೆ ಸೇರುತ್ತಿಲ್ಲ. ಇದರಿಂದಲೇ ಪುದುಚೇರಿಯಲ್ಲಿ ಪ್ರವಾಹ ಉಂಟಾಗಿದೆ

ಎನ್.ರಂಗಸ್ವಾಮಿ, ಮುಖ್ಯಮಂತ್ರಿ, ಪುದುಚೇರಿ

ಮುಂದಿನ ಆದೇಶದವರೆಗೂ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಶಾಲಾ–ಕಾಲೇಜುಗಳನ್ನೇ ನಿರಾಶ್ರಿತರ ಶಿಬಿರಗಳನ್ನಾಗಿ ರೂಪಿಸುವ ಯೋಜನೆ ಇದೆ

ಎ. ಕುಲೋತುಂಗನ್, ಜಿಲ್ಲಾಧಿಕಾರಿ, ಪುದುಚೇರಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕೇಳಿಸಿಕೊಳ್ಳುವುದಕ್ಕಿಂತ ನಾವು ಹೆಚ್ಚು ಮಾತನಾಡಬೇಕೆಂಬುದು ನಿಸರ್ಗ ನಿಯಮವೇ ಆಗಿದ್ದರೆ, ನಮಗೆ ಎರಡು ಬಾಯಿ ಮತ್ತು ಒಂದು ಕಿವಿ ಇರುತ್ತಿತ್ತು.

–ಮಾರ್ಕ್ ಟ್ವೆಯ್ನ್

ಸಂಸತ್ ಕಲಾಪ ವ್ಯರ್ಥ ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ

ಸಂಸತ್ತಿನ ಚಳಿಗಾಲದ ಅಧಿವೇಶನ ಎರಡನೇ ವಾರಕ್ಕೆ ಪ್ರವೇಶಿಸಿದೆ. ಆದರೆ, ಮೊದಲ ಇಡೀ ವಾರ ಕಲಾಪವೇ ನಡೆದಿಲ್ಲ. ಲೋಕಸಭೆಯ ಸ್ಪೀಕರ್ ಮತ್ತು ರಾಜ್ಯಸಭೆಯ ಸಭಾಪತಿಯವರು ಪ್ರತಿದಿನವೂ ಕಲಾಪವನ್ನು ಮುಂದೂಡಿದ್ದಾರೆ. ಹೊಸದಾಗಿ ಆಯ್ಕೆಯಾದ ಸದಸ್ಯರ ಪ್ರಮಾಣವಚನದಂತಹ ಅತ್ಯಗತ್ಯ ಚಟುವಟಿಕೆಗಳು ಮಾತ್ರ ನಡೆದಿವೆ. ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದಲ್ಲಿ ಆರೋಪಪಟ್ಟಿ ದಾಖಲು, ಮಣಿಪುರ ಹಿಂಸಾಚಾರ ಮತ್ತು ಉತ್ತರಪ್ರದೇಶದ ಸಂಭಲ್‌ನಲ್ಲಿ ಮಸೀದಿ ಸಮೀಕ್ಷೆಯ ಬಳಿಕ ಪೊಲೀಸರಿಂದ ಗೋಲಿಬಾರ್ ಮುಂತಾದ ವಿಚಾರಗಳ ಚರ್ಚೆಗೆ ಅವಕಾಶ ಕೊಡಬೇಕು ಎಂದು ವಿರೋಧ ಪಕ್ಷಗಳು ಗದ್ದಲ ಉಂಟು ಮಾಡಿವೆ. ಈ ಬೇಡಿಕೆ ಈಡೇರಿಸಬೇಕು ಎಂದು ಭಾರಿ ಕೋಲಾಹಲ ಮಾಡಿವೆ. ಇವು ಸಂಸತ್ತಿನಲ್ಲಿ ಚರ್ಚೆ ಆಗಬೇಕಾದಂತಹ ಮಹತ್ವದ ವಿಚಾರಗಳೇ ಆಗಿವೆ. ಆದರೆ, ಚರ್ಚೆ ನಡೆಸಲು ಸರ್ಕಾರ ಸಿದ್ಧವಿಲ್ಲ. ಈ ವಿಚಾರಗಳ ಕುರಿತು ನಿಲುವಳಿ ಸೂಚನೆ ಮಂಡನೆಗೆ ಎರಡೂ ಸದನಗಳಲ್ಲಿ ಅವಕಾಶ ನೀಡಲಾಗಿಲ್ಲ. ಗದ್ದಲ ಮತ್ತು ಕೋಲಾಹಲದ ನಡುವೆ ಕಲಾಪ ನಡೆಸಲು ಸಾಧ್ಯವಿಲ್ಲ ಎಂದು ಎರಡೂ ಸದನಗಳನ್ನು ಪದೇಪದೇ ಮುಂದೂಡಲಾಗಿದೆ.



ಸಂಸತ್ ಕಲಾಪವು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ

ಈ ಪ್ರಮುಖ ವಿಚಾರಗಳ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ಆಗಬೇಕು. ಅದಾನಿ ಮತ್ತು ಅವರ ಸಹಚರರು ಭಾರತ ಸರ್ಕಾರದ ಅಧಿಕಾರಿಗಳಿಗೆ 25 ಕೋಟಿ ಡಾಲರ್ (ಸುಮಾರು ₹2,100 ಕೋಟಿ) ಲಂಚ ನೀಡಿದ್ದಾರೆ; ಅಮೆರಿಕದ ಹೂಡಿಕೆದಾರರು ಮತ್ತು ಬ್ಯಾಂಕುಗಳಿಗೆ ಸುಳ್ಳು ಹೇಳಲಾಗಿದೆ ಎಂದು ಅಮೆರಿಕದಲ್ಲಿ ದಾಖಲಾದ ಆರೋಪಪಟ್ಟಿಯಲ್ಲಿ ಇದೆ. ಮಹತ್ವದ ಹಲವು ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿರುವ ಅದಾನಿ ಸಮೂಹವು ದೇಶದ ಪ್ರಮುಖ ಉದ್ಯಮ ಸಂಸ್ಥೆಗಳಲ್ಲಿ ಒಂದು. ಭಾರತದಲ್ಲಿ ಅಧಿಕಾರಿಗಳಿಗೆ ಲಂಚ ನೀಡಲಾಗಿದೆ ಎಂಬುದು ಆರೋಪ. ಹಾಗಾಗಿ, ಈ ವಿಚಾರದಲ್ಲಿ ಸಾರ್ವಜನಿಕರಿಗೆ ಆಸಕ್ತಿ ಇದೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯೂ ಇದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮತ್ತು ಅದರ ಅಧ್ಯಕ್ಷೆಯ ನಡವಳಿಕೆಯ ಕುರಿತೂ ಪ್ರಶ್ನೆಗಳಿವೆ. ಈ ವಿಚಾರಗಳ ಕುರಿತು ಸಂಸತ್ತಿನಲ್ಲಿ ಚರ್ಚೆಯಾಗುವುದರ ಜೊತೆಗೆ ವಿಶ್ವಾಸಾರ್ಹವಾದ ತನಿಖೆಯನ್ನೂ ನಡೆಸಬೇಕಿದೆ. ಹೊಸದಾಗಿ ಹಿಂಸಾಚಾರ ಮತ್ತು ಹತ್ಯೆಗಳು ನಡೆದ ಬಳಿಕ ಮಣಿಪುರದ ಪರಿಸ್ಥಿತಿ ಪ್ರಕ್ಷುಬ್ಧವಾಗಿದೆ. ಸಂಭಲ್ ಗೋಲಿಬಾರ್ ಕುರಿತ ಚರ್ಚೆಯೂ ಬಹಳ ಮುಖ್ಯ. ಏಕೆಂದರೆ, ಇಲ್ಲಿ ಜಾತ್ಯತೀತತೆ, ಪೊಲೀಸರು ಮತ್ತು ಜಿಲ್ಲಾಡಳಿತದ ನಡವಳಿಕೆ ಹಾಗೂ 1991ರ ಧಾರ್ಮಿಕ ಸ್ಥಳಗಳ ಕಾಯ್ದೆಯ ವಿಚಾರಗಳು ಒಳಗೊಂಡಿವೆ.

ಈ ವಿಚಾರಗಳ ಕುರಿತು ಚರ್ಚೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಯಾವ ಕಾರಣವೂ ಇಲ್ಲ. ಆದರೆ, ಸಂಸತ್ತು ಎಂಬುದು ಸಂವಾದಕ್ಕೆ ಇರುವ ವೇದಿಕೆ ಎಂಬುದೇ ಮರೆತುಹೋಗಿದೆ. ಸರ್ಕಾರ ಮತ್ತು ವಿರೋಧ ಪಕ್ಷಗಳು ವೈರಿಗಳಂತೆ ವರ್ತಿಸುತ್ತಿವೆ. ಸಂಸತ್ ಕಲಾಪವು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ. ಚರ್ಚೆಯಿಂದ ತಪ್ಪಿಸಿಕೊಳ್ಳುವ ಬದಲು ಚರ್ಚೆಯನ್ನು ಸ್ವಾಗತಿಸಬೇಕು. ಸರ್ಕಾರವನ್ನು ಉತ್ತರದಾಯಿ ಮಾಡುವ ಹಕ್ಕು ಮತ್ತು ಹೊಣೆಗಾರಿಕೆ ವಿರೋಧ ಪಕ್ಷಗಳಿಗೆ ಇದೆ. ವಿರೋಧ ಪಕ್ಷಗಳು ಎತ್ತಿದ ವಿಚಾರಗಳ ಕುರಿತು ತನ್ನ ನಿಲುವನ್ನು ಸ್ಪಷ್ಟಪಡಿಸುವುದು ಸರ್ಕಾರದ ಕರ್ತವ್ಯ. ವಿರೋಧ ಪಕ್ಷಗಳು ಎತ್ತಿದ ವಿಚಾರಗಳ ಕುರಿತು ಸರ್ಕಾರದ ನಿಲುವು ಏನು ಎಂಬುದು ಜನರಿಗೆ ತಿಳಿಯಬೇಕು. ಸಂಸತ್ತಿನ ಕಲಾಪ ಪ್ರತಿದಿನವೂ ವ್ಯರ್ಥವಾದರೆ, ಶಾಸನ ರೂಪಿಸುವಿಕೆ ಮತ್ತು ಸಂವಾದ ಪರಿಣಾಮಕಾರಿಯಾಗಿ ನಡೆಯದಿದ್ದರೆ ಸಂಸತ್ತಿನ ಕಾರ್ಯನಿರ್ವಹಣೆಯ ಬಗ್ಗೆಯೇ ಜನ ಸಿನಿಕರಾಗುತ್ತಾರೆ. ಸಂಸತ್ತಿನ ಕಲಾಪದ ಗುಣಮಟ್ಟದ ಕುಸಿತವು ನಿರಂತರವೂ ಸ್ಥಿರವೂ ಆಗಿದ್ದು, ಕಣ್ಣಿಗೆ ಕಾಣುವಂತಿದೆ. ಇಂತಹ ಸ್ಥಿತಿಯು ಪ್ರಜಾಪ್ರಭುತ್ವಕ್ಕೆ ಧಕ್ಕೆ ಉಂಟು ಮಾಡುತ್ತದೆ ಎಂಬುದರಲ್ಲಿ ಸಂದೇಹ ಇಲ್ಲ.

ದಿನದ ಟ್ವೀಟ್

ಹುಸಿ ಕರೆ: ಇರಲಿ ಎಚ್ಚರ

ಪೊಲೀಸರ ಸೋಗಿನಲ್ಲಿ ನನಗೆ ಆಗಾಗ ಫೋನ್ ಕರೆಗಳು ಬರುತ್ತಿರುತ್ತವೆ. ಅದೇ ರೀತಿ ಒಮ್ಮೆ ಕರೆ ಮಾಡಿದವನೊಬ್ಬ, ನೀವು ಕಳುಹಿಸಿದ ಪಾರ್ಸಲ್‌ನಲ್ಲಿ 200 ಗ್ರಾಂ ಎಂಡಿಎಂಎ ಪತ್ತೆಯಾಗಿದೆ, ಎಂಡಿಎಂಎ ಅಂದರೇನೆಂದು ಗೊತ್ತೇ ಎಂದು ಕೇಳಿದ. ಹೌದು, ಅದೊಂದು ಅಕ್ರಮ ಮಾದಕ ಪದಾರ್ಥ ಮತ್ತು ಅದನ್ನು ಕಳುಹಿಸಿದ್ದು ನಾನೇ ಎಂದೆ. ಅವನು ಫೋನ್ ಸಂಪರ್ಕ ಕಡಿದುಹಾಕಿದ. ನನ್ನೊಂದಿಗೆ ಮಾತನಾಡುವುದು ವ್ಯರ್ಥ ಎಂಬುದು ಅವನಿಗೆ ಮನವರಿಕೆಯಾಗಿತ್ತು.

ಜಿತೇಂದ್ರ

ಕಿಡಿನುಡಿ



...ನೀವು ಜಿಮ್‌ಗೆ ಹೋಗಿ ದೇಹದಾರ್ಢ್ಯ ಹೊಂದಬಹುದು, ಓಡುವ ತರಬೇತಿ ಪಡೆದು ಮ್ಯಾರಥಾನರ್ ಆಗಬಹುದು, ದಿನಕ್ಕೆ 4 ಲೀಟರ್ ನೀರು ಕುಡಿಯಬಹುದು, 7 ಗಂಟೆ ನಿದ್ದೆ ಮಾಡಬಹುದು, ಅತ್ಯುತ್ತಮ ಆಹಾರ, ಪೂರಕ ಆಹಾರವನ್ನು ಪಡೆಯಬಹುದು. ಆದರೆ ನಿಮ್ಮ ಮನಸ್ಸಿನ ಗೋಜಲುಗಳು ಮತ್ತು ಅಸಂಬದ್ಧವಾಗಿ ಮಾತನಾಡುವ ಸುತ್ತಮುತ್ತಲಿನ ಜನರನ್ನು ನಿರ್ವಹಿಸುವುದನ್ನು ಕಲಿಯದೇ ಇದ್ದರೆ ನೀವು ಅನಾರೋಗ್ಯದಿಂದಲೇ ಇರುತ್ತೀರಿ... ನಿಮ್ಮ ಮಾನಸಿಕ ಆರೋಗ್ಯಕ್ಕಾಗಿ ಕೆಲವರನ್ನು ನಿರ್ಲಕ್ಷಿಸುವುದು ದೌರ್ಬಲ್ಯವಲ್ಲ, ಅದು ನಿಮ್ಮ ಮಹಾಶಕ್ತಿ.

ದಿಲೀಪ್ ಕುಮಾರ್, ಉದ್ಯಮಿ

25 ವರ್ಷಗಳ ಹಿಂದೆ

ಗುರುವಾರ, 2-12-1999

• **‘ಬೆಂಬಲ ಬೆಲೆ ಘೋಷಣೆ ಬಳಿಕ ಈರುಳ್ಳಿ ದರದಲ್ಲಿ ಚೇತರಿಕೆ’**

ಬೆಂಗಳೂರು, ಡಿ. 1– ಈರುಳ್ಳಿಯನ್ನು ಮಾರುಕಟ್ಟೆಯಲ್ಲಿ ಕೆ.ಜಿ.ಗೆ ಮೂರು ರೂಪಾಯಿ ಬೆಲೆಯಲ್ಲಿ ಖರೀದಿಸಲಾಗುತ್ತದೆ ಎಂದು ರಾಜ್ಯ ಸರ್ಕಾರ ಘೋಷಿಸಿದ ನಂತರ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಏರಿಕೆ ಆಯಿತೆಂದು ಕೃಷಿ ಸಚಿವ ಟಿ.ಬಿ. ಜಯಚಂದ್ರ ಹಾಗೂ ತೋಟಗಾರಿಕೆ ಸಚಿವ ಅಲ್ಲಂ ವೀರಭದ್ರಪ್ಪ ಹೇಳಿದರು.

ಸಾಮಾನ್ಯ ಗುಣಮಟ್ಟದ ಕೆ.ಜಿ ಈರುಳ್ಳಿಗೆ ಕನಿಷ್ಠ ಮೂರು ರೂಪಾಯಿ ಬೆಲೆ ಕೊಟ್ಟು ಕೊಳ್ಳಲಾಗುತ್ತದೆ ಎಂದು ಸರ್ಕಾರ ಘೋಷಿಸಿ ಅದಕ್ಕಾಗಿ 20 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದರೂ, ರೈತರು ರಾಜ್ಯ ಸರ್ಕಾರ ಘೋಷಿಸಿದ ಬೆಂಬಲ ಬೆಲೆಗೆ ಮಾರಲು ಮುಂದೆ ಬರಲಿಲ್ಲ. ಏಕೆಂದರೆ ಸರ್ಕಾರ ಘೋಷಿಸಿದ ಮೇಲೆ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಯಿತು ಎಂದು ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• **ಆಲಮಟ್ಟಿ: ಕೇಂದ್ರ ಸರ್ಕಾರದ ಪ್ರಮಾಣಪತ್ರ ಬದಲಾವಣೆ ಇಲ್ಲ**

ನವದೆಹಲಿ, ಡಿ. 1– ಆಲಮಟ್ಟಿ ಅಣೆಕಟ್ಟು ವಿವಾದ ಕುರಿತಂತೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಇತ್ತೀಚೆಗೆ ಸಲ್ಲಿಸಿರುವ ಪ್ರಮಾಣಪತ್ರವನ್ನು ಹಿಂತೆಗೆದುಕೊಳ್ಳದಿರಲು ನಿರ್ಧರಿಸಿದೆ.

ಕೇಂದ್ರ ಸರ್ಕಾರವು 1978ರ ಏ. 22ರಂದು ಮಾಡಿದ್ದ ಶಿಫಾರಸಿನಂತೆ ಯೋಜನಾ ಆಯೋಗವು ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದಲ್ಲಿ 119 ಟಿಎಂಸಿ ಅಡಿ ನೀರು ಬಳಕೆಗೆ ಒಪ್ಪಿಗೆ ನೀಡಿದ್ದು, ಅದರಂತೆ ಎಫ್‌ಆರ್‌ಎಲ್ 512 ಮೀಟರ್ ಎತ್ತರಕ್ಕೆ ಆಲಮಟ್ಟಿ ಅಣೆಕಟ್ಟು ನಿರ್ಮಿಸಲು ಒಪ್ಪಿಗೆ ನೀಡಿತ್ತು.

ಈ ಒಪ್ಪಿಗೆಗೆ ತಾನು ಬದ್ಧವಾಗಿರುವುದಾಗಿ ಕೇಂದ್ರ ಸರ್ಕಾರವು ತನ್ನ ಪ್ರಮಾಣಪತ್ರದಲ್ಲಿ ತಿಳಿಸಿದೆ.

50 ವರ್ಷಗಳ ಹಿಂದೆ

ಸೋಮವಾರ, 2-12-1974

• **ಎಸ್ಸೆನ್‌ಗೆ ತಿಳಿಸಿ ಅಳಿಸಿದ ‘ಕೆಲಸ’**

ಬೆಂಗಳೂರು, ಡಿ. 1– ‘ಅಳಿಸಿ ಹಾಕಿಸಿದವನು ನಾನು. ಅದು ನಿಜ. ನಿಜಲಿಂಗಪ್ಪನವರಿಗೆ ಗೊತ್ತಿಲ್ಲದಂತೆ ಅಳಿಸಿ ಹಾಕಿದೆನೆಂಬುದು ನಿಜವಲ್ಲ’.

ಮಾಜಿ ಲೋಕೋಪಯೋಗಿ ಸಚಿವ ಎಚ್.ಕೆ. ವೀರಣ್ಣಗೌಡರ ಪ್ರತಿಕ್ರಿಯೆ ಇದು.

ವಿಧಾನಸೌಧ ನಿರ್ಮಾಣ ಪೂರ್ತಿಯಾದುದು 1956ರಲ್ಲಿ. ನಿರ್ಮಾಣ ಕಾಲದಲ್ಲಿ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ವಿಧಾನಸೌಧದ ದ್ವಾರದಲ್ಲಿ ‘ಸರ್ಕಾರದ ಕೆಲಸ ದೇವರ ಕೆಲಸ’ ಎಂದು ಕೆತ್ತಿಸಿದ್ದರು.

ನಿಜಲಿಂಗಪ್ಪನವರ ಮಂತ್ರಿಮಂಡಲ ಅಧಿಕಾರದಲ್ಲಿದ್ದಾಗ ಆ ಬರಹವನ್ನು ಅಳಿಸಿ ಹಾಕಿಸಲಾಯಿತು. ಆಗ ವೀರಣ್ಣಗೌಡರು ಲೋಕೋಪಯೋಗಿ ಸಚಿವರಾಗಿದ್ದರು.

ಅಳಿಸಿ ಹಾಕಿಸಿದಾಗ ಅದು ಸಾಕಷ್ಟು ವಾಗ್ವಾದಕ್ಕೆ ಎಡೆಕೊಟ್ಟಿತು.

ವಿಧಾನಸೌಧದ ಮೇಲೆ ಹನುಮಂತಯ್ಯನವರು ಬರೆಸಿದ ಸುಭಾಷಿತಗಳನ್ನು ಅಳಿಸಿಹಾಕಲು ತಾವು ಹೊಣೆಯಲ್ಲವೆಂದೂ, ತಮಗೆ ಗೊತ್ತಿಲ್ಲದ ಹಾಗೆ ಆಗಿನ ಲೋಕೋಪಯೋಗಿ ಸಚಿವ ಎಚ್.ಕೆ. ವೀರಣ್ಣಗೌಡರು ಆ ಕೆಲಸವನ್ನು ಮಾಡಿಸಿದರೆಂದೂ ನಿಜಲಿಂಗಪ್ಪನವರು ಮಡಿಕೇರಿಯಲ್ಲಿ ಹೇಳಿದರೆಂದು ಪತ್ರಿಕಾ ವರದಿ.

ವರದಿಗೆ ವೀರಣ್ಣಗೌಡರ ಪ್ರತಿಕ್ರಿಯೆ; ‘ಅಳಿಸಿ ಹಾಕುವ ವಿಷಯವನ್ನು ನಿಜಲಿಂಗಪ್ಪನವರ ಗಮನಕ್ಕೆ ಒಂದಲ್ಲ ಎರಡು ಬಾರಿ ತಂದಿದ್ದೆ’.

ಅಳಿಸಿ ಹಾಕಿದ ಹಿನ್ನೆಲೆಯನ್ನು ಗೌಡರು ಇಂದು ‘ಪ್ರಜಾವಾಣಿ’ಗೆ ನೀಡಿದರು.

ದೇಶದ ರಾಜ್ಯಗಳು ರಾಷ್ಟ್ರ ರಾಜಕಾರಣದ ಹೊಸ ಕೇಂದ್ರಗಳಾಗಿ ಉದಯಿಸಿವೆ

ಪ್ರಜಾತಂತ್ರದ ಬಹುತ್ವ ಕಂಡ ವರ್ಷ



ಜನರಾಜಕಾರಣ

ಸಂದೀಪ್ ಶಾಸ್ತ್ರಿ

ಚುನಾವಣಾ ರಾಜಕೀಯದ ದೃಷ್ಟಿಕೋನದಿಂದ 2024ನೇ ಇಸವಿಯ ಮೇಲೆ ಕಣ್ಣುಹಾಯಿಸಿದರೆ ಖಚಿತವಾದ ಸಂಗತಿಯೊಂದು ಕಾಣುತ್ತದೆ. ಅಂದರೆ, ಪ್ರತಿ ಚುನಾವಣೆಯ ಫಲಿತಾಂಶವೂ ಅನಿಶ್ಚಿತವಾಗಿತ್ತು! ದೇಶದ ಮತದಾರರು, ಬಹುತ್ವದ ಲಾಭ ಏನು ಎಂಬುದನ್ನು ಚುನಾವಣೆಗಳಲ್ಲಿ ಹೇಳಿದರು. 2023ರ ಅಂತ್ಯದಲ್ಲಿ ಬಿಜೆಪಿಯು ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಹ್ಯಾಟ್ರಿಕ್ ವಿಜಯ ಸಾಧಿಸಿ 2024ಕ್ಕೆ ಆತ್ಮವಿಶ್ವಾಸದಿಂದ ಪ್ರವೇಶಿಸಿತ್ತು.

ಜಯದ ರಥವನ್ನು ಹಾಗೆಯೇ ಮುಂದಕ್ಕೆ ಒಯ್ಯುವ ವಿಶ್ವಾಸ (ಕೆಲವರ ಪ್ರಕಾರ ಅತಿಯಾದ ವಿಶ್ವಾಸ) ಬಿಜೆಪಿಯವರಲ್ಲಿ ಇತ್ತು. ಆದರೆ 2024 ಅಷ್ಟೊಂದು ಉತ್ಸಾಹದೊಂದಿಗೆ ಕೊನೆಗೊಳ್ಳುತ್ತಿಲ್ಲ. ಎನ್‌ಡಿಎ ಮೈತ್ರಿಕೂಟವು ಪ್ರಮುಖವಾದ ಕೆಲವೆಡೆ ಜಯ ಸಾಧಿಸಿದೆ. ಜಾರ್ಖಂಡ್ ರಾಜ್ಯದಲ್ಲಿ ಅಧಿಕಾರ ಉಳಿಸಿಕೊಂಡ ಸಮಾಧಾನವು ‘ಇಂಡಿಯಾ’ ಮೈತ್ರಿಕೂಟಕ್ಕೆ ಇದೆ. ಆದರೆ ಇತರೆಡೆ ಅದು ಜಯದ ಬಿರುಸನ್ನು ಕಳೆದುಕೊಂಡಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಎಲ್ಲ ಪಕ್ಷಗಳೂ ಭಾರಿ ಹುರುಪಿನೊಂದಿಗೆ ಪ್ರಚಾರ ಆರಂಭಿಸಿದ್ದವು. ಬಿಜೆಪಿ ನೇತೃತ್ವದ ಎನ್‌ಡಿಎ, ಬಿಜೆಪಿಯ ಸಂಖ್ಯಾಬಲವು ಸಂಸತ್ತಿನಲ್ಲಿ ಹೆಚ್ಚುವುದರೊಂದಿಗೆ ತನಗೆ ಸತತ ಮೂರನೇ ಅವಧಿಗೆ ಹೆಚ್ಚಿನ ಬಹುಮತದೊಂದಿಗೆ ಅಧಿಕಾರ ಸಿಗಲಿದೆ ಎಂಬ ಲೆಕ್ಕಾಚಾರದಲ್ಲಿತ್ತು. ಇತ್ತ, ಬಲಿಷ್ಠ ಅಲ್ಲದಿದ್ದರೂ, ‘ಇಂಡಿಯಾ’ ಮೈತ್ರಿಕೂಟವನ್ನು ಹಲವು ಅಡ್ಡಿಗಳು, ಪಕ್ಷಾಂತರಗಳ ನಡುವೆ ಒಂದಾಗಿರಿಸುವಲ್ಲಿ ಕಾಂಗ್ರೆಸ್ ಪಕ್ಷವು ಪ್ರಮುಖ ಪಾತ್ರ ವಹಿಸಿತು. ಬಿಜೆಪಿಯ ಚುನಾವಣಾ ಯೋಜನೆಯನ್ನು ಜಾಗರೂಕವಾಗಿ ಸಿದ್ಧಪಡಿಸಲಾಯಿತು. ಬಿಜೆಪಿಯು ತನಗೆ ಲೋಕಸಭೆಯಲ್ಲಿ 370ಕ್ಕೂ ಹೆಚ್ಚು ಸ್ಥಾನಗಳು, ಎನ್‌ಡಿಎಗೆ 400ಕ್ಕೂ ಹೆಚ್ಚು ಸ್ಥಾನಗಳು ಸಿಗಲಿವೆ ಎಂದು ಅಂದಾಜಿಸಿತ್ತು.

2019ರ ಲೋಕಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟದಲ್ಲಿ ಬಿಜೆಪಿ ಹೊರತುಪಡಿಸಿದ ಪಕ್ಷಗಳ ಸಂಖ್ಯಾಬಲ 50 ಸ್ಥಾನಗಳಾಗಿದ್ದವು. ಆದರೆ ಈ ಬಾರಿ ಮಿತ್ರಪಕ್ಷಗಳ ಸಂಖ್ಯಾಬಲ 30ರ ಆಸುಪಾಸಿನಲ್ಲಿ ಇರಲಿದೆ ಎಂದು ಬಿಜೆಪಿ ಅಂದಾಜಿಸಿತ್ತು. ಬಿಜೆಪಿಯು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಬಹುವಾಗಿ ಅವಲಂಬಿಸಿತ್ತು. ಅವರೇ ಚುನಾವಣಾ ಪ್ರಚಾರದ ಕೇಂದ್ರವಾಗಿದ್ದರು. ತನಗೆ ಸೋಲೇ ಇಲ್ಲ ಎಂಬ ಚಿತ್ರಣವೊಂದನ್ನು ರೂಪಿಸುವ ಉದ್ದೇಶದಿಂದ ಎನ್‌ಡಿಎ, 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಘೋಷಣೆಯನ್ನು ಮಾಡಿತ್ತು. ರಾಜೀವ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು 1984ರಲ್ಲಿ ತೋರಿದ ಸಾಧನೆಯನ್ನು ಮೀರುವ ಉದ್ದೇಶ ಕೂಡ, 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಗುರಿ ನಿಗದಿ ಮಾಡಿಕೊಳ್ಳುವುದರ ಹಿಂದಿತ್ತು.

‘ಇಂಡಿಯಾ’ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಪ್ರಮುಖ ಪಾಲುದಾರ ಆಗಿದ್ದರೂ, ಅದು ಪ್ರಬಲ ಶಕ್ತಿಯಾಗಿರಲಿಲ್ಲ. ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಹಿನ್ನಡೆ ಅನುಭವಿಸಿದ ನಂತರ ಕಾಂಗ್ರೆಸ್ಸಿಗೆ ಮಿತ್ರಪಕ್ಷಗಳ ಬಳಿ ಹೆಚ್ಚಿನ ಚೌಕಾಶಿ ನಡೆಸುವ ಶಕ್ತಿ ಉಳಿದಿರಲಿಲ್ಲ. ‘ಇಂಡಿಯಾ’ ಮೈತ್ರಿಕೂಟದಲ್ಲಿ ಒಂದಿಷ್ಟು ಬದಲಾವಣೆಗಳೂ ಆದವು. ಜೆಡಿಯು ಪಕ್ಷವು ಎನ್‌ಡಿಎ ಜೊತೆ ಸೇರಿಕೊಂಡಿತು, ಟಿಎಂಸಿ ಪಕ್ಷವು ತನಗೆ ಬೇಕಾದಾಗ ‘ಇಂಡಿಯಾ’ ಜೊತೆ ಗುರುತಿಸಿಕೊಳ್ಳುವ, ಬೇಡದಿದ್ದಾಗ ದೂರ ಉಳಿಯುವ ಕೆಲಸ ಮಾಡಿತು. ಬಿಜೆಪಿಯನ್ನು ವಿರೋಧಿಸುವುದು ಮಾತ್ರ ಆ ಪಕ್ಷಗಳನ್ನೆಲ್ಲ ಒಟ್ಟಾಗಿ ಹಿಡಿದಿಟ್ಟ ಅಂಶವಾಗಿತ್ತು. ಪಶ್ಚಿಮ ಬಂಗಾಳ, ಪಂಜಾಬ್‌ನಂತಹ ಪ್ರಮುಖ ರಾಜ್ಯಗಳಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳಿಗೆ ಒಮ್ಮತಕ್ಕೆ ಬರಲು ಆಗಲಿಲ್ಲ, ಅವು ಅಲ್ಲಿ ತಾವೇ ಪರಸ್ಪರರ ವಿರುದ್ಧ ಸೆಣಸಿದವು.

2024ರ ಲೋಕಸಭಾ ಚುನಾವಣೆಯ ಫಲಿತಾಂಶವು ದೇಶದ ಮತದಾರರ ವಿವೇಕ ಮತ್ತು ಪಾಂಡಿತ್ಯಕ್ಕೆ ಇನ್ನೊಂದು ಪುರಾವೆಯನ್ನು ಒದಗಿಸಿಕೊಟ್ಟಿತು. ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಇಲ್ಲದ ಸ್ಥಿತಿಗೆ ನಾವು ಒಂದು ದಶಕದ ನಂತರ ಮರಳಿದೆವು. ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ದೊರೆತಿದೆ ಎಂದಷ್ಟೇ ಬಿಜೆಪಿಯು ಸಂಭ್ರಮಿಸಬೇಕಾಯಿತು. ‘ಇಂಡಿಯಾ’ ಮೈತ್ರಿಕೂಟದ ಸಂಖ್ಯಾಬಲ ಹೆಚ್ಚಾಯಿತು. ದೇಶವು ಒಂದು ದಶಕದ ನಂತರ ಅಧಿಕೃತ ವಿರೋಧ ಪಕ್ಷವೊಂದನ್ನು ಹೊಂದುವಂತಾಯಿತು.

ಹಿಂದಿನ ಲೋಕಸಭೆಯಲ್ಲಿ 303 ಸ್ಥಾನಗಳನ್ನು ಹೊಂದಿದ್ದ ಬಿಜೆಪಿಯು ಈ ಬಾರಿಯ ಲೋಕಸಭೆಯಲ್ಲಿ 240 ಸ್ಥಾನಗಳಿಗೆ ಕುಸಿಯುವುದಕ್ಕೆ ಮುಖ್ಯ ಕಾರಣ, ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ರಾಜಸ್ಥಾನ ಮತ್ತು ಮಹಾರಾಷ್ಟ್ರದಲ್ಲಿ ಸ್ಥಾನಗಳಿಕೆ ಕಡಿಮೆ ಆಗಿದ್ದುದು. ಉತ್ತರಪ್ರದೇಶದಲ್ಲಿಯೇ 29 ಸ್ಥಾನಗಳು ಕಡಿಮೆಯಾದವು. ಆದರೆ ಒಡಿಶಾ, ತೆಲಂಗಾಣ, ಆಂಧ್ರಪ್ರದೇಶದಲ್ಲಿ ಪಕ್ಷವು ಉತ್ತಮ ಸಾಧನೆ ತೋರಿದ ಕಾರಣಕ್ಕೆ, ಪಕ್ಷದ ಸ್ಥಾನಗಳು 240ಕ್ಕಿಂತ ಕಡಿಮೆ ಆಗಲಿಲ್ಲ. 2024ರ ಲೋಕಸಭಾ ಚುನಾವಣೆ ಫಲಿತಾಂಶವು ಮತದಾರರು ವಿವಿಧ ರಾಜಕೀಯ ಪಕ್ಷಗಳಿಗೆ ನೀಡಿದ ‘ಬಹುತ್ವದ ಲಾಭ’ವಾಗಿ ಕಾಣುತ್ತದೆ. ನೆರೆಹೊರೆಯ ರಾಜ್ಯಗಳಲ್ಲಿ ದಾಖಲಾದ ಫಲಿತಾಂಶಗಳು ಬಹಳ ಭಿನ್ನವಾಗಿದ್ದವು. ದೇಶದ ರಾಜ್ಯಗಳು ರಾಷ್ಟ್ರ ರಾಜಕಾರಣದ ಹೊಸ ಕೇಂದ್ರಗಳಾಗಿ ಉದಯಿಸಿದವು.

ಲೋಕಸಭಾ ಚುನಾವಣೆಯಲ್ಲಿ ಆಗಿದ್ದು ವಿಧಾನಸಭಾ ಚುನಾವಣೆಗಳಲ್ಲಿ ಮುಂದುವರಿಯಿತು. ಕಾಂಗ್ರೆಸ್ ಪಕ್ಷದಲ್ಲಿ ಮನೆಮಾಡಿದ್ದ ಅತಿಯಾದ ಆತ್ಮವಿಶ್ವಾಸವು ಒಂದು ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸೋಲುವಂತೆ ಮಾಡಿತು. ಹರಿಯಾಣದಲ್ಲಿ ಜಾಟ್ ಸಮುದಾಯದ ಮತಗಳನ್ನು ಒಗ್ಗೂಡಿಸಲು ನೀಡಿದ ಅತಿಯಾದ ಆದ್ಯತೆಯ ಪರಿಣಾಮವಾಗಿ, ಜಾಟ್ ಹೊರತುಪಡಿಸಿದ ಸಮುದಾಯಗಳು ಬಿಜೆಪಿಯ ಪರವಾಗಿ ಒಗ್ಗೂಡಿದವು, ಜಾಟ್ ಸಮುದಾಯದ ಮತಗಳು ಕಾಂಗ್ರೆಸ್ ಪರವಾಗಿ ಸೀಮಿತ ಪ್ರಮಾಣದಲ್ಲಿ ಒಗ್ಗೂಡಿದವು. ಅಲ್ಲದೆ, ಕಾಂಗ್ರೆಸ್ ಪಕ್ಷವು ಒಳಜಗಳಕ್ಕೆ ಬೆಲೆ ತೆರಬೇಕಾಯಿತು, ಬಿಜೆಪಿಯು ಮೌನವಾಗಿ ತಳಮಟ್ಟದಲ್ಲಿ ನಡೆಸಿದ ಅಭಿಯಾನದ ಪ್ರಯೋಜನವನ್ನು ಪಡೆಯಿತು.



ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಕಾಂಗ್ರೆಸ್ ಜೊತೆಗಿನ ಮೈತ್ರಿಯ ಮೂಲಕ ಗೆಲುವು ಸಾಧಿಸಿತು. ಹೀಗಿದ್ದರೂ ಅಲ್ಲಿ ಜಮ್ಮು ವಲಯ ಮತ್ತು ಕಾಶ್ಮೀರ ಕಣಿವೆಯಲ್ಲಿನ ಫಲಿತಾಂಶದಲ್ಲಿ ಬಹಳ ಸ್ಪಷ್ಟವಾದ ಅಂತರ ಕಾಣಿಸುತ್ತಿತ್ತು. ಜಮ್ಮು ಪ್ರದೇಶದಲ್ಲಿ ಬಿಜೆಪಿಯು ಉತ್ತಮ ಸಾಧನೆ ತೋರಿತು. ಆದರೆ ಕಾಂಗ್ರೆಸ್ ಪಕ್ಷವು ಇಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿಯಾಗಿ ತೋರಿಸುವಲ್ಲಿ ಯಶಸ್ಸು ಕಾಣಲಿಲ್ಲ. ಕಾಶ್ಮೀರ ಪ್ರದೇಶದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಉತ್ತಮ ಸಾಧನೆ ತೋರಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದ ಹೊಸ ಸರ್ಕಾರ ರಚನೆ ಆದ ನಂತರದಲ್ಲಿ, ಅಲ್ಲಿಗೆ ರಾಜ್ಯದ ಸ್ಥಾನವನ್ನು ಮತ್ತೆ ಕೊಡಿಸಲು ಸರ್ಕಾರವು ಕೇಂದ್ರ ಸರ್ಕಾರದ ಜೊತೆ ಮಾತುಕತೆಗೆ ಯತ್ನ ನಡೆಸಿತು. ಅಲ್ಲಿ ಕಾಂಗ್ರೆಸ್ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ನಡುವಿನ ಸಂಬಂಧದಲ್ಲಿ ಅಡ್ಡಿಯೊಂದು ಎದುರಾಗಿರುವಂತೆ ಕಾಣುತ್ತಿದೆ. ಏಕೆಂದರೆ ಕಾಂಗ್ರೆಸ್ ಪಕ್ಷವು ಅಲ್ಲಿ ಸರ್ಕಾರದ ಭಾಗವಾಗಿಲ್ಲ.

ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆಯೊಂದಿಗೆ ಈ ವರ್ಷ ಕೊನೆಗೊಳ್ಳುತ್ತಿದೆ. ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟವು ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿದೆ. ವಿರೋಧ ಪಕ್ಷಗಳ ‘ಮಹಾ ವಿಕಾಸ ಆಘಾಡಿ’ ನೆಲಕಚ್ಚಿದೆ. ಆಘಾಡಿಯ ಮೂರು ಪಕ್ಷಗಳಾದ ಕಾಂಗ್ರೆಸ್, ಉದ್ಧವ್ ಠಾಕ್ರೆ ಅವರ ಶಿವಸೇನಾ ಮತ್ತು ಶರದ್ ಪವಾರ್ ಅವರ ಎನ್‌ಸಿಪಿ ಬಹಳ ಕಳಪೆ ಸಾಧನೆ ತೋರಿವೆ. ಇದರಿಂದಾಗಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟಕ್ಕೆ ದೊಡ್ಡ ಬಹುಮತ ದೊರೆತಿದೆ.

ಜಾರ್ಖಂಡ್‌ನಲ್ಲಿ ಚುನಾವಣಾ ಹಣಾಹಣಿಯು ಬುಡಕಟ್ಟು ಸಮುದಾಯಗಳ ಪ್ರಾಬಲ್ಯದ ಪ್ರದೇಶಗಳು ಹಾಗೂ ಇತರ ಪ್ರದೇಶಗಳಲ್ಲಿನ ಬೆಂಬಲಕ್ಕೆ ಸಂಬಂಧಿಸಿತ್ತು. ‘ಇಂಡಿಯಾ’ ಮೈತ್ರಿಕೂಟವು ಬುಡಕಟ್ಟು ಸಮುದಾಯಗಳ ಪ್ರಾಬಲ್ಯದ ಪ್ರದೇಶದಲ್ಲಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಂಡು, ಇತರ ಪ್ರದೇಶಗಳಲ್ಲಿ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಒಳ್ಳೆಯ ಸಾಧನೆ ತೋರಿತು. ಜೆಎಂಎಂ ಪಕ್ಷವು ಕಾಂಗ್ರೆಸ್, ಆರ್‌ಜೆಡಿ ಮತ್ತು ಕಮ್ಯುನಿಸ್ಟ್ ಪಕ್ಷಗಳ ಜೊತೆ ಮಾಡಿಕೊಂಡ ಮೈತ್ರಿಯು ಇಲ್ಲಿ ನೆರವಿಗೆ ಬಂತು. ಬುಡಕಟ್ಟು ಸಮುದಾಯಗಳ ಪ್ರಾಬಲ್ಯ ಇಲ್ಲದ ಕಡೆಗಳಲ್ಲಿ ನೆಲೆ ಉಳಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ಸು ಕಂಡಿತಾದರೂ, ಬುಡಕಟ್ಟು ಸಮುದಾಯಗಳ ಪ್ರಾಬಲ್ಯದ ಪ್ರದೇಶಗಳಲ್ಲಿ ಜೆಎಂಎಂ ಹೊಂದಿರುವ ಬೆಂಬಲಿಗರ ನೆಲೆಗೆ ಗಂಭೀರ ಏಟು ನೀಡಲು ಅದಕ್ಕೆ ಸಾಧ್ಯವಾಗಲಿಲ್ಲ. ಅಲ್ಲದೆ, ಜೆಎಂಎಂ ನೇತೃತ್ವದ ಸರ್ಕಾರ ರೂಪಿಸಿದ ಜನಕಲ್ಯಾಣ ಯೋಜನೆಗಳು ‘ಇಂಡಿಯಾ’ ಮೈತ್ರಿಕೂಟದ ನೆರವಿಗೆ ಬಂದವು.

ಒಟ್ಟಾರೆಯಾಗಿ ಹೇಳುವುದಾದರೆ, ಈ ವರ್ಷದಲ್ಲಿ ಹಲವು ಅನಿರೀಕ್ಷಿತ ಬದಲಾವಣೆಗಳು ಕಂಡುಬಂದವು. ಭಾರತದ ಪ್ರಜಾತಂತ್ರದ ಬಹುತ್ವವು 2024ರಲ್ಲಿ ಎದ್ದುಕಾಣುವಂತೆ ಇತ್ತು.

ಚುರುಮುರಿ



ಪುರಾವೆ ಇಲ್ಲದಿದ್ದರೆ ದಂಡ!

• ಸುಮಂಗಲಾ

‘830 ಕೋಟಿ ರೂಪಾಯಿ ಅಂದ್ರೆ 83ರ ಮುಂದೆ ಎಷ್ಟು ಸೊನ್ನೆ ಬರತೈತಿ?’ ಬೆಕ್ಕಣ್ಣ ಘನಗಂಭೀರವಾಗಿ ಕೇಳಿದಾಗ ನಾನು ಹೌಹಾರಿದೆ.

‘ಏಳೋ ಎಂಟೋ ಸೊನ್ನೆ ಬರತೈತಿ’ ಬೆರಳು ಮಡಚಿ ಎಣಿಸಲು ಪ್ರಯತ್ನಿಸಿದೆ.

‘ಮನೆಮದ್ದಿಗೆ ಎಷ್ಟ್ ದುಬಾರಿ ಬೆಲೆ ತೆರಬೇಕು ಅಂತ ಈಗರೆ ತಿಳಕೋ! ನೆಗಡಿ ಬಂದಾಗ ಈ ಕಷಾಯ ಕುಡಿದಿದ್ದಕ್ಕೇ ಕಡಿಮೆಯಾತು, ಮನೇಲಿ ಮಾಡಿದ ಈ ಲೇಹ್ಯ ತಿಂದಿದ್ದರಿಂದಲೇ ಹೊಟ್ಟೆನೋವು ಕಡಿಮೆಯಾತು ಅಂತೆಲ್ಲ ಇನ್ನು ಮೇಲೆ ಹೊರಗೆ ವದರಬ್ಯಾಡ’ ಎಂದು ನನ್ನ ಮೂತಿಗೆ ತಿವಿಯಿತು. ನನಗೆ ತಲೆಬುಡ ತಿಳಿಯಲಿಲ್ಲ.

‘ಕ್ರಿಕೆಟರ್ ಸಿಧು ತನ್ನ ಹೆಂಡತಿಗೆ ಮನೆಮದ್ದು ಮಾಡಿದ್ದರಿಂದ ಸ್ಟೇಜ್ ನಾಲ್ಕರಲ್ಲಿದ್ದ ಕ್ಯಾನ್ಸರ್ ನಲವತ್ತೇ ದಿನದಲ್ಲಿ ಪೂರಾ ಗುಣ ಆತು ಅಂತ ಹೇಳಿಕೆ ಕೊಟ್ಟಾನಂತ. ಈಗ ನಿನ್ನ ಹೇಳಿಕೆಗೆ ಸರಿಯಾದ ವೈಜ್ಞಾನಿಕ ಪುರಾವೆ ಕೊಡು, ಇಲ್ಲಕ್ಕಂದ್ರೆ 830 ಕೋಟಿ ರೂಪಾಯಿ ದಂಡ ತುಂಬು ಅಂತ ಅವರ್‌ಗ ಒಬ್ಬರು ಡಾಕ್ಟ್ರು ನೋಟಿಸ್ ಕಳಿಸ್ಯಾರೆ’ ಬೆಕ್ಕಣ್ಣ ವಿವರಿಸಿತು.

‘ವಿಮಾನ ಕಂಡುಹಿಡಿದಿದ್ದು ರೈಟ್ ಬ್ರದರ್ಸ್ ಅಲ್ಲ, ಅದಕ್ಕಿಂತ ಮುಂಚೇನೆ ಪುಷ್ಪಕವಿಮಾನದಲ್ಲಿ ನಾವು ಓಡಾಡತಿದ್ದಿವಿ ಅಂತ ಮೊನ್ನೆ ಉತ್ತರಪ್ರದೇಶದ ಗವರ್ನರ್ ಹೇಳಿದ್ರಲ್ಲ... ಅವರಿಗೂ ಹಿಂಗೇ ವೈಜ್ಞಾನಿಕ ಪುರಾವೆ ಕೊಡರಿ, ಇಲ್ಲಕ್ಕಂದ್ರ ಇಷ್ಟ್ ರೊಕ್ಕ ದಂಡ ತುಂಬ್ರಿ ಅಂತ ನೋಟಿಸ್ ಕೊಡಬಕು’ ನಾನು ವಾದಿಸಿದೆ.

‘ನಾವು ವೇದಕಾಲದಾಗೆ ಏನೇನೋ ಮಾಡಿದ್ದೆವಂತ ಭಾಳಾ ಮಂದಿ ಬಡಬಡಿಸ್ತಾರಲ್ಲ, ಎಲ್ಲಾರಗೂ ಪ್ರೂಫ್ ಕೊಡ್ರಿ ಅಂತ ನೋಟಿಸ್ ಕೊಡಬೇಕು’.

‘ನಿಮ್ ಯತ್ನಾಳ ಅಂಕಲ್ಲೂ ಸೇರಿದಂಗೆ ಬಾಯಿಗೆ ಬಂದಂಗ ಮಾತಾಡೋರಿಗೆ ಎಲ್ಲದಕ್ಕೆ ಪ್ರೂಫ್ ಕೊಡ್ರಿ, ಇಲ್ಲಾ ದಂಡ ತುಂಬ್ರಿ ಅನ್ನಬಕು’.

‘ಆಹಾ! ಯಾರದಾದರೂ ಬಾಯಿ ಮುಚ್ಚಿಸಬೌದು, ಆದರೆ ಯತ್ನಾಳ ಅಂಕಲ್ ಬಾಯಿ ಮುಚ್ಚಿಸಾಕೆ ಮಾತ್ರ ದೇವರಲ್ಲ, ಮೋದಿ ಮಾಮಂಗೂ ಆಗಲ್ಲ!’ ಎಂದು ಬೆಕ್ಕಣ್ಣ ಗಹಗಹಿಸಿತು.

ಚರ್ಚೆ

ಕೆಲಸದ ಅವಧಿ: ದಿಕ್ಕುತಪ್ಪಿದ ಆದ್ಯತೆ

ಕೆಲಸಗಾರರನ್ನು ಯಂತ್ರಗಳಂತೆ ನೋಡುವ ಮನೋಭಾವವನ್ನೇ ಮೌಲ್ಯವಾಗಿ ಬಿಂಬಿಸುವುದರಿಂದ ನೈಜ ಸಮಸ್ಯೆಗಳಿಗೆ ಪರಿಹಾರ ಸಿಗದು

• ಎಚ್.ಕೆ.ಶರತ್

‘ನಾವು ಚೀನಾಗಿಂತ ಕಡಿಮೆ ಅಂದ್ರೂ ಇಪ್ಪತ್ತು ವರ್ಷಗಳಷ್ಟು ಹಿಂದುಳಿದಿದ್ದೇವೆ’– ಈ ಮಾತು ಹೇಳಿದ್ದು ತಮಿಳುನಾಡಿನ ಹೊಸೂರು ಕೈಗಾರಿಕಾ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಯೊಂದನ್ನು ನಡೆಸುತ್ತಿರುವ ಒಬ್ಬ ಯುವ ಉದ್ಯಮಿ. ತರಬೇತಿ ಕಾರ್ಯಾಗಾರವೊಂದರಲ್ಲಿ ಇತ್ತೀಚೆಗೆ ಪಾಲ್ಗೊಂಡಿದ್ದರಿಂದ, ಕೆಲ ಕೈಗಾರಿಕೆಗಳಿಗೆ ಭೇಟಿ ನೀಡುವ ಅವಕಾಶ ದೊರೆತಿತ್ತು.

ತಮ್ಮ ಕೈಗಾರಿಕೆ ವೀಕ್ಷಣೆಗೆ ಬಂದಿದ್ದ ತಂಡದೊಂದಿಗೆ ಕೆಲ ಹೊತ್ತು ಮಾತುಕತೆ ನಡೆಸಿದ ಯುವ ಉದ್ಯಮಿ, ತಾವು ಎದುರಿಸುತ್ತಿರುವ ಸವಾಲುಗಳ ಕುರಿತು ವಿವರಿಸುವಾಗ ಮೇಲಿನ ಮಾತು ಹೇಳಿದರು. ‘ಉತ್ಪಾದನಾ ಕ್ಷೇತ್ರದಲ್ಲಿ ಚೀನಾ ಬಳಸುತ್ತಿರುವ ತಂತ್ರಜ್ಞಾನಗಳು ಮತ್ತು ಅಲ್ಲಿನ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುವವರಲ್ಲಿನ ಕೌಶಲಗಳನ್ನು ಗಮನಿಸಿದರೆ, ನಾವು ಅವರಿಗೆ ಸರಿಸಮಾನವಾಗಿ ನಿಲ್ಲುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ’ ಎಂದು ವಿಷಾದಿಸಿದರು.

ನಮ್ಮ ತಂಡದ ಭಾಗವಾಗಿದ್ದ, ಬೆಳಗಾವಿಯಲ್ಲಿ ಸಣ್ಣ ಕೈಗಾರಿಕೆ ಹೊಂದಿರುವ ಉದ್ಯಮಿಯೊಬ್ಬರು ಇವರ ಮಾತಿಗೆ ಪ್ರತಿಕ್ರಿಯಿಸುತ್ತಾ, ‘ಚೀನಾಗಿಂತ ನಾವು 40 ವರ್ಷಗಳಷ್ಟು ಹಿಂದುಳಿದಿದ್ದೇವೆ ಎಂಬುದು ನನ್ನ ಅಭಿಪ್ರಾಯ’ ಎಂದರು. ಮುಂದುವರಿದು, ಸಣ್ಣ ಕೈಗಾರಿಕೆಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಿವೆ ಎಂಬುದನ್ನು ವಿವರಿಸಿದರು.

ಕಡಿಮೆ ಬೆಲೆಗೆ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಬೇಕಾದ ಸವಾಲು ತಯಾರಿಕಾ ಕ್ಷೇತ್ರದ ಮೇಲಿದೆ. ಚೀನಾ ಇದರಲ್ಲಿ ಈಗಾಗಲೇ ದಾಪುಗಾಲಿರಿಸಿ, ತಯಾರಿಕಾ ಕ್ಷೇತ್ರದ ಶಕ್ತಿಕೇಂದ್ರವಾಗಿದೆ. ಒಂದು ಹಂತದಲ್ಲಿ, ಚೀನಾದೊಂದಿಗೆ ಸ್ಪರ್ಧಿಸುವ, ಅದಕ್ಕೆ ಪ್ರತಿಸ್ಪರ್ಧಿಯಾಗಿ ಎದ್ದುನಿಲ್ಲುವ ಮಾತನಾಡುತ್ತಿದ್ದ ಭಾರತದ ತಯಾರಿಕಾ ವಲಯದ ಪರಿಸ್ಥಿತಿ ಇಂದು ಹೇಗಿದೆ ಎಂಬ ಕುರಿತು ವಾಸ್ತವಿಕ ನೆಲಗಟ್ಟಿನಲ್ಲಿ ಚಿಂತಿಸುವ ಅಗತ್ಯ ಇದೆ. ‘ಭಾರತದಲ್ಲಿ ತಯಾರಿಸಿ’, ‘ಕೌಶಲ ಭಾರತ’ ಎಂಬ ಉಪಕ್ರಮಗಳು ಬರೀ ಘೋಷಣೆಗಳಾಗಿ ಉಳಿದಿವೆಯೋ ಅಥವಾ ಬೇರು ಮಟ್ಟದಲ್ಲೂ ಬದಲಾವಣೆ ಸಂಭವಿಸುತ್ತಿದೆಯೋ ಎಂಬುದನ್ನು ಪರಿಶೀಲಿಸಬೇಕಿದೆ.

ಸಣ್ಣ ಮತ್ತು ಮಧ್ಯಮ ಹಂತದ ಕೈಗಾರಿಕೆಗಳನ್ನು ನಡೆಸುತ್ತಿರುವ ಉದ್ಯಮಿಗಳ ಮಾತು ಕೇಳಿದರೆ, ಪರಿಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆ ಆಗಿರುವ ಯಾವ ಸೂಚನೆಗಳೂ ಸಿಗಲಾರವು. ಶೈಕ್ಷಣಿಕ ವಲಯ ಮತ್ತು ಉದ್ಯಮ ವಲಯದ ನಡುವೆ ಎದ್ದು ನಿಂತಿರುವ ಗೋಡೆಗಳನ್ನು ಉರುಳಿಸುವ ಪ್ರಯತ್ನಗಳು ಕೂಡ ವಿಫಲಗೊಳ್ಳುತ್ತಲೇ ಇವೆ. ಹೀಗಾಗಿ, ಶೈಕ್ಷಣಿಕ ವಲಯದಲ್ಲಿ ನಡೆಯುತ್ತಿರುವ ಬಹುಪಾಲು ಸಂಶೋಧನೆಗಳು ಸಂಶೋಧನಾ ಪ್ರಬಂಧಗಳ ಸೃಷ್ಟಿಗೆ ಬೇಕಿರುವ ಅಂಕಿ-ಅಂಶ ರೂಪದ ಫಲಿತಾಂಶ ನೀಡಲು ಶಕ್ತವೇ ವಿನಾ ಪ್ರಾಯೋಗಿಕವಾಗಿ ಉಪಯೋಗಕ್ಕೆ ಬರುತ್ತಿಲ್ಲ.

ಇನ್ನು ಎಂಜಿನಿಯರಿಂಗ್‌ನಂತಹ ವೃತ್ತಿಶಿಕ್ಷಣದ ಭಾಗವಾಗಿ ಕಲಿಸುತ್ತಿರುವ ವಿಷಯಗಳು ಮತ್ತು ಮೈಗೂಡಿಸುತ್ತಿರುವ ಕೌಶಲಗಳ ಕುರಿತು ಕೂಡ ಉದ್ಯಮ ವಲಯದಲ್ಲಿ ದೊಡ್ಡ ಮಟ್ಟದ ಅಸಮಾಧಾನವಿದೆ. ಉದ್ಯಮ ವಲಯದಲ್ಲಿ ಕೆಲಸ ನಿರ್ವಹಿಸಲು ಬೇಕಿರುವ ಕೌಶಲಗಳು ಎಂಜಿನಿಯರಿಂಗ್ ಪದವೀಧರರಲ್ಲಿ ಇರುವುದೇ ಇಲ್ಲ, ಅರ್ಹ ಅಭ್ಯರ್ಥಿಗಳು ಸಿಗುವುದೇ ದುಸ್ತರವಾಗಿದೆ ಎನ್ನುವುದು ಉದ್ಯಮ ವಲಯದ ದೂರು.

ವೆಚ್ಚ ಕಡಿತ, ಉತ್ಪಾದಕತೆ ಮತ್ತು ಲಾಭ ಹೆಚ್ಚಳದ ಕಡೆಗೆ ಹೆಚ್ಚು ಚಿಂತಿಸುವ ಉದ್ಯಮ ವಲಯದಲ್ಲಿ ಕೆಲಸಗಾರರ ಧೋರಣೆ ಕುರಿತು ಸಹ ಅಸಮಾಧಾನವಿದೆ. ಈ ಅಸಮಾಧಾನ ಕೆಲವೊಮ್ಮೆ ಅಸಹನೆಯಾಗಿಯೂ ಹೊರಹೊಮ್ಮುವುದಿದೆ. ಚೀನಾ ಮತ್ತು ಜಪಾನ್ ದೇಶದ ಕೆಲಸಗಾರರಲ್ಲಿನ ಕೌಶಲ ಮತ್ತು ವೃತ್ತಿಪರತೆಯೊಂದಿಗೆ ಹೋಲಿಸಿ, ತಮಗೆ ಲಭ್ಯವಾಗುತ್ತಿರುವ ಮಾನವ ಸಂಪನ್ಮೂಲವನ್ನು ನಿರ್ವಹಿಸುತ್ತಾ ಸ್ಪರ್ಧಾತ್ಮಕ ಜಗತ್ತಿನಲ್ಲಿ ಅಸ್ತಿತ್ವ ಉಳಿಸಿಕೊಳ್ಳುವುದೇ ಸವಾಲಾಗಿದೆ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಬಹುತೇಕ ಉದ್ಯಮಿಗಳು ಅನೌಪಚಾರಿಕ ಮಾತುಕತೆ ವೇಳೆ ಆಡುವುದನ್ನೇ ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು ಬಹಿರಂಗವಾಗಿ ಹೇಳುವ ಮೂಲಕ ಟೀಕೆ-ಟಿಪ್ಪಣಿಗಳಿಗೆ ಗುರಿಯಾಗುತ್ತಿದ್ದಾರೆ.

ಆದರೆ ಇಲ್ಲಿ ಗಮನಿಸಬೇಕಾದ ಬೇರೆ ಆಯಾಮವೂ ಇದೆ. ದೇಶದಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲವು ಕೌಶಲ ಮತ್ತು ವೃತ್ತಿಪರತೆ ಹೊಂದಿಲ್ಲದೇ ಹೋದರೆ ಅದಕ್ಕೆ ಯಾರನ್ನು ದೂರಬೇಕು? ಕೆಲಸಗಾರರನ್ನೋ ಅಥವಾ ನೀತಿ ನಿರೂಪಕರನ್ನೋ? ‘ಕೌಶಲ ಭಾರತ’ದಂತಹ ಯೋಜನೆಗಳ ವೈಫಲ್ಯಕ್ಕೆ ಹೊಣೆ ಯಾರು?



ದೇಶದ ತಯಾರಿಕಾ ವಲಯ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ವ್ಯವಸ್ಥೆಯ ಹಂತದಲ್ಲಿ ಪರಿಹಾರ ಕಂಡುಕೊಳ್ಳಬೇಕಿದೆ. ಪ್ರಾಯೋಗಿಕವಾಗಿ ಅನ್ವಯಿಸಬಹುದಾದ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಿ, ವೃತ್ತಿಪರ ಶಿಕ್ಷಣವನ್ನು ನಿಜವಾದ ಅರ್ಥದಲ್ಲೂ ವೃತ್ತಿಪರವಾಗಿಸಲು ಕೈಗೊಳ್ಳಬೇಕಿರುವ ಕ್ರಮಗಳತ್ತ ಸರ್ಕಾರಗಳು ಗಮನಹರಿಸಬೇಕಿದೆ.

ಈ ದಿಸೆಯಲ್ಲಿ ಸರ್ಕಾರಗಳ ಗಮನ ಸೆಳೆಯುವ ಬದಲು, ಕೆಲಸಗಾರರ ಮೇಲೆ ದೂರು ಹೊರಿಸುತ್ತಾ, ಅವರನ್ನು ಯಂತ್ರಗಳಂತೆ ನೋಡುವ ಮನೋಭಾವವನ್ನೇ ಮೌಲ್ಯವಾಗಿ ಬಿಂಬಿಸುವ ಕಸರತ್ತು ವಾಸ್ತವಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾರದು. ಕೆಲಸಗಾರರಲ್ಲಿ ಉತ್ಪಾದಕತೆ ಹೆಚ್ಚಿಸಲು ಹೊಸ ದಾರಿಗಳನ್ನು ಕಂಡುಕೊಳ್ಳಲು ಜಾಗತಿಕ ಉದ್ಯಮ ವಲಯ ತುಡಿಯುವಾಗ, ನಮ್ಮಲ್ಲಿ ಕೆಲಸದ ಅವಧಿಯ ಕುರಿತು ಮಾತ್ರ ಚರ್ಚೆ ನಡೆಯುವುದು ದಿಕ್ಕುತಪ್ಪಿದ ಆದ್ಯತೆಗೆ ಹಿಡಿದ ಕನ್ನಡಿಯಂತೆ ತೋರುವುದಿಲ್ಲವೇ?

ವಾಚಕರ ವಾಣಿ

ಬಾಣಂತಿಯರ ಸಾವು: ಸರ್ಕಾರ ಕಣ್ತೆರೆಯುವುದು ಎಂದು?

ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿರುವ ಬಾಣಂತಿಯರ ಸಾವಿನ ಪ್ರಕರಣವು ನಮ್ಮ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೇ ದೊಡ್ಡ ಕಳಂಕ ತರುವ ಸುದ್ದಿಯಾಗಿದೆ. ಈ ಬಗ್ಗೆ ತ್ವರಿತವಾಗಿ ಸಭೆ ಕರೆದು ಕ್ರಮ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಔಷಧ ನಿಯಂತ್ರಕರನ್ನು ಅಮಾನತುಗೊಳಿಸಿದ್ದಾರೆ. ಆದರೆ ನಿಜವಾದ ದೋಷ ಇರುವುದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಲ್ಲಿ (ಕೆಎಸ್‌ಎಂಎಸ್‌ಸಿಎಲ್). ಈ ನಿಗಮವು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಎಲ್ಲಾ ರೀತಿಯ ವೈದ್ಯಕೀಯ ವಸ್ತುಗಳನ್ನು ಸರಬರಾಜು ಮಾಡಲೆಂದು 2013ರಲ್ಲಿ ನೋಂದಣಿಯಾಗಿರುವ ಸಂಸ್ಥೆಯಾಗಿದೆ. ತನ್ನಲ್ಲಿ ಬರುವಂಥ ಪ್ರತಿ ಔಷಧವನ್ನೂ ಪರೀಕ್ಷೆಗೊಳಪಡಿಸಿ, ಉತ್ತಮವಾಗಿದ್ದರೆ ಮಾತ್ರ ಸರಬರಾಜು ಮಾಡುವ ಹೊಣೆ ಈ ಸಂಸ್ಥೆಯದು. ತಮಿಳುನಾಡಿನ ವೈದ್ಯಕೀಯ ಸೇವಾ ಕೇಂದ್ರದ ಮಾದರಿಯಲ್ಲಿ ಕೆಲಸ ಮಾಡಲು ಈ ಸಂಸ್ಥೆಯನ್ನು ಹುಟ್ಟುಹಾಕಲಾಗಿತ್ತು. ತಮಿಳುನಾಡಿನಲ್ಲಿ ಸರಬರಾಜು ಆಗುವ ಪ್ರತಿ ಔಷಧವನ್ನೂ ಕ್ವಾರಂಟೈನ್ ಮಾಡಿಟ್ಟು, ಅದು ಬಳಸಲು ಯೋಗ್ಯವೆಂದು ನಿರ್ಧಾರವಾದ ಬಳಿಕವೇ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತದೆ. ಬಳ್ಳಾರಿ ಜಿಲ್ಲಾಸ್ಪತ್ರೆಗೆ ಸರಬರಾಜು ಮಾಡಿದ್ದ ರಿಂಗರ್ ಲ್ಯಾಕ್ಟೇಟ್ ದ್ರಾವಣವನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತೇ? ಆ ಪರೀಕ್ಷೆಯ ವರದಿಗಳನ್ನು ಮುಖ್ಯಮಂತ್ರಿಯವರ ಮುಂದೆ ತಂದಿರಿಸಲಾಗಿತ್ತೇ? ನಿಜವಾದ ಹೊಣೆ ಈ ನಿಗಮದ್ದಾಗಬೇಕಲ್ಲವೇ?

ಇಂದು ಸರ್ಕಾರಿ ಆಸ್ಪತ್ರೆಗೆ ಹೋದರೆ, ರೋಗಿಗಳಿಗೆ ಹೊರಗಿನಿಂದ ಔಷಧ ತರಲು ಬರೆದುಕೊಡುತ್ತಾರೆ. ಬಳ್ಳಾರಿಯಲ್ಲಿ ನಿಧನರಾದ ಈ ಬಾಣಂತಿಯರಿಗೂ ಹೊರಗಿನಿಂದ ತರಿಸಿದ್ದ ಔಷಧವನ್ನೇ ಕೊಟ್ಟಿರಬಹುದು. ಹೊರಗಿನಿಂದ ತರಿಸಿದ ಔಷಧವನ್ನು (ಸಲೈನ್) ಕೊಟ್ಟಿದ್ದರೆ ರಾಜ್ಯ ಔಷಧ ನಿಯಂತ್ರಣಾಧಿಕಾರಿ ಹೊಣೆ ಆಗುತ್ತಾರೆ. ನಿಗಮದಿಂದ ಸರಬರಾಜು ಆಗಿರುವ ಔಷಧವೆಂದಾದರೆ ನಿಗಮದ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿಸಬೇಕು ಅಲ್ಲವೇ? ಎಂದಿಗೆ ನಮ್ಮ ಸರ್ಕಾರ ಕಣ್ತೆರೆಯುವುದು? ಎಂದಿಗೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳು ಲಭ್ಯವಾದಾವು?

ಡಾ. ಗೋಪಾಲ ದಾಬಡೆ, ಧಾರವಾಡ

ಸರ್ಜರಿ– ಭರ್ಜರಿ!

‘ಸಚಿವ ಸಂಪುಟ ಸರ್ಜರಿ’ ಹಾಗೂ ‘ದರ್ಶನ್ ಬೆನ್ನಿನ ಸರ್ಜರಿ’ ಕುರಿತ ಸುದ್ದಿಗಳು ಈಗ ಸದ್ದು ಮಾಡುತ್ತಿವೆ. ಈ ಎರಡೂ ಸರ್ಜರಿಗಳು ಆಗುತ್ತವೆಯೋ ಇಲ್ಲವೋ ಎಂಬುದು ಯಕ್ಷಪ್ರಶ್ನೆ. ಒಟ್ಟಿನಲ್ಲಿ, ಈ ಸರ್ಜರಿಗಳು ಸುದ್ದಿವಾಹಿನಿಗಳಲ್ಲಿ ಮಾತ್ರ ‘ಭರ್ಜರಿ’ ಪ್ರಚಾರ ಪಡೆಯುತ್ತಿವೆ!

ಪಿ.ಜೆ.ರಾಘವೇಂದ್ರ, ಮೈಸೂರು

ಯುವಕರಿಗೆ ಅವಕಾಶ ನೀಡಲಿ

‘ನನ್ನ ಹೆಸರು ಕೇಳಿಬರಲಿ, ಬಾರದಿರಲಿ, ಪಕ್ಷದವರು ಹೇಳಿದರೆ ಸಚಿವ ಸ್ಥಾನ ಬಿಟ್ಟು, ಕೆಪಿಸಿಸಿ ಅಧ್ಯಕ್ಷನಾಗುತ್ತೇನೆ. ನಾನು ಯಾವತ್ತೂ ಅಧಿಕಾರಕ್ಕೆ ಅಂಟಿಕೊಳ್ಳುವವನಲ್ಲ’ ಎಂದು ಸಚಿವ ಕೆ.ಎನ್.ರಾಜಣ್ಣ ಹೇಳಿರುವುದಾಗಿ ವರದಿಯಾಗಿದೆ. ಇದನ್ನು ಬಿಟ್ಟರೆ ಅದನ್ನು ಕೊಡಿ ಎಂದು ಹೇಳಿರುವುದು ಅಧಿಕಾರದ ಮೇಲಿನ ಆಸೆಯೇ ಅಲ್ಲವೆ? ಅಧಿಕಾರಕ್ಕೆ ಅಂಟಿಕೊಳ್ಳುವವನಲ್ಲ ಎಂದಮೇಲೆ ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಯುವಕರಿಗೆ ಅವಕಾಶ ನೀಡಲಿ. ಪಕ್ಷದವರು ಹೇಳಿದರೆ ಎನ್ನುವ ರಾಜಣ್ಣನವರು ಹೇಳಿಸಿಕೊಳ್ಳದೆಯೇ ಸ್ಥಾನ ಬಿಡಲಿ.

‘ಆಡದೇ ಮಾಡುವವನು ರೂಢಿಯೊಳಗುತ್ತಮನು, ಆಡಿ ಮಾಡುವವನು ಮಧ್ಯಮನು, ಆಡಿಯೂ ಮಾಡದವನು ಅಧಮನು’ ಎಂಬ ಸರ್ವಜ್ಞನ ತ್ರಿಪದಿ ನೆನಪಾಗುತ್ತದೆ. ರಾಜಣ್ಣನವರು ಆಡಿದಂತೆ ಮಾಡುವುದರ ಮೂಲಕ ಮಾದರಿ (ಮಧ್ಯಮರಾದರೂ) ಆಗಲಿ. ಅಂತೆಯೇ ಹಲವು ವರ್ಷಗಳ ಕಾಲ ಸಚಿವರಾಗಿ ಕಾರ್ಯನಿರ್ವಹಿಸಿದ ಮತ್ತಿತರರೂ ಇದೇ ಮಾರ್ಗ ಅನುಸರಿಸಿ ಯುವಜನರಿಗೆ ಅವಕಾಶ ನೀಡಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಿರೋಧ ಪಕ್ಷಗಳ ಸದಸ್ಯರತ್ತ ಕ್ಯಾಮೆರಾ ದೃಷ್ಟಿಬೀರದೇಕೆ?

ವಿರೋಧ ಪಕ್ಷಗಳು ಸಂಸತ್ತಿನ ಕಲಾಪಕ್ಕೆ ಅಡ್ಡಿಪಡಿಸುತ್ತಿರುವುದರಿಂದ ಬೊಕ್ಕಸಕ್ಕೆ ಹತ್ತಾರು ಕೋಟಿ ರೂಪಾಯಿ ನಷ್ಟವಾಗಿದೆಯೆಂದೂ ಸದನವು ಸಾರ್ವಜನಿಕ ರಸ್ತೆಯಲ್ಲವೆಂದೂ ಸಾಮಗ ದತ್ತಾತ್ರಿ ಆಕ್ಷೇಪಿಸಿದ್ದಾರೆ (ವಾ.ವಾ., ನ.30). ಸದನದ ಬಾವಿಗಿಳಿದು ಪ್ರತಿಭಟಿಸುವುದು ಇತ್ತೀಚೆಗೆ ರೂಢಿಗೆ ಬಂದ ಪರಿಪಾಟವಲ್ಲ. ಸದನದ ರೀತಿ–ನೀತಿಗಳಿಗೆ ಕಟ್ಟುಬಿದ್ದು ವರ್ತಿಸುವ ಸದಸ್ಯರ ಸಂಖ್ಯೆ ಇಡೀ ಸದನದಲ್ಲಿ ಬೆರಳೆಣಿಕೆಯಷ್ಟು ಇರಬಹುದೇನೊ. ಪ್ರತಿಭಟಿಸುವುದು ಸದಸ್ಯರ ಹಕ್ಕಲ್ಲವೇ? ವಿಷಯ ಅದಲ್ಲ. ಸಂಸದ್ ಟಿ.ವಿ.ಯಲ್ಲಿ ಪ್ರಸಾರವಾಗುವ ಈ ಕಾರ್ಯಕಲಾಪದಲ್ಲಿ, ವಿರೋಧ ಪಕ್ಷದ ಸದಸ್ಯರು ಮೌಲಿಕ ವಿಷಯವನ್ನು ಮುಂದಿಟ್ಟುಕೊಂಡು ಪ್ರತಿಭಟಿಸುವ ಕ್ರಿಯೆಯನ್ನೂ ನೋಡುಗರ ಕಣ್ಣಿಂದ ಮರೆಮಾಚಲಾಗುತ್ತಿದೆ. ಟಿ.ವಿ.ಯ ಕ್ಯಾಮೆರಾದ ಕಣ್ಣು ಸದನದ ಸ್ಪೀಕರ್– ಸಭಾಪತಿ, ಆಡಳಿತ ಪಕ್ಷದ ಸದಸ್ಯ, ಮಂತ್ರಿ ಇಲ್ಲವೇ ಆ ಬೆಂಚ್‌ಗಳ ಕಡೆ ಮಾತ್ರ ನಾಟಿರುತ್ತದೆ. ಹೀಗೆ ವಿರೋಧಪಕ್ಷದವರನ್ನು ಟಿ.ವಿ. ಪರದೆಯಿಂದ ಇಂಚಿಂಚೇ ದೂರ ಸರಿಸುತ್ತಾ ನೇಪಥ್ಯಕ್ಕೆ ದೂಡುತ್ತಾ ಸಾಮಾನ್ಯ ಜನರ ದೃಷ್ಟಿಪಟಲದಿಂದ ಮಾಯ ಮಾಡುತ್ತಾ ಅವರ ಮನದಲ್ಲಿ ಇವರ ಪ್ರಸ್ತುತತೆಯನ್ನೇ ಪ್ರಶ್ನೆ ಮಾಡುವ ಸ್ಥಿತಿ ತಂದೊಡ್ಡುವ ಕ್ರಿಯೆ ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ನಡೆಯುತ್ತಿರುವುದು ಯಾರ ಒಳಿತಿಗಾಗಿ?

ಅದಿರಲಿ, ವಿರೋಧ ಪಕ್ಷಗಳ ಸದಸ್ಯರ ಬೇಡಿಕೆಯಾದರೂ ಏನು? ಅಮೆರಿಕದ ನ್ಯಾಯಾಲಯದಲ್ಲಿ ನಮ್ಮದೇ ದೇಶದ ಬಹುದೊಡ್ಡ ಉದ್ಯಮಿಯೊಬ್ಬರ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ, ಸಾವಿರಾರು ಕೋಟಿ ರೂಪಾಯಿ ಲಂಚದ ಆರೋಪ ಹೊರಿಸಿರುವುದರ ಸತ್ಯಾಸತ್ಯತೆಯ ಬಗ್ಗೆ ಚರ್ಚಿಸಬೇಕೆಂಬ ಆಗ್ರಹ. ಇದು ಸರ್ಕಾರದ ವಿರುದ್ಧದ ತಕರಾರೇನಲ್ಲ. ಸರ್ಕಾರವೇ ಮುಂದೆ ಬಂದು ಚರ್ಚೆಗೆ ಆಸ್ಪದ ಮಾಡಿಕೊಡಬೇಕಿತ್ತು. ಅಂಜುವುದು ಯಾರಿಗಾಗಿ, ಯಾತಕ್ಕಾಗಿ? ಇದು ನಮಗ್ಯಾರಿಗೂ ಅಷ್ಟೊಂದು ಮಹತ್ವದ, ಕಾಡುವ ವಿಷಯವಲ್ಲವೇನೊ. ವಿರೋಧ ಪಕ್ಷದವರ ಪ್ರತಿ ನಡೆಯೂ ನಮಗೇಕೆ ಅನುಮಾನ ಹುಟ್ಟಿಸಬೇಕು? ಇಷ್ಟೊಂದು ಸಿನಿಕರಾಗುವುದು ಎಷ್ಟು ಸರಿ?

ಶ್ರೀಧರ ಗಾರೆಮನೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಆಫ್ರಿಕಾ ದೇಶಗಳ ಮಕ್ಕಳಿಗಿಂತ ಭಾರತದ ಎಸ್‌ಸಿ, ಎಸ್‌ಟಿ ಮಕ್ಕಳ ಬೆಳವಣಿಗೆ ಕುಂಠಿತ ಪ್ರಮಾಣ ಅಧಿಕ: ಅಧ್ಯಯನ

ದುರ್ಬಲ ಜಾತಿಗಳಲ್ಲಿ ಕುಬ್ಜ ಮಕ್ಕಳು ಹೆಚ್ಚು

ಭಾರತದಲ್ಲಿ ಮಕ್ಕಳ ಅಪೌಷ್ಟಿಕತೆ ಪ್ರಮುಖ ಸಮಸ್ಯೆಯಾಗಿದ್ದು, ಮಕ್ಕಳ ಕಡಿಮೆ ಎತ್ತರ, ಕಡಿಮೆ ತೂಕ, ಎತ್ತರಕ್ಕೆ ತಕ್ಕಂತೆ ತೂಕ ಇಲ್ಲದೇ ಇರುವುದು ಅಪೌಷ್ಟಿಕತೆಯ ಮುಖ್ಯ ಮಾನದಂಡಗಳಾಗಿವೆ. ಅಪೌಷ್ಟಿಕತೆಗೆ ವಿವಿಧ ಕಾರಣಗಳಿದ್ದರೂ, ಭಾರತದಲ್ಲಿ ಜಾತಿಗಳಿಗೂ ಮಕ್ಕಳ ಅಪೌಷ್ಟಿಕತೆಗೂ ಸಂಬಂಧ ಇದೆ ಎಂದು ಅಧ್ಯಯನವೊಂದು ಹೇಳಿದೆ. ಬಡದೇಶಗಳಾಗಿರುವ ಸಹರಾ ಮರುಭೂಮಿಗೆ ಹೊಂದಿಕೊಂಡ ಆಫ್ರಿಕಾ ದೇಶಗಳಲ್ಲಿನ ಮಕ್ಕಳ ಬೆಳವಣಿಗೆ ಕುಂಠಿತ ಪ್ರಮಾಣಕ್ಕಿಂತಲೂ ಭಾರತದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಕ್ಕಳ ಬೆಳವಣಿಗೆ ಕುಂಠಿತ ಪ್ರಮಾಣವು ಹೆಚ್ಚಿದೆ ಎನ್ನುವುದು ಅಧ್ಯಯನದ ಪ್ರಮುಖ ಅಂಶ


● ಬಿ.ವಿ.ಶ್ರೀನಾಥ್

ಭಾರತ ಮತ್ತು ಸಹರಾ ಮರುಭೂಮಿಗೆ ಹೊಂದಿಕೊಂಡ ಆಫ್ರಿಕಾ ದೇಶಗಳಲ್ಲಿ ಜಗತ್ತಿನ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ 44ರಷ್ಟು ಮಕ್ಕಳು ಇದ್ದಾರೆ. ಇವೆರಡೂ ಪ್ರದೇಶಗಳಲ್ಲಿಯೇ ಜಗತ್ತಿನ ಶೇ 70ರಷ್ಟು ಬೆಳವಣಿಗೆ ಕುಂಠಿತವಾದ ಮಕ್ಕಳಿದ್ದಾರೆ.

ಮಕ್ಕಳ ಬೆಳವಣಿಗೆ ಕುಂಠಿತ ಆಗಿರುವುದು ಅಪೌಷ್ಟಿಕತೆಯ ಪ್ರಮುಖ ಸೂಚ್ಯಂಕ. ಒಂದು ಮಗು ತನ್ನ ವಯಸ್ಸಿಗೆ ಸಹಜವಾಗಿ ಬೆಳೆಯಬೇಕಾದ ಎತ್ತರಕ್ಕಿಂತ ಕಡಿಮೆ ಇದ್ದರೆ, ಆ ಮಗುವಿನ ಬೆಳವಣಿಗೆ ಕುಂಠಿತಗೊಂಡಿದೆ ಎಂದು ಪರಿಗಣಿಸಲಾಗುತ್ತದೆ. ಅದನ್ನು ಪೌಷ್ಟಿಕತೆಯ ತೀವ್ರ ಕೊರತೆ ಎಂದೂ ಹೇಳಲಾಗುತ್ತದೆ.

ಅಶೋಕ ವಿಶ್ವವಿದ್ಯಾಲಯದ ಅಶ್ವಿನಿ ದೇಶಪಾಂಡೆ ಮತ್ತು ಮಲೇಷ್ಯಾದ ಮೊನಾಶ್ ವಿಶ್ವವಿದ್ಯಾಲಯದ ರಾಜೇಶ್ ರಾಮಚಂದ್ರನ್ ಅವರು ಭಾರತೀಯ ಮಕ್ಕಳ ಎತ್ತರದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಭಾರತದ ಮಕ್ಕಳು ಸಹರಾ ಮರುಭೂಮಿಗೆ ಹೊಂದಿಕೊಂಡ ಆಫ್ರಿಕಾ ದೇಶಗಳ ಮಕ್ಕಳಿಗಿಂತಲೂ ಕಡಿಮೆ ಎತ್ತರ ಏಕೆ ಇರುತ್ತಾರೆ ಎನ್ನುವುದಕ್ಕೆ ಅವರು ಕಂಡುಕೊಂಡಿರುವ ಉತ್ತರ: ಸಾಮಾಜಿಕ ಅಸ್ತಿತ್ವ, ಅದರಲ್ಲೂ ಮುಖ್ಯವಾಗಿ ಜಾತಿಯು ಭಾರತದ ಮಕ್ಕಳಲ್ಲಿ ಅಪೌಷ್ಟಿಕತೆಗೆ ಮುಖ್ಯ ಕಾರಣವಾಗಿದೆ.

ಮಗು ಹುಟ್ಟಿದ ನಂತರದ 1,000 ದಿನಗಳು ಬಹಳ ಮುಖ್ಯವಾಗಿದ್ದು, ಅದನ್ನು 'ಬಂಗಾರದ ಅವಧಿ' ಎಂದು ಕರೆಯಲಾಗುತ್ತದೆ. ಎರಡು ವರ್ಷದ ಹೊತ್ತಿಗೆ ಮಗುವಿನ ಶೇ 80ರಷ್ಟು ಮಿದುಳು ಬೆಳವಣಿಗೆ ಆಗುವುದರೊಂದಿಗೆ, ಅದರ ಆರೋಗ್ಯಕರ ಜೀವನಕ್ಕೆ ಅಡಿಪಾಯ ಹಾಕಬೇಕು. ಈ ಅವಧಿಯಲ್ಲಿ ಆರೋಗ್ಯ ಸೇವೆ, ಪೌಷ್ಟಿಕ ಆಹಾರ, ಆರಂಭದ ಕಲಿಕೆ ಮತ್ತು ಉತ್ತಮ ಬೆಳವಣಿಗೆಗೆ ಪೂರಕವಾದ ವಾತಾವರಣ ಸಿಕ್ಕರೆ, ಮಗುವಿನ ಭವಿಷ್ಯ ಉತ್ತಮವಾಗಿರುತ್ತದೆ.



ಬೆಳವಣಿಗೆ ಕುಂಠಿತ: ಯಾರಲ್ಲಿ, ಎಷ್ಟು?

ಸಹರಾ ಮರುಭೂಮಿಗೆ ಹೊಂದಿಕೊಂಡಿರುವ ಆಫ್ರಿಕಾ ರಾಷ್ಟ್ರಗಳು	33.6%
ಎಸ್‌ಸಿ,ಎಸ್‌ಟಿ, ಒಬಿಸಿ ಹೊರತಾದ ಹಿಂದೂಗಳು	27%
ಪರಿಶಿಷ್ಟ ಜಾತಿ	40%
ಪರಿಶಿಷ್ಟ ಪಂಗಡ	40%
ಒಬಿಸಿ	38%
ಮುಸ್ಲಿಂ	39%
ಇತರ	29%

ಹಲವು ವಿಚಾರಗಳಲ್ಲಿ ಭಾರತ ಮತ್ತು ಸಹರಾ ಮರುಭೂಮಿಗೆ ಹೊಂದಿಕೊಂಡ ಆಫ್ರಿಕಾ ದೇಶಗಳ ನಡುವೆ ಸಾಮ್ಯ ಇದೆ. ಎರಡೂ ದೇಶಗಳಲ್ಲಿ ಮಧ್ಯಮ ವರ್ಗ ಶೀಘ್ರವಾಗಿ ಬೆಳೆಯುತ್ತಿದ್ದು, ಯುವಕರ ಸಂಖ್ಯೆ ಹೆಚ್ಚಿದೆ. ಎರಡರಲ್ಲಿಯೂ ಕಾರ್ಮಿಕರ ಸಂಖ್ಯೆ ಹೆಚ್ಚಿದೆ. ಜತೆಗೆ ಬಡತನ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸವಾಲುಗಳೂ ಎರಡೂ ದೇಶಗಳಲ್ಲಿ ಸಮನಾಗಿವೆ. ಜಗತ್ತಿನಲ್ಲಿರುವ ಬಡವರ ಪೈಕಿ ಶೇ 85 ಮಂದಿ ಸಹರಾ ಮರುಭೂಮಿಗೆ ಹೊಂದಿಕೊಂಡ ಆಫ್ರಿಕಾ ದೇಶಗಳು ಮತ್ತು ದಕ್ಷಿಣ ಏಷ್ಯಾದಲ್ಲಿಯೇ (ಭಾರತವನ್ನೂ ಒಳಗೊಂಡಂತೆ) ಇದ್ದಾರೆ ಎಂದು ವಿಶ್ವ ಬ್ಯಾಂಕ್ 2021ರಲ್ಲಿ ಹೇಳಿತ್ತು.

ಸಹರಾ ಮರುಭೂಮಿಗೆ ಹೊಂದಿಕೊಂಡ ಜಿಂಬಾಬ್ವೆ, ಉಗಾಂಡ, ನೈಜೀರಿಯಾ, ರುವಾಂಡಾ, ಮಡಗಾಸ್ಕರ್, ಬುರುಂಡಿ, ಲೈಬೀರಿಯಾ ಮುಂತಾದ 19 ಆಫ್ರಿಕಾ ದೇಶಗಳು ಮತ್ತು ಭಾರತದ ನಡುವಿನ ಇತ್ತೀಚಿನ ಅಂಕಿಅಂಶಗಳನ್ನು ಹೋಲಿಸಿದರೆ, ಹಲವು ಆತಂಕಕಾರಿ ವಿಚಾರಗಳು ತಿಳಿದುಬರುತ್ತವೆ ಎಂದು ವರದಿ ಉಲ್ಲೇಖಿಸಿದೆ. ಅಪೌಷ್ಟಿಕತೆಯ ವಿರುದ್ಧ ಹೋರಾಟದಲ್ಲಿ ಇತ್ತೀಚಿನ ವರ್ಷಗಳಲ್ಲಿ ಎರಡೂ ದೇಶಗಳು ದಾಪುಗಾಲಿಡುತ್ತಿದ್ದರೂ ಸಹರಾ ಮರುಭೂಮಿಗೆ ಹೊಂದಿಕೊಂಡಿರುವ 19 ರಾಷ್ಟ್ರಗಳಲ್ಲಿ ಮಕ್ಕಳ ಬೆಳವಣಿಗೆ ಕುಂಠಿತ ಪ್ರಮಾಣವು ಶೇ 33.6 ಇದ್ದರೆ, ಭಾರತದ ಮಕ್ಕಳ ಬೆಳವಣಿಗೆ ಕುಂಠಿತ ಪ್ರಮಾಣವು ಶೇ 35.7 ಇದೆ.

ಭಾರತದಲ್ಲಿರುವ ಐದು ವರ್ಷದೊಳಗಿನ 13.75 ಕೋಟಿ ಮಕ್ಕಳ ಪೈಕಿ ಶೇ 35.7ರಷ್ಟು ಮಕ್ಕಳ ಬೆಳವಣಿಗೆ ಕುಂಠಿತಗೊಂಡಿದ್ದು, ಮೂರನೇ ಒಂದರಷ್ಟು ಮಕ್ಕಳು ನಿಗದಿತ ತೂಕಕ್ಕಿಂತ ಕಡಿಮೆ ಇದ್ದಾರೆ. ಜಾಗತಿಕ ಮಟ್ಟದಲ್ಲಿ ಬೆಳವಣಿಗೆ ಕುಂಠಿತಗೊಂಡಿರುವ ಮಕ್ಕಳ ಸಂಖ್ಯೆ ಶೇ 22.

ಭಾರತದ ವಿವಿಧ ಸಾಮಾಜಿಕ ಹಿನ್ನೆಲೆಯ ಆರು ಗುಂಪುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅವರ ಪೈಕಿ ಆದಿವಾಸಿಗಳು ಮತ್ತು ದಲಿತರೂ ಸೇರಿದ್ದಾರೆ. ಎಸ್‌ಸಿ, ಎಸ್‌ಟಿ ಸಮುದಾಯಗಳ ಐದು ವರ್ಷದ ಒಳಗಿನ ಮಕ್ಕಳ ಪೈಕಿ ಬೆಳವಣಿಗೆ ಕುಂಠಿತ ಮಕ್ಕಳ ಪ್ರಮಾಣ ಶೇ 40ರಷ್ಟಿದೆ. ಒಬಿಸಿ, ಮುಸ್ಲಿಂ ಮಕ್ಕಳ ಬೆಳವಣಿಗೆ ಕುಂಠಿತ ಪ್ರಮಾಣವೂ ಸಹರಾಗೆ ಹೊಂದಿಕೊಂಡ ಆಫ್ರಿಕಾ ದೇಶಗಳ ಮಕ್ಕಳಿಗಿಂತ ಹೆಚ್ಚು ಇದೆ. ಭಾರತದ ಉನ್ನತ ಜಾತಿಯ ಇದೇ ವಯಸ್ಸಿನ ಮಕ್ಕಳು ಶೇ 27ರಷ್ಟು ಕುಂಠಿತ ಬೆಳವಣಿಗೆ ಹೊಂದಿದ್ದಾರೆ. ಇದು ಸಹರಾಗೆ ಹೊಂದಿಕೊಂಡಿರುವ ಆಫ್ರಿಕಾ ದೇಶಗಳ ಮಕ್ಕಳಿಗಿಂತ ಕಡಿಮೆ ಪ್ರಮಾಣವಾಗಿದೆ. ದೇಶದ ಅಂಚಿನ ಸಮುದಾಯಗಳ ಮಕ್ಕಳು ಪ್ರಬಲ ಜಾತಿಗಳ ಮಕ್ಕಳಿಗಿಂತ ಶೇ 20ರಷ್ಟು ಹೆಚ್ಚು ಕುಂಠಿತ ಬೆಳವಣಿಗೆಯನ್ನು ಅನುಭವಿಸುವ ಸಾಧ್ಯತೆ ಇರುತ್ತದೆ ಎಂದು ಅಧ್ಯಯನ ಹೇಳಿದೆ.

ಮಗುವಿನ ಬೆಳವಣಿಗೆಗೆ ಪೂರಕವಲ್ಲದ ಅನಾರೋಗ್ಯಕರ ವಾತಾವರಣ ಮತ್ತು ಕಡಿಮೆ ಕ್ಯಾಲೊರಿಗಳ ಲಭ್ಯತೆ ಭಾರತದಲ್ಲಿ ಮಕ್ಕಳ ಅಪೌಷ್ಟಿಕತೆಗೆ ಪ್ರಮುಖ ಕಾರಣವಾಗಿವೆ. ಎಷ್ಟನೇ ಮಗು, ನೈರ್ಮಲ್ಯ ಪದ್ಧತಿಗಳು, ತಾಯಿಯ ಎತ್ತರ, ಶಿಕ್ಷಣ, ರಕ್ತಹೀನತೆ ಮತ್ತು ಕುಟುಂಬದ ಸಾಮಾಜಿಕ ಆರ್ಥಿಕ ಸ್ಥಿತಿಗಳ ಪರಿಗಣನೆಯ ನಂತರವೂ ಈ ಅಧ್ಯಯನದ ಫಲಿತಾಂಶವು ಮಹತ್ವದ್ದೆನಿಸುತ್ತದೆ.

ಪ್ರಬಲ ಜಾತಿಯ ಮಕ್ಕಳು ಉತ್ತಮ ಪೌಷ್ಟಿಕ ಆಹಾರ ಮತ್ತು ಆರೋಗ್ಯ ಸೇವೆ ಪಡೆಯುತ್ತಾರೆ. ಹಾಗಾಗಿ ಅವರ ಬೆಳವಣಿಗೆ ವಯಸ್ಸಿಗೆ ತಕ್ಕಂತೆ ಇರುವುದರಲ್ಲಿ ಆಶ್ಚರ್ಯಕರವಾದುದೇನಿಲ್ಲ ಎಂದು ವರದಿ ಅಭಿಪ್ರಾಯಪಟ್ಟಿದೆ. ಹೀಗಾಗಿ ಭಾರತದಲ್ಲಿ ಪೌಷ್ಟಿಕತೆಗೆ ಸಂಬಂಧಿಸಿದ ನೀತಿ ನಿಯಮಗಳನ್ನು ರೂಪಿಸುವಾಗ ಜಾತಿ, ವರ್ಗಗಳನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕಾದ ಅಗತ್ಯವಿದೆ ಎಂದು ವರದಿ ಪ್ರತಿಪಾದಿಸಿದೆ.


13.75 ಕೋಟಿ
ಭಾರತದಲ್ಲಿರುವ 5 ವರ್ಷದೊಳಗಿನ ಮಕ್ಕಳ ಸಂಖ್ಯೆ

35.7%
ದೇಶದಲ್ಲಿ ಕುಂಠಿತ ಬೆಳವಣಿಗೆ ಹೊಂದಿರುವ ಮಕ್ಕಳ ಪ್ರಮಾಣ

33.6%
ಸಹರಾ ಮರುಭೂಮಿಗೆ ಹೊಂದಿಕೊಂಡ ಆಫ್ರಿಕಾದ 19 ದೇಶಗಳಲ್ಲಿ ಕುಂಠಿತ ಬೆಳವಣಿಗೆ ಸಮಸ್ಯೆ ಎದುರಿಸುತ್ತಿರುವ ಮಕ್ಕಳ ಪ್ರಮಾಣ

22%
ಜಾಗತಿಕವಾಗಿ ಬೆಳವಣಿಗೆ ಕುಂಠಿತವಾಗಿರುವ ಮಕ್ಕಳ ಪ್ರಮಾಣ

5 ವರ್ಷದೊಳಗಿನ ಮಕ್ಕಳು: ಯಾವ ಸಮುದಾಯದಲ್ಲಿ ಎಷ್ಟು?



ಕೇಂದ್ರದ ಅಂಕಿ ಅಂಶ ಹೇಳುವುದೇನು?

ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಂಕಿ ಅಂಶಗಳು ಕೂಡ ಈ ಅಧ್ಯಯನದಲ್ಲಿ ಕಂಡುಕೊಂಡಿರುವ ವಿಚಾರಗಳನ್ನು ಪುಷ್ಟೀಕರಿಸುತ್ತವೆ.

ಮಕ್ಕಳ ಅಪೌಷ್ಟಿಕತೆ, ಕುಂಠಿತ ಬೆಳವಣಿಗೆಯ ಬಗ್ಗೆ ಲೋಕಸಭೆಯ ಈ ವರ್ಷದ ಮುಂಗಾರು ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಅನ್ನಪೂರ್ಣ ದೇವಿ ಅವರು 2019–21ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) ವಿವರಗಳ ಆಧಾರದಲ್ಲಿ ಉತ್ತರ ನೀಡಿದ್ದಾರೆ. ಅವರ ಪ್ರಕಾರ, ದೇಶದಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಕೆಳಗಿನ ಶೇ 35.5ರಷ್ಟು ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ. ಶೇ 32.1ರಷ್ಟು ಮಕ್ಕಳು ನಿಗದಿತ ಮಿತಿಗಿಂತ ಕಡಿಮೆ ತೂಕ ಹೊಂದಿದ್ದಾರೆ. ಶೇ 19.3ರಷ್ಟು ಮಕ್ಕಳು ಎತ್ತರಕ್ಕೆ ಸಮವಾಗಿ ತೂಕ ಹೊಂದಿಲ್ಲ.



ಕರ್ನಾಟಕದಲ್ಲಿ

ರಾಜ್ಯದಲ್ಲಿ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ 35.86ರಷ್ಟು ಮಕ್ಕಳು ಕುಂಠಿತ ಬೆಳವಣಿಗೆಯ ಸಮಸ್ಯೆ ಎದುರಿಸುತ್ತಿದ್ದಾರೆ. ಶೇ 17.88ರಷ್ಟು ಮಕ್ಕಳು ನಿಗದಿತ ಮಿತಿಗಿಂತ ಕಡಿಮೆ ತೂಕ ಹೊಂದಿದ್ದಾರೆ. ಶೇ 3.9ರಷ್ಟು ಮಕ್ಕಳು (0–5 ವರ್ಷದೊಳಗಿನ) ಎತ್ತರಕ್ಕೆ ಸಮನಾದ ತೂಕ ಹೊಂದಿಲ್ಲ.

1992–93ರಲ್ಲಿ ನಡೆದಿದ್ದ ಮೊದಲ ಎನ್‌ಎಫ್‌ಎಚ್‌ಎಸ್ ಪ್ರಕಾರ, ಬೆಳವಣಿಗೆ ಕುಂಠಿತಗೊಂಡಿರುವ ನಾಲ್ಕು ವರ್ಷಕ್ಕಿಂತ ಕಡಿಮೆ ಮಕ್ಕಳ ಪ್ರಮಾಣ ಶೇ 52ರಷ್ಟಿತ್ತು. ಶೇ 53.4ರಷ್ಟು ಮಕ್ಕಳ ತೂಕ ನಿಗದಿತ ಮಿತಿಗಿಂತ ಕಡಿಮೆ ಇತ್ತು. ಶೇ 17.5ರಷ್ಟು ಮಕ್ಕಳು ತಮ್ಮ ಎತ್ತರಕ್ಕೆ ಸಮನಾದ ತೂಕ ಹೊಂದಿರಲಿಲ್ಲ.

ರಾಜ್ಯಗಳಲ್ಲಿ: ದೇಶದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ, ಬೆಳವಣಿಗೆ ಕುಂಠಿತಗೊಂಡಿರುವ ಮಕ್ಕಳ ಪ್ರಮಾಣ (6 ವರ್ಷದೊಳಗಿನ) ಲಕ್ಷದ್ವೀಪದಲ್ಲಿ ಅತಿ ಹೆಚ್ಚಿದೆ (ಶೇ 46.29). ಉತ್ತರ ಪ್ರದೇಶ ಎರಡನೇ ಸ್ಥಾನದಲ್ಲಿದ್ದರೆ (ಶೇ 45.13), ಮಹಾರಾಷ್ಟ್ರ (ಶೇ 42.54) ಮೂರನೇ ಸ್ಥಾನದಲ್ಲಿದೆ. ಗೋವಾ ರಾಜ್ಯದಲ್ಲಿ ಅತಿ ಕಡಿಮೆ ಅಂದರೆ ಶೇ 5.91ರಷ್ಟು ಮಕ್ಕಳು ಮಾತ್ರ ಕುಂಠಿತ ಬೆಳವಣಿಗೆ ಸಮಸ್ಯೆ ಎದುರಿಸುತ್ತಿದ್ದಾರೆ. ಮಣಿಪುರದಲ್ಲಿ ಈ ಪ್ರಮಾಣ ಶೇ 11.65 ರಷ್ಟಿದೆ. ಸಿಕ್ಕಿಂ, ಜಮ್ಮು–ಕಾಶ್ಮೀರ ಹಾಗೂ ಲಡಾಖ್‌ನಲ್ಲಿ ಕ್ರಮವಾಗಿ ಶೇ 12.04, ಶೇ 12.41 ಮತ್ತು 12.62 ರಷ್ಟಿದೆ.

ಆಧಾರ: 'ದಿ ಹಿಡನ್ ಡಿವೈಡ್': ಎ ನೋಟ್ ಆನ್ ದಿ ಸಿಗ್ನಿಫಿಕೆನ್ಸ್ ಆಫ್ ವಿದಿನ್–ಇಂಡಿಯಾ ಡಿಸ್ಪ್ಯಾರಿಟೀಸ್' ವರದಿ, ಲೋಕಸಭೆಯಲ್ಲಿ ಸಚಿವರ ಉತ್ತರ

ಸಿನಿ ಬಿಟ್ಸ್

'ದಾಸರಹಳ್ಳಿ'ಯಲ್ಲಿ ಧರ್ಮ ಕೀರ್ತಿರಾಜ್

ನಟ ಧರ್ಮ ಕೀರ್ತಿರಾಜ್ ಮುಖ್ಯ ಭೂಮಿಕೆಯಲ್ಲಿರುವ 'ದಾಸರಹಳ್ಳಿ' ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ. ಎಂ.ಆರ್.ಶ್ರೀನಿವಾಸ್ ಆ್ಯಕ್ಷನ್ ಕಟ್ ಹೇಳಿದ್ದು, ಪಿ.ಉಮೇಶ ನಿರ್ಮಾಣ ಮಾಡಿದ್ದಾರೆ.

'ಕುಡಿತದ ವಿರುದ್ಧ ಹೋರಾಡುವ ಕಥೆ. ಕುಡಿತದಿಂದ ಅದೆಷ್ಟೋ ಸಂಸಾರಗಳು ಬೀದಿಗೆ ಬಿದ್ದಿವೆ. ಕುಡಿತಕ್ಕೊಳಗಾದ ಗಂಡ, ಮಗನಿಂದ ತಾಯಿ ನರಕ ಅನುಭವಿಸುತ್ತಿರುತ್ತಾಳೆ. ಕುಡಿತವೇ ಜೀವನ ಎಂದು ನಂಬಿರುವವರಿಗೆ ಇದರ ಅರಿವಾಗಬೇಕು. ಆಗ ಮಾತ್ರ ಒಂದಷ್ಟು ಬದಲಾವಣೆ ಸಾಧ್ಯ. ಬದುಕು ಸುಂದರವಾಗಲು ಸಾಧ್ಯ ಎಂಬ ಸಂದೇಶವನ್ನು ಸಿನಿಮಾ ಹೊಂದಿದೆ. ಸೆನ್ಸಾರ್ ಮುಗಿದಿದ್ದು ಶೀಘ್ರದಲ್ಲಿ ಬಿಡುಗಡೆ ದಿನಾಂಕ ಘೋಷಿಸುತ್ತೇವೆ' ಎಂದಿದ್ದಾರೆ ನಿರ್ದೇಶಕರು.

ಬೆಂಗಳೂರು ಸುತ್ತಮುತ್ತ ಮತ್ತು ಶಿವಮೊಗ್ಗದಲ್ಲಿ ಚಿತ್ರೀಕರಣಗೊಂಡಿದೆ. ನೇಹಾ, ಉಮೇಶ್ ರಾಜ್, ಥ್ರಿಲ್ಲರ್ ಮಂಜು, ಕೌರವ ವೆಂಕಟೇಶ್, ಹೊನ್ನವಳ್ಳಿ ಕೃಷ್ಣ, ಬಿರಾದರ್ ಸೇರಿದಂತೆ ಸಾಕಷ್ಟು ಹಿರಿಯ ಕಲಾವಿದರು ಚಿತ್ರದಲ್ಲಿದ್ದಾರೆ. ಎಂ.ಎಸ್. ತ್ಯಾಗರಾಜ ಅವರ ಸಂಗೀತ, ಸಿ.ನಾರಾಯಣ್ ಛಾಯಾಚಿತ್ರಗ್ರಹಣ, ಬಾಲು ಸಂಕಲನ ಚಿತ್ರಕ್ಕಿದೆ.



ನೇಹಾ, ಧರ್ಮ ಕೀರ್ತಿರಾಜ್



ಚಿತ್ರತಂಡ

ನೈಜ ಘಟನೆಯ 'ಆರ್‌ಪಿ'

ಬಹುತೇಕ ಹೊಸಬರಿಂದಲೇ ಕೂಡಿರುವ 'ಆರ್‌ಪಿ' ಚಿತ್ರದ ಟೈಟಲ್ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಬ್ಲಾಕ್ ಅಂಡ್ ವೈಟ್' ಎಂಬ ಅಡಿಬರಹ ಈ ಚಿತ್ರಕ್ಕಿದೆ. ಕಬ್ಬಾಳಮ್ಮ ಕ್ರಿಯೇಶನ್ ಅಡಿಯಲ್ಲಿ ಯುವರಾಜ್.ಎಸ್ ಸಿನಿಮಾವನ್ನು ನಿರ್ಮಿಸಿ, ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

'ಗೆಳೆಯ ರಾಘವೇಂದ್ರ ಪ್ರಸಾದ್ ಅವರ ಜೀವನದಲ್ಲಿ ನಡೆದ, ನಡೆಯುತ್ತಿರುವ ಒಂದಷ್ಟು ಘಟನೆಗಳಿಂದ ಚಿತ್ರಕಥೆ ಸಿದ್ಧಪಡಿಸಲಾಗಿದೆ. ಅದಕ್ಕಾಗಿ ಆರ್‌ಪಿ ಎಂಬುದಾಗಿ ಶೀರ್ಷಿಕೆ ಇಡಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಪ್ರಕೃತಿ ನಾಶವಾಗುತ್ತಿದ್ದರೂ ಅದನ್ನು ನಾವು ಮರೆಯುತ್ತಿದ್ದೇವೆ. ಆ ಬಗ್ಗೆ ಅರಿವು ಮೂಡಿಸುವ ಚಿತ್ರವಿದು' ಎಂದರು ನಿರ್ದೇಶಕರು.

ಕನ್ನಡ ಸೇರಿದಂತೆ ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳ ಭಾಷೆಗಳಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದೆ. ತಾರಾಗಣ, ತಂತ್ರಜ್ಞರ ಆಯ್ಕೆ ಪ್ರಕ್ರಿಯೆ ಶುರುವಾಗಿದ್ದು ಮುಂದಿನ ದಿನಗಳಲ್ಲಿ ಮಾಹಿತಿ ನೀಡುವುದಾಗಿ ಚಿತ್ರತಂಡ ಹೇಳಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಉದ್ಯಮಿ ಗೌತಮ್ ಅದಾನಿ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಅಮೆರಿಕಕ್ಕೆ ಭೇಟಿ ನೀಡುವುದನ್ನು ನಿರ್ಬಂಧಿಸಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೆನಡಾಕ್ಕೆ ಪ್ರಯಾಣ ಮಾಡುವುದಕ್ಕೆ ಅಲ್ಲಿನ ಸರ್ಕಾರ ನಿರ್ಬಂಧ ವಿಧಿಸಿದೆ ಎಂದು ಹೇಳಿಕೊಳ್ಳುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ, ಇವೆರಡೂ ಸುಳ್ಳು ಸುದ್ದಿ.

ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳನ್ನು ಹಾಕಿ ಹುಡುಕಾಟ ನಡೆಸಿದಾಗ ಈ ಪೋಸ್ಟ್‌ಗಳನ್ನು ಹಲವರು ಹಂಚಿಕೊಂಡಿರುವುದು ಕಂಡು ಬಂತು. 'ಮೋದಿಯವರ ಆಪ್ತ ಅದಾನಿ, ಅಮಿತ್ ಶಾ ಮತ್ತು ಅಜಿತ್ ಡೊಭಾಲ್ ಅವರು ಅಮೆರಿಕ ಅಥವಾ ಕೆನಡಾಕ್ಕೆ ಪ್ರಯಾಣಿಸುವಂತಿಲ್ಲ' ಎಂಬ ತಲೆಬರಹದಲ್ಲಿ ಇಂಡಿಯನ್ ಹೆರಾಲ್ಡ್ ಎಂಬ ಮಾಧ್ಯಮದಲ್ಲಿ ಬಂದಿರುವ ವರದಿಯೂ ಸಿಕ್ಕಿತು. ಆ ವರದಿಯಲ್ಲಿ ಅಧಿಕಾರಿಗಳ ಪ್ರತಿಕ್ರಿಯೆ ಇರಲಿಲ್ಲ. ಅಮೆರಿಕದ ವಿದೇಶಾಂಗ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಿ ಪರಿಶೀಲಿಸಿದಾಗ ಅದರಲ್ಲಿ ಭೇಟಿ ನಿರ್ಬಂಧದ ಬಗ್ಗೆ ಯಾವುದೇ ಮಾಹಿತಿ ಸಿಗಲಿಲ್ಲ. ಈ ಬಗ್ಗೆ ಅಮೆರಿಕ ಮತ್ತು ಕೆನಡಾ ಸರ್ಕಾರಗಳಾಗಲಿ ಅಧಿಕೃತವಾಗಿ ಯಾವುದೇ ಹೇಳಿಕೆಯನ್ನೂ ನೀಡಿಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ನುಡಿ ಬೆಳಗು

ಸಂತೋಷವಾಗಿ ಬದುಕಬೇಕು!



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

78

ಜಪಾನ್ ಭಾಷೆಯ ಪುಸ್ತಕ ಒಂದೊರಳಗೆ ಒಂದು ಮಾತು ಬರತೈತಿ. ಮನುಷ್ಯ ಆರೋಗ್ಯವಾಗಿ, ಸಂತೋಷವಾಗಿ ಸುದೀರ್ಘವಾಗಿ ಹ್ಯಾಂಗ ಬದುಕಬೇಕು ಅಂತ. ಆ ಪುಸ್ತಕದೊಳಗೆ ಒಂದು ಘಟನೆ ಬರ್ತದ. ಒಬ್ಬ ಲೇಖಕ ದೇವರಿಗೆ ಪ್ರಾರ್ಥನೆ ಮಾಡ್ತಾನ. 'ದೇವರೇ ಈ ಜಗತ್ತಲ್ಲಿ ಯಾವುದನ್ನು ಬದಲಾವಣೆ ಮಾಡೋಕ್ಕೆ ಆಗೋದಿಲ್ಲ, ಅದನ್ನು ಬದಲು ಮಾಡಲು ಆಗದು ಎಂದು ಒಪ್ಪಿಕೊಳ್ಳುವ ಸ್ವಚ್ಛ ಮನಸ್ಸು ಕೊಡು. ಮತ್ತು ಯಾವುದನ್ನು ಬದಲಾವಣೆ ಮಾಡಲು ಸಾಧ್ಯ ಐತಲ್ಲ, ಅದನ್ನು ಮಾಡುವ ಸಾಮರ್ಥ್ಯ ಕೊಡು' ಎಂದು. ನಾವು ಅಂದುಕೊಂಡಂತೆ ಏನೂ ಆಗೋದಿಲ್ಲ. ಹೊಂದಿಕೊಂಡು ಹೋಗೋದನ್ನು ಕಲಿಯಬೇಕು ಮನುಷ್ಯ.

ರಾಮಾಯಣದಲ್ಲಿ ಏನಾಯ್ತು ನೋಡಿ. ವಸಿಷ್ಠ ಮಹರ್ಷಿಗಳು ರಾಮನ ಪಟ್ಟಾಭಿಷೇಕದ ಮುಹೂರ್ತ ನಿಗದಿ ಮಾಡ್ತಾರ. ರಾಮನಿಗೂ ಅಯೋಧ್ಯೆಯ ರಾಜ ಆಗಬೇಕು ಅಂತ ಇತ್ತು. ಪ್ರಜೆಗಳಿಗೂ ಅದೇ ಭಾವನೆ ಇತ್ತು. ದಶರಥ ಮಹಾರಾಜನಿಗೂ ರಾಮನನ್ನು ರಾಜನನ್ನಾಗಿ ಮಾಡಬೇಕು ಅಂತ ಇತ್ತು. ರಾಮನ ಪತ್ನಿ ಸೀತೆಗೂ ಅದೇ ಆಸೆ. ಆದರೆ ಅದೇ ದಿವಸ ರಾಮ ವನವಾಸಕ್ಕೆ ಹೋಗಬೇಕಾಯಿತು. ಯಾರ ಆಸೆಯೂ ಪೂರೈಸಲಿಲ್ಲ. 14 ವರ್ಷ ಅಯೋಧ್ಯೆಯನ್ನು ಆಳಿದ್ದು ರಾಮ ಅಲ್ಲ, ಭರತನೂ ಅಲ್ಲ, ಎರಡು ಕಟ್ಟಿಗೆಯ ಪಾದುಕೆಗಳು ಅಯೋಧ್ಯೆಯನ್ನು ಆಳಿದವಲ್ಲ! ನಾವು ಅಂದುಕೊಂಡಿದ್ದು ಆಗೋದಿಲ್ಲ ಎನ್ನುವುದಕ್ಕೆ ಇದು ಉದಾಹರಣೆ. ಜಗತ್ತು ಹೇಗೆ ಇರುತ್ತದೋ ಅದನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು. ನಮಗೆ ಬೇಕಾದ ಹಾಂಗ ಜಗತ್ತು ಇರೋದಿಲ್ಲ ಎನ್ನುವುದನ್ನು ತಿಳಕೋಬೇಕು.

ಕೆಲವರು ಯಾವಾಗಲೂ ದೇವರೇ ಮೇಲಕ್ಕೆ ಕರಕೊ ಕರಕೊ ಅಂತಿರ್ತಾರ. ಅವರು ಮೇಲೆ ಹೋಗಿಯಾದರೂ ಏನ್ ಮಾಡೋರು? ದೇವರು ಏನು ಆಯುಷ್ಯ ಕೊಟ್ಟಾನ ಅದನ್ನು ಅನುಭವಿಸಬೇಕು. ಚಂದ ಬದುಕಬೇಕು. ಸಂತೋಷವಾಗಿರಬೇಕು. ದೇವರಿಗೆ ನಮ್ಮದು ಒಂದೇ ಬೇಡಿಕೆ. ಒಟ್ಟ ದುಃಖ ಬರಬಾರದು, ಸುಖ ಇರಬೇಕು. ಸುಖ ಅಂದರೆ ಏನು? ಏನು ಮಾಡದಂಗೆ ಸುಮ್ಮನೆ ಕುಳಿತಿರಬೇಕು ಅನಕೋತೀವಿ. ಅದು ಆಗ್ತದೇನು? ಜೀವನ ಅಂದ ಮೇಲೆ ಕಷ್ಟ ಸುಖ ಎಲ್ಲ ಬಂದೇ ಬರ್ತಾವ.

ಒಂದು ಬಳ್ಳಿಯೊಳಗೆ ಹೂವು ಅರಳಿತ್ತು. ಒಬ್ಬ ಮನುಷ್ಯ ಬಂದು ಹೂವಿಗೆ 'ನಿನ್ನ ಆಯುಷ್ಯ ಎಷ್ಟು? ಬೆಳಿಗ್ಗೆ ಅರಳಿ ಸಾಯಂಕಾಲ ಬಾಡಿ ಹೋಗ್ತಿ. ಆದರೂ ನೀನು ನಗತೀಯಲ್ಲ. ದೇವರು ನನಗೆ ನೂರು ವರ್ಷ ಆಯುಷ್ಯ ಕೊಟ್ಟಾನ ಆದರೂ ನಗೋದಿಲ್ಲ. ನೀನು ಒಂದೇ ದಿನ ಆಯುಷ್ಯ ಕೊಟ್ಟರೂ ನಗತಾ ನಗತಾ ಇರತೀಯಲ್ಲ ಹ್ಯಾಂಗ? ಸೂರ್ಯೋದಯದಲ್ಲಿ ಅರಳಿ ಸೂರ್ಯಾಸ್ತದಲ್ಲಿ ಮಣ್ಣಲ್ಲಿ ಮಣ್ಣಾಗಿ ಹೋಗುವ ನಿನ್ನ ಮುಖದಲ್ಲಿ ಇರುವ ಕಳೆ ನನ್ನ ಮುಖದಲ್ಲಿ ಯಾಕೆ ಇಲ್ಲ' ಎಂದು ಕೇಳಿದ.

ಅದಕ್ಕೆ ಹೂವು, 'ನಾನು ಯಾಕ ನಗ್ತಾ ಇರ್ತೀನಿ ಅಂದ್ರೆ, ನನಗೆ ಗೊತ್ತು ನನ್ನ ಆಯುಷ್ಯ ಒಂದೇ ದಿನ ಅಂತ. ಸಾಯಂಕಾಲ ನಾನು ಬಾಡಿ ನೆಲಕ್ಕೆ ಬಿದ್ದು ಮಣ್ಣಲ್ಲಿ ಮಣ್ಣಾಗಿ ಹೋಗಿ ರಸವಾಗಿ ಇದೇ ಬಳ್ಳಿಯ ಬೇರುಗಳನ್ನು ಸೇರಿ, ಕಾಂಡ ಸೇರಿ ಮೊಗ್ಗಾಗಿ ಮತ್ತೆ ಹೂವಾಗುತ್ತೇನೆ ಎಂಬ ವಿಶ್ವಾಸ ಇರೋದರಿಂದ ನಗತಾ ಇರ್ತೇನೆ' ಎಂದಿತು. ಹಾಗೆ, ಮನುಷ್ಯನೂ ವಿಶ್ವಾಸದಿಂದ ಇರಬೇಕು. ಸಂತೋಷವಾಗಿ ಬದುಕಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಡಿಸೆಂಬರ್ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶಿಶಿರ ಋತು ತಿಥಿ: ಮಾರ್ಗಶಿರ ಶುಕ್ಲ ಪ್ರತಿಪದ್ ಗಂ. 12-44 ನಕ್ಷತ್ರ: ಜ್ಯೇಷ್ಠ ಗಂ. 15-46 ಯೋಗ: ಧೃತಿ ಗಂ. 16-01 ಕರಣ: ಬವ ಗಂ. 12-44, ವೃಶ್ಚಿಕ ಮಾಸದ 16 ನೇ ದಿನ, ಮಳೆನಕ್ಷತ್ರ: ಅನುರಾಧ 4.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-42 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 28 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 5, 11

ಮೇಷ: ಸಾಲ ಮರುಪಾವತಿ ಮಾಡುವ ವಿಚಾರದಿಂದಾಗಿ ತಲೆಬಿಸಿಯ ವಾತಾವರಣ ಇರುವುದು. ಪತ್ನಿಯ ಸಹಾಯ ಅತ್ಯಮೂಲ್ಯವಾಗಿ ಪರಿಣಮಿಸಲಿದೆ. ವೃತ್ತಿಯಲ್ಲಿ ಸ್ವ ಸಾಮರ್ಥ್ಯದಿಂದ ಕೆಲಸ ಗಿಟ್ಟಿಸಿಕೊಳ್ಳುವಿರಿ.

ವೃಷಭ: ಕಚೇರಿಯಲ್ಲಿ ಬುದ್ಧಿವಂತಿಕೆಯಿಂದ ಕೂಡಿರುವ ಕಾರ್ಯವೈಖರಿ ನಿಮ್ಮದಾಗಿರುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ಸಮಂಜಸವಾದ ನಿರ್ಧಾರ ಕೈಗೊಳ್ಳುವಿರಿ. ಮಕ್ಕಳಿಗಾಗಿ ವಸ್ತುಗಳನ್ನು ಖರೀದಿಸುವಿರಿ.

ಮಿಥುನ: ಯೋಗ ಅಥವಾ ಧ್ಯಾನದ ಮಾರ್ಗದಲ್ಲಿ ಸಾಧನೆ ಮಾಡುತ್ತಿರುವವರಿಗೆ ಅನೇಕ ಅನುಭೂತಿಗಳು ಉಂಟಾಗುತ್ತವೆ. ಸಂತೋಷಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಅವಕಾಶ ಸಿಗುವುದು. ಷೇರು ಬಂಡವಾಳ ಹೆಚ್ಚಿಸಿಕೊಳ್ಳುವಿರಿ.

ಕರ್ಕಾಟಕ: ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನವಾದ ಪ್ರಯೋಗಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ಮಗನಿಗೆ ವಿದ್ಯಾಮಾರ್ಗ ತೋರಿಸುವಿರಿ.

ಸಿಂಹ: ನಿಮ್ಮ ಮಾತನ್ನು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸುವುದರಿಂದ ವಾಗ್ವೈಖರಿ ಎಲ್ಲರನ್ನು ಹಿಡಿದಿಡುತ್ತದೆ. ತಂದೆಯಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ.

ಕನ್ಯಾ: ಮನೆಯಲ್ಲಿನ ಹಿರಿಯ ನಾಗರಿಕರ ವಿಚಾರವಾಗಿ ನಿಗಾವಹಿಸುವುದು ಅಗತ್ಯವಾಗುವುದು. ಹಲವು ದಿನಗಳಿಂದ ಬರಬೇಕಾಗಿರುವ ಹಣ ಸಂಜೆಯ ವೇಳೆಗೆ ಕೈ ಸೇರುವುದು.

ತುಲಾ: ಆಸಕ್ತಿ ತರುವ ಕೆಲವು ವಿಚಾರಗಳು ತಿಳಿದು ಬರಲಿದೆ. ನಿರಂತರ ಕೆಲಸಗಳಿಂದಾಗಿ ವಿಶ್ರಾಂತಿ ಬೇಕೆನಿಸಲಿದೆ. ಕುಟುಂಬದ ಹಲವು ತಾಪತ್ರಯಗಳಿಗೆ ಪ್ರಾಜ್ಞರಿಂದ ಪರಿಹಾರವನ್ನು ಪಡೆದುಕೊಳ್ಳುವಿರಿ.

ವೃಶ್ಚಿಕ: ಕರಾರು ಇನ್ನಿತರ ಒಪ್ಪಂದಗಳನ್ನು ಎರಡು ಬಾರಿ ಪರಿಶೀಲಿಸಿ ಒಪ್ಪಿಕೊಳ್ಳುವುದು ಉತ್ತಮ. ಮನೆಯ ಕಾಂಪೌಂಡ್‌ನ ದುರಸ್ತಿ ಕೆಲಸಗಳಿದ್ದಲ್ಲಿ ಶೀಘ್ರವಾಗಿ ಮಾಡಿಸಿ. ಪ್ರವಾಸಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ.

ಧನು: ಸಹೋದರರಲ್ಲಿನ ಕೆಲ ದಿನಗಳ ಭಿನ್ನಾಭಿಪ್ರಾಯಗಳು ಪ್ರೀತಿಯ ಮಾತುಗಳಿಂದ ದೂರವಾಗುವವು. ಅವಕಾಶಗಳು ಅರಸಿ ಬಂದರೂ ಸರಿಯಾಗಿರುವುದನ್ನು ಆಯ್ಕೆ ಮಾಡಿ.

ಮಕರ: ವಿಭಿನ್ನ ಜನರನ್ನು ಭೇಟಿಯಾಗಲಿರುವುದರಿಂದ ವೃತ್ತಿ ಬದುಕು ಹಾಗೂ ಸಾಮಾಜಿಕ ಬದುಕಿನಲ್ಲಿ ಬದಲಾವಣೆಯ ಗಾಳಿ ಬೀಸಲಿದೆ. ಜವಾಬ್ದಾರಿ ಹೆಚ್ಚಿರುವುದರಿಂದ ಸೃಜನಾತ್ಮಕ ಕಾರ್ಯನಿರ್ವಹಣೆ ಅಗತ್ಯವಾಗುವುದು.

ಕುಂಭ: ಅನವಶ್ಯಕವಾಗಿ ಎಳೆದುಕೊಳ್ಳುವ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು. ವ್ಯವಹರಿಸುವ ವ್ಯಕ್ತಿಯ ಪೂರ್ವಾಪರ ತಿಳಿದಿರುವುದು ಉತ್ತಮ. ಸಂಶೋಧನಾಕಾರರಿಗೆ ಕೆಲಸಗಳು ಭರದಿಂದ ಸಾಗಲಿವೆ.


ಮೀನ: ಪಾಲುದಾರರ ಜತೆಗಿನ ವ್ಯವಹಾರಗಳಲ್ಲಿ ಅತಿ ಪಾರದರ್ಶಕತೆಯೂ ಅಪಾಯವನ್ನು ತಂದೊಡ್ಡಬಹುದು. ದಾಂಪತ್ಯದಲ್ಲಿ ಸಂಶಯದಂತಹ ವಾತಾವರಣ ಇದ್ದು ಅಸಮಾಧಾನ ಮೂಡುವುದು.

ಪದಬಂಧ 5879

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮನೆಗಳ ಬಾಡಿಗೆಗೆ ನೀಡುವ ಹೆಚ್ಚುವರಿ ಹಣ (3)
3.ಧಾನ್ಯ ಸಂಗ್ರಹಿಸುವ ಸ್ಥಳ (3)
5.ಸ್ವಾಗತದಲ್ಲೇ ರುಚಿಯನ್ನು ಹುಡುಕಿ! (2)
6.ನಾವಿಕನಿಗೆ ಪ್ರಾಪ್ತವಾದ ಸ್ವರ್ಗ (2)
8.ಚಾಂದ್ರಮಾನ ಪಕ್ಷದ ಒಂಬತ್ತನೆಯ ತಿಥಿ (3)
9.ಕುದುರೆ ಬಂಡಿಯಿಲ್ಲಿ ಉಲ್ಟಾ ಆಗಿದೆ (3)
10.ನರಿ ಹತ್ತಿರವಿರುವ ಹೆಣ್ಣು ಮಂಗ (3)
11.ಸಂತನ ಗಾಯನ! (3)
12.ಸರವಿದ್ದಾಗ ಕಾಣಿಸಿದ ಹಾಸ್ಯ (3)
14.ತರುವಾಯ ಎಂದು ಹೀಗೆ ಹೇಳಿ (3)
15.ಹೊಸತನ್ನು ತಿರುಗಿಸಿದರೆ ಕಾಡಾದೀತು! (2)
17.ಮುನಿದವನಲ್ಲಿ ಆನಂದವನ್ನು ನೋಡಿ! (2)
18.ಮಣಿಧರಿಸಿದ ಚಲುವೆ ತಿರುಗಿದ್ದಾಳೆ (3)
19. ಇರುಳಿಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ಪ್ರತ್ಯಯ ಸಹಿತವಾದ ಶಬ್ದ (2)
2.ಧಮನಿಯಲ್ಲಿ ರಕ್ತ ನುಗ್ಗಿ ಬರುವಾಗ ಉಂಟಾಗುವ ಮಿಡಿತ ಉಲ್ಟಾ ಆಗಿದೆ (2)
3.ಬಂಗಾರವನ್ನು ಹೀಗೂ ಹೇಳುವರು (3)
4.ಮಂದಿಗೆಲ್ಲಾ ತಿಳಿದಿರುವಂಥದ್ದು (5)
5.ಆಧುನಿಕ ಭಾರತೀಯ ರಾಷ್ಟ್ರೀಯತೆಯ ಪಿತಾಮಹ ಎಂದು ಪ್ರಸಿದ್ಧರಾದವರು (7)
7.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
10.ವಾದವನ್ನು ಮಂಡಿಸುವ ಕ್ರಮ (5)
11.ಸಂತನ ಹತ್ತಿರವಿರುವ ವಂಶ (3)
13.ಮರದ ಹತ್ತಿರ ನಡೆದ ಕಾಳಗ (3)
16.ವಠಾರದಲ್ಲಿರುವ ಮದುವೆ ಗಂಡು! (2)
17.ತಪಸ್ವಿ ನೋಡುತ್ತಾ ಕೋಪಗೊಳ್ಳು! (2)



5878ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವಾದ 2.ಗುಮಾನಿ 4.ನರ 5.ಮಜೂರಿ 6.ಯಮ 9.ಶಿಲಾರಸ 11.ಅನುಭಾವಿ 12.ತಟ 14.ಪರಾಗ 15.ಸರ 16.ಲುಬ್ಧಕ 17.ದಶಕ

ಮೇಲಿಂದ ಕೆಳಕ್ಕೆ:
1.ವಿವರ 2.ಗುಜರಿ 3.ನಿಶ್ಚಯ 4.ನಖಶಿಖಾಂತ 5.ಮಟ್ಟಸ 7.ಮನೋವಿಕಾರ 8.ಪಾನು 10.ರವೆ 11.ಅಣುಗ 13.ಟಪಾಲು 14.ಪದಕ 15.ಸರೀಕ

ಸುಡೊಕು 6264

3	9	8	2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			7
7	2			5		6		3
	8		7				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6263 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ದೆಹಲಿ: ನಿತ್ಯ 11 ಸಾವಿರ ಲೀಟರ್ ಹಾಲು ಮಾರಾಟ

ನಂದಿನಿಗೆ ಹೆಚ್ಚಿದ ಬೇಡಿಕೆ

• ಗಾಣಧಾಳು ಶ್ರೀಕಂಠ

ಬೆಂಗಳೂರು: ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ನಂದಿನಿ ಹಾಲಿನ ಮಾರಾಟದಲ್ಲಿ ಏರಿಕೆ ಕಂಡಿದ್ದು, ಕಡಿಮೆ ಅವಧಿಯಲ್ಲೇ ಹೆಚ್ಚಿನ ಸಂಖ್ಯೆಯ ಗ್ರಾಹಕರನ್ನು ಆಕರ್ಷಿಸುತ್ತಿದೆ.

ರಾಜ್ಯದ ಆಚೆಗೂ ಹಾಲಿನ ಮಾರುಕಟ್ಟೆ ವಿಸ್ತರಿಸಿರುವ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯು (ಕೆಎಂಎಫ್), ಇತ್ತೀಚೆಗೆ ದೆಹಲಿಯಲ್ಲಿ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಜತೆಯಾಗಿ ವಿವಿಧ ಶ್ರೇಣಿಯ ನಂದಿನಿ ಹಾಲಿನ ಮಾರಾಟವನ್ನು ಆರಂಭಿಸಿದೆ. ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಹಾಲನ್ನು ಪೂರೈಸುವ ಮೂಲಕ, ಪ್ರಸ್ತುತ ಮಾರುಕಟ್ಟೆಯಲ್ಲಿರುವ ವಿವಿಧ ಕಂಪನಿಗಳ ಹಾಲಿಗೆ ಸ್ಪರ್ಧೆ ನೀಡುತ್ತಿದೆ.

‘ಪ್ರಸ್ತುತ ಗುಜರಾತ್‌ನ ‘ಅಮೂಲ್’, ಮದರ್ ಡೇರಿ ಸೇರಿ ವಿವಿಧ ಕಂಪನಿಗಳ ಹಾಲು ದೆಹಲಿ ಮಾರುಕಟ್ಟೆಯಲ್ಲಿದೆ. ರುಚಿ, ಗುಣಮಟ್ಟದ ಕಾರಣದಿಂದಾಗಿ ನಂದಿನಿ ಹಾಲು ದೆಹಲಿಯ ಗ್ರಾಹಕರಿಗೆ ಇಷ್ಟವಾಗಿದೆ’ ಎಂದು ಕೆಎಂಎಫ್ ಅಧಿಕಾರಿಗಳು ತಿಳಿಸಿದ್ದಾರೆ.

‘ಪ್ರತಿ ನಿತ್ಯ 10 ಸಾವಿರದಿಂದ 11 ಸಾವಿರ ಲೀಟರ್ ಹಾಲು ಮಾರಾಟ ಆಗುತ್ತಿದೆ. ಮಾರುಕಟ್ಟೆಯಲ್ಲಿ ಬೇರೆ ಕಂಪನಿಗಳಿಂದ ಕಠಿಣ ಸ್ಪರ್ಧೆ ಇದೆ. ಮಾರಾಟಗಾರರನ್ನು ನಿಯೋಜಿಸಿ, ಮಾರುಕಟ್ಟೆ ವಿಸ್ತರಿಸಬೇಕಿದೆ. ಸದ್ಯಕ್ಕೆ ಹಾಲನ್ನು ಪೂರೈಕೆ ಮಾಡುತ್ತಿದ್ದೇವೆ. ಮುಂದೆ ಎಲ್ಲ ಉತ್ಪನ್ನಗಳನ್ನು ದೆಹಲಿ ಮಾರುಕಟ್ಟೆಗೆ ಪರಿಚಯಿಸಲಾಗುತ್ತದೆ’ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಇಲ್ಲಿರುವಂತೆಯೇ ದೆಹಲಿಯಲ್ಲೂ ಹಸಿರು, ಕಿತ್ತಳೆ, ನೀಲಿ, ನೇರಳೆ ಬಣ್ಣದ ಪ್ಯಾಕೆಟ್‌ಗಳಲ್ಲಿ ವಿವಿಧ ಶ್ರೇಣಿಯ ಹಾಲನ್ನು ಮಾರಾಟ ಮಾಡಲಾಗುತ್ತಿದೆ. ಮುಂದೆ ಮೊಸರು, ತುಪ್ಪ ಸೇರಿದಂತೆ ನಂದಿನಿಯ ಬೇರೆ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ದೆಹಲಿ ಮಾರುಕಟ್ಟೆಗೆ ಪರಿಚಯಿಸಲು ಸಿದ್ಧತೆ ನಡೆದಿದೆ. ಈ ಸಂಬಂಧ, ಮಾರುಕಟ್ಟೆ ಸಮೀಕ್ಷೆಯನ್ನೂ ನಡೆಸಲಾಗುತ್ತಿದೆ.

‘ನಂದಿನಿ ಹಾಲಿನ ಗುಣಮಟ್ಟದಿಂದಾಗಿ ಗ್ರಾಹಕರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ನಮ್ಮಲ್ಲಿದ್ದಂತೆ ನೀಲಿ-ಬಿಳಿ ಬಣ್ಣದ ಪ್ಯಾಕೆಟ್ ಹಾಲಿಗೆ ಅಲ್ಲಿ ಅಷ್ಟಾಗಿ ಬೇಡಿಕೆ ಇಲ್ಲ. ಕಿತ್ತಳೆ ಬಣ್ಣದ ಪ್ಯಾಕೆಟ್ ಹಾಲಿಗೆ ಹೆಚ್ಚು ಬೇಡಿಕೆ ಇದೆ. ಟೋನ್ಡ್ ಹಾಲಿಗಿಂತ, ಡಬ್ಬಲ್ ಟೋನ್ಡ್ ಹಾಲನ್ನು ಜನರು ಹೆಚ್ಚು ಇಷ್ಟಪಡುತ್ತಿದ್ದಾರೆ’ ಎಂದು ಜಗದೀಶ್ ವಿವರಿಸಿದರು.

ಮಾರುಕಟ್ಟೆಯಲ್ಲಿನ ಬೇಡಿಕೆಗೆ ತಕ್ಕಂತೆ ವಿವಿಧ ಪ್ರಮಾಣಗಳಲ್ಲಿ ಹಾಲಿನ ಪ್ಯಾಕೆಟ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. ಹಸುವಿನ ಹಾಲಿಗೆ ಹೆಚ್ಚು ಬೇಡಿಕೆ ಇದೆ ಎಂದು ತಿಳಿಸಿದರು.

ನವೆಂಬರ್ 11ರಂದು ದೆಹಲಿಯಲ್ಲಿ ನಂದಿನಿ ಹಾಲು ಮಾರಾಟಕ್ಕೆ ಚಾಲನೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ದೆಹಲಿಗೆ ಆರಂಭಿಕ ಹಂತದಲ್ಲಿ 2.5 ಲಕ್ಷ ಲೀಟರ್ ಹಾಲು ಪೂರೈಸಲು ಯೋಜನೆ ರೂಪಿಸಲಾಗಿದೆ. ಆರು ತಿಂಗಳೊಳಗೆ 5 ಲಕ್ಷ ಲೀಟರ್‌ಗೆ ಹೆಚ್ಚಿಸುವ ಗುರಿ ಇದೆ’ ಎಂದು ಹೇಳಿದ್ದರು.

> ಗ್ರಾಹಕರ ಬೇಡಿಕೆ, ಪ್ರತಿಕ್ರಿಯೆ ಆಧರಿಸಿ, ದೆಹಲಿಯ ನಂತರ ಉತ್ತರ ಭಾರತದ ಇತರೆ ರಾಜ್ಯಗಳಿಗೂ ಹಾಲಿನ ಮಾರಾಟ ವಿಸ್ತರಿಸುವ ಯೋಜನೆ ಇದೆ
> **ಕೆ.ಎಂ.ಜಗದೀಶ್,** ವ್ಯವಸ್ಥಾಪಕ ನಿರ್ದೇಶಕ, ಕೆಎಂಎಫ್

4ರಿಂದ ಆರ್‌ಬಿಐ ಎಂಪಿಸಿ ಸಭೆ ಆರಂಭ

ರೆಪೊ ದರ ಯಥಾಸ್ಥಿತಿ?

ನವದೆಹಲಿ (ಪಿಟಿಐ): ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಏರಿಕೆಯಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಕುಸಿದಿದೆ. ಹಾಗಾಗಿ, ಈ ಬಾರಿಯೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆಯಿದೆ ಎಂದು ಆರ್ಥಿಕ ತಜ್ಞರು ತಿಳಿಸಿದ್ದಾರೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಆರು ಸದಸ್ಯರನ್ನು ಒಳಗೊಂಡ ಸಭೆಯು ಡಿಸೆಂಬರ್ 4ರಿಂದ 6ರ ವರೆಗೆ ನಡೆಯಲಿದೆ. ಕೊನೆಯ ದಿನದಂದು ಗವರ್ನರ್ ಅವರು ಸಭೆಯ ನಿರ್ಣಯವನ್ನು ಅಧಿಕೃತವಾಗಿ ಘೋಷಿಸಲಿದ್ದಾರೆ.

ಆರ್‌ಬಿಐ ರೆಪೊ ದರವನ್ನು ಕಡಿತಗೊಳಿಸಲಿದ್ದು, ವಾಹನ ಹಾಗೂ ಗೃಹ ಸಾಲದ ಮೇಲಿನ ಬಡ್ಡಿದರ ಇಳಿಕೆಯಾಗಲಿದೆ ಎಂಬ ನಿರೀಕ್ಷೆ ಹೆಚ್ಚಿತ್ತು. ಆದರೆ, ಅಕ್ಟೋಬರ್‌ನಲ್ಲಿ ದಾಖಲಾಗಿರುವ ಶೇ 6.21ರಷ್ಟು ಹಣದುಬ್ಬರವು ಎಲ್ಲಾ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದೆ.

2023ರ ಫೆಬ್ರುವರಿಯಿಂದಲೂ ಶೇ 6.5ರಷ್ಟು ಇರುವ ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

‘ಜಾಗತಿಕ ಬಿಕ್ಕಟ್ಟು ದೇಶದ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದೆ. ಕಳೆದ ಎರಡು ತಿಂಗಳಿನಲ್ಲಿ ಸರಾಸರಿ ಹಣದುಬ್ಬರ ಶೇ 5.9ರಷ್ಟಿದೆ. ಹಾಗಾಗಿ, ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯಿದೆ’ ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

ಹಣದುಬ್ಬರವು ಆರ್‌ಬಿಐ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ದಾಖಲಾಗಿದೆ. ಜಿಡಿಪಿ ಕೂಡ ಕುಸಿತವಾಗಿದೆ. ಹಾಗಾಗಿ, ಮೂರನೇ ತ್ರೈಮಾಸಿಕದ ಹಣದುಬ್ಬರ ಮತ್ತು ಜಿಡಿಪಿ ಬೆಳವಣಿಗೆಯ ಮುನ್ನೋಟವನ್ನು ಪರಿಷ್ಕರಿಸುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

‘ತಯಾರಿಕೆ ಮತ್ತು ಗಣಿಗಾರಿಕೆ ವಲಯದ ಬೆಳವಣಿಗೆಯ ಕುಸಿತದಿಂದಾಗಿ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯು ಎರಡು ವರ್ಷದ ಕನಿಷ್ಠ ಮಟ್ಟವಾದ ಶೇ 5.4ರಷ್ಟು ದಾಖಲಾಗಿದೆ. ಚಿಲ್ಲರೆ ಹಣದುಬ್ಬರವನ್ನು ಶೇ 2ರಿಂದ ಶೇ 6ರ ನಡುವೆ ನಿಯಂತ್ರಿಸುವ ಹೊಣೆ ಆರ್‌ಬಿಐ ಮೇಲಿದೆ. ಆದರೆ, ಅಕ್ಟೋಬರ್‌ನಲ್ಲಿ ನಿಗದಿತ ಮಿತಿಗಿಂತಲೂ ಹೆಚ್ಚು ದಾಖಲಾಗಿದೆ. ಹಾಗಾಗಿ, ರೆಪೊ ದರ ಕಡಿತಗೊಳಿಸುವ ಸಾಧ್ಯತೆ ಕಡಿಮೆ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

‘ಅಲ್ಲದೆ, ಆರ್‌ಬಿಐ 2024–25ನೇ ಆರ್ಥಿಕ ವರ್ಷದ ಆರ್ಥಿಕ ಮುನ್ನೋಟವನ್ನು ಪರಿಷ್ಕರಿಸುವ ಸಾಧ್ಯತೆಯಿದೆ. ಡಿಸೆಂಬರ್ ಮತ್ತು ಮುಂದಿನ ವರ್ಷದ ಜನವರಿಯಲ್ಲಿ ಹಣದುಬ್ಬರ ಇಳಿಕೆಯಾದರೆ ಫೆಬ್ರುವರಿಯಲ್ಲಿ ನಡೆಯಲಿರುವ ಎಂಪಿಸಿ ಸಭೆಯಲ್ಲಿ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ’ ಎಂದು ಹೇಳಿದ್ದಾರೆ.

ಇಟಿಎಫ್‌ನಲ್ಲಿ ಹೂಡಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಷೇರು ಮತ್ತು ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದು ಬಹುತೇಕರಿಗೆ ಗೊತ್ತಿದೆ. ಆದರೆ, ಇಟಿಎಫ್ ಮೂಲಕ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ವಿಧಾನ ಹೆಚ್ಚು ಜನಪ್ರಿಯವಾಗಿಲ್ಲ.

ಭಾರತದಲ್ಲಿ ಪ್ರಸಕ್ತ ವರ್ಷದ ಮಾರ್ಚ್ ತಿಂಗಳ ಅಂಕಿ-ಅಂಶದ ಪ್ರಕಾರ ಇಟಿಎಫ್‌ಗಳಲ್ಲಿ ₹6.95 ಲಕ್ಷ ಕೋಟಿ ಹೂಡಿಕೆಯಾಗಿದೆ. ದಿನ ಕಳೆದಂತೆ ಹೂಡಿಕೆದಾರರು ಷೇರು ಹೂಡಿಕೆ ಮ್ಯೂಚುವಲ್ ಫಂಡ್ ಜೊತೆ ಇಟಿಎಫ್‌ಗಳತ್ತ ಕೂಡ ಚಿತ್ತ ಹರಿಸಿದ್ದಾರೆ. ಈ ಹೊತ್ತಿನಲ್ಲಿ, ಇಟಿಎಫ್ ಅಂದರೆ ಏನು? ಈ ಹೂಡಿಕೆಯಿಂದ ಪ್ರಯೋಜನ ಏನು? ಅವುಗಳ ಮಿತಿಗಳೇನು? ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಿಂತ ಇಟಿಎಫ್ ಹೇಗೆ ಭಿನ್ನ? ಹೀಗೆ ಇಟಿಎಫ್ ಸುತ್ತ ಇರುವ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ ಬನ್ನಿ.

ಏನಿದು ಇಟಿಎಫ್?: ಒಂದು ಹೂಡಿಕೆಯ ಗುಚ್ಛವನ್ನು ಸರಳವಾಗಿ ಇಟಿಎಫ್ ಎಂದು ಕರೆಯಬಹುದು. ‘ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್’ ಎನ್ನುವುದು ‘ಇಟಿಎಫ್’ನ ವಿಸ್ತೃತ ರೂಪ. ಇಟಿಎಫ್‌ನಲ್ಲಿ ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್‌ನಲ್ಲಿನ ಒಳ್ಳೆಯ ಅಂಶಗಳು ಸೇರಿರುವುದರಿಂದ ಇದನ್ನು ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳ ಮಿಶ್ರರೂಪ ಎಂದು ಪರಿಗಣಿಸಬಹುದು.

ಷೇರು ಮಾರುಕಟ್ಟೆಯಲ್ಲಿ ಷೇರುಗಳ ವಹಿವಾಟು ನಡೆಯುವ ಮಾದರಿಯಲ್ಲೇ ಇಟಿಎಫ್‌ಗಳ ಖರೀದಿ- ಮಾರಾಟ ಜರುಗುತ್ತದೆ. ಷೇರುಗಳ ಬೆಲೆ ಏರಿಳಿತ ಕಾಣುವ ರೀತಿ ಇಟಿಎಫ್‌ಗಳ ಬೆಲೆ ಕ್ಷಣ ಕ್ಷಣಕ್ಕೂ ಬದಲಾಗುತ್ತಿರುತ್ತದೆ. ಷೇರುಗಳನ್ನು ಕೊಳ್ಳುವಾಗ ಮತ್ತು ಮಾರಾಟ ಮಾಡುವಾಗ ಲಿಮಿಟ್ ಆರ್ಡರ್ ಹಾಕುವ ರೀತಿಯಲ್ಲೇ ಇಟಿಎಫ್‌ಗಳಿಗೂ ಲಿಮಿಟ್ ನಿಗದಿಪಡಿಸಬಹುದು. ಅಲ್ಲದೆ, ಷೇರು ಖರೀದಿಸಿದಾಗ ಹೇಗೆ ಅದು ನಮ್ಮ ಡಿ-ಮ್ಯಾಟ್ ಖಾತೆಗೆ ಬರುವುದೋ ಅದೇ ಮಾದರಿಯಲ್ಲಿ ಇಟಿಎಫ್ ಖರೀದಿಸಿದಾಗಲೂ ಅದು ಡಿ-ಮ್ಯಾಟ್ ಖಾತೆಗೆ ಬರುತ್ತದೆ.

ಇನ್ನು ಇಟಿಎಫ್ ಹೂಡಿಕೆ, ಇಂಡೆಕ್ಸ್ ಮ್ಯೂಚುವಲ್ ಫಂಡ್ ಮಾದರಿಯನ್ನು ಸಹ ಹೋಲುತ್ತದೆ. ಇಂಡೆಕ್ಸ್ ಮ್ಯೂಚುವಲ್ ಫಂಡ್‌ಗಳು ನಿಫ್ಟಿ 50 ಮತ್ತು ಸೆನ್ಸೆಕ್ಸ್ ಸೂಚ್ಯಂಕ (ಇಂಡೆಕ್ಸ್) ಅನುಸರಣೆ ಮಾಡಿ ಹೂಡಿಕೆ ಮಾಡುತ್ತವೆ. ಇದೇ ಮಾದರಿಯಲ್ಲಿ ಬಹುತೇಕ ಇಟಿಎಫ್‌ಗಳು ಕಾರ್ಯ ನಿರ್ವಹಿಸುತ್ತವೆ.

ಉದಾಹರಣೆಗೆ ನಿಫ್ಟಿ ಬೀಸ್ ಇಟಿಎಫ್, ನಿಫ್ಟಿ 50 ಸೂಚ್ಯಂಕವನ್ನು ಹಿಂಬಾಲಿಸುತ್ತದೆ. ಮತ್ತೊಂದು ವಿಶೇಷ ಅಂದರೆ ಮ್ಯೂಚುವಲ್ ಫಂಡ್‌ಗಳಿಗಿಂತ ಕಡಿಮೆ ಎಕ್ಸ್‌ಪೆನ್ಸ್ ರೇಷಿಯೊ (ವೆಚ್ಚ ಅನುಪಾತ/ಕಮಿಷನ್) ಇಟಿಎಫ್‌ಗಳಲ್ಲಿ ಇರುತ್ತದೆ.

ಇಟಿಎಫ್ ವಿಧಗಳು: ಇಟಿಎಫ್‌ಗಳಲ್ಲಿ ಪ್ರಮುಖವಾಗಿ ಮೂರು ವಿಧಗಳಿವೆ. ಈಕ್ವಿಟಿ ಇಟಿಎಫ್, ಡೆಟ್ ಇಟಿಎಫ್ ಮತ್ತು ಕಮೋಡಿಟಿ ಇಟಿಎಫ್.

ಈಕ್ವಿಟಿ ಇಟಿಎಫ್‌ಗಳು ಈಕ್ವಿಟಿ ಇಂಡೆಕ್ಸ್‌ನ ಹಲವು ಷೇರುಗಳ ಮೇಲೆ ಹೂಡಿಕೆ ಮಾಡುತ್ತವೆ. ಡೆಟ್ ಇಟಿಎಫ್‌ಗಳು ಕಾರ್ಪೊರೇಟ್ ಬಾಂಡ್, ಸರ್ಕಾರಿ ಬಾಂಡ್, ಮುನಿಸಿಪಲ್ ಬಾಂಡ್‌ನಂತಹ ಡೆಟ್ ಹೂಡಿಕೆಗಳ ಮೇಲೆ ಹಣ ತೊಡಗಿಸುತ್ತವೆ. ಕಮೋಡಿಟ್ ಇಟಿಎಫ್‌ಗಳು ಚಿನ್ನ, ಬೆಳ್ಳಿಯ ಮೇಲೆ ಹಣ ಹಾಕುತ್ತವೆ.

ಇಟಿಎಫ್ ಅನುಕೂಲಗಳು: ಇಟಿಎಫ್‌ಗಳಲ್ಲಿ ಎಕ್ಸ್‌ಪೆನ್ಸ್ ರೇಷಿಯೊ ಮ್ಯೂಚುವಲ್ ಫಂಡ್‌ಗಳಿಗಿಂತ ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಮ್ಯೂಚುವಲ್ ಫಂಡ್‌ಗಳ ಎಕ್ಸ್‌ಪೆನ್ಸ್ ರೇಷಿಯೊ ಶೇ 1ರ ಆಸುಪಾಸಿನಲ್ಲಿದ್ದರೆ ಇಟಿಎಫ್‌ಗಳ ಎಕ್ಸ್‌ಪೆನ್ಸ್ ರೇಷಿಯೊ ಶೇ 0.20ರ ಆಸುಪಾಸಿನಲ್ಲಿರುತ್ತದೆ. ಇನ್ನು ಮ್ಯೂಚುವಲ್ ಫಂಡ್‌ಗಳನ್ನು ಷೇರು ಮಾರುಕಟ್ಟೆಯಲ್ಲಿ ಟ್ರೇಡ್ ಮಾಡಲು ಆಗುವುದಿಲ್ಲ.

ಆದರೆ, ಷೇರು ವಹಿವಾಟಿನಷ್ಟೇ ಸಲೀಸಾಗಿ ಸ್ಟಾಕ್ ಮಾರ್ಕೆಟ್‌ನಲ್ಲಿ ಇಟಿಎಫ್‌ಗಳ ಖರೀದಿ–ಮಾರಾಟ ಸಾಧ್ಯವಾಗುತ್ತದೆ. ಮ್ಯೂಚುವಲ್ ಫಂಡ್ ಖರೀದಿಸಿದಾಗ ದಿನದ ಅಂತ್ಯದ ಎನ್‌ಎವಿ (ನೆಟ್ ಅಸೆಟ್ ವ್ಯಾಲ್ಯೂ) ದೊರಕುತ್ತದೆ. ಆದರೆ, ಇಟಿಎಫ್‌ಗಳಲ್ಲಿ ಖರೀದಿ ಮಾಡಿದ ಸಮಯದ ಎನ್‌ಎವಿ ಲಭಿಸುತ್ತದೆ. ಅಂದರೆ ಮಾರುಕಟ್ಟೆ ತ್ವರಿತ ಮತ್ತು ಹರಿತ ಏರಿಳಿತದ ಲಾಭ ಪಡೆಯಲು ಇಟಿಎಫ್ ಹೆಚ್ಚು ಅನುಕೂಲ ಮಾಡಿಕೊಡುತ್ತದೆ.

ಇಟಿಎಫ್ ಮಿತಿಗಳು: ಇಟಿಎಫ್ ಇನ್ನೂ ಅಷ್ಟು ಜನಪ್ರಿಯ ಹೂಡಿಕೆ ಆಯ್ಕೆಯಾಗಿಲ್ಲ. ಹಾಗಾಗಿ, ಇಟಿಎಫ್‌ಗಳಲ್ಲಿ ನಗದೀಕರಣ (ಲಿಕ್ವಿಡಿಟಿ) ಸಮಸ್ಯೆ ಎದುರಾಗುತ್ತದೆ. ಉದಾಹರಣೆಗೆ ಮಾರುಕಟ್ಟೆಯಲ್ಲಿ ಐದು ಮಂದಿ ಇಟಿಎಫ್ ಖರೀದಿದಾರರಿದ್ದು ಇಟಿಎಫ್ ಮಾರಾಟಗಾರರ ಸಂಖ್ಯೆ ಹತ್ತಕ್ಕಿಂತ ಜಾಸ್ತಿ ಇದೆ ಎಂದು ಭಾವಿಸಿ. ಇಂತಹ ಸಂದರ್ಭದಲ್ಲಿ ಖರೀದಿದಾರರು ಇಲ್ಲದಿದ್ದಾಗ ಇಟಿಎಫ್‌ನಲ್ಲಿ ಹಣ ನಗದೀಕರಣ ಮಾಡಿಕೊಳ್ಳುವುದು ಕಷ್ಟವಾಗುತ್ತದೆ.

ಯಾವಾಗ ಬೇಡಿಕೆ ಕಡಿಮೆ ಮತ್ತು ಪೂರೈಕೆ ಜಾಸ್ತಿ ಇರುವುದೋ ಆಗ ಬೆಲೆ ಇಳಿಕೆಯಾಗುವ ಸಂಭವ ಇರುತ್ತದೆ. ಇಟಿಎಫ್ ವಿಚಾರದಲ್ಲೂ ಇದಾಗುವ ಸಾಧ್ಯತೆ ಇರುತ್ತದೆ. ಹಣ ನಗದೀಕರಣ ಇಟಿಎಫ್‌ಗಳಲ್ಲಿ ಕಾಲಕಾಲಕ್ಕೆ ಸುಧಾರಿಸುತ್ತಾ ಬಂದಿದೆ. ಆದರೆ, ಈಗಲೂ ಅದು ಮ್ಯೂಚುವಲ್ ಫಂಡ್‌ಗಳಷ್ಟು ಉತ್ತಮವಾಗಿಲ್ಲ.

ಇನ್ನು ಇಟಿಎಫ್‌ನ ಎಕ್ಸ್‌ಪೆನ್ಸ್ ರೇಷಿಯೊ ಮ್ಯೂಚುವಲ್ ಫಂಡ್‌ಗಳಿಗಿಂತ ಕಡಿಮೆ ಇದೆ ಎನ್ನುವುದು ನಿಜ. ಆದರೆ, ಇಟಿಎಫ್ ಹೂಡಿಕೆ ಮಾಡಲು ಕಡ್ಡಾಯವಾಗಿ ಡಿ–ಮ್ಯಾಟ್ ಖಾತೆ ಹೊಂದಿರಬೇಕಾಗುತ್ತದೆ. ಬ್ರೋಕರ್ ಮೂಲಕ ಇಟಿಎಫ್ ಖರೀದಿಸುವ ಕಾರಣದಿಂದ ಬ್ರೋಕರೇಜ್ ಕಮಿಷನ್, ಸೆಕ್ಯುರಿಟೀಸ್ ಟ್ರಾನ್ಸಾಕ್ಷನ್ ಟ್ಯಾಕ್ಸ್ ಮತ್ತು ಪ್ಲಾಟ್ ಫಾರಂ ಶುಲ್ಕ ಪಾವತಿಸಬೇಕಾಗಿ ಬರುತ್ತದೆ. ಇದು ವೆಚ್ಚ ಅನುಪಾತದ ಮೇಲೆ ಬರುವ ಹೆಚ್ಚುವರಿ ವೆಚ್ಚ ಎನ್ನುವುದು ನಿಮಗೆ ಗೊತ್ತಿರಲಿ.

ಇಟಿಎಫ್ v/s ಇಂಡೆಕ್ಸ್ ಫಂಡ್ಸ್: ಇಂಡೆಕ್ಸ್ ಫಂಡ್‌ನಲ್ಲಿ ಹೂಡಿಕೆ ಮಾಡಲು ಡಿ- ಮ್ಯಾಟ್ ಖಾತೆ ಕಡ್ಡಾಯವಲ್ಲ. ಆದರೆ, ಇಟಿಎಫ್ ಹೂಡಿಕೆಗೆ ಡಿ-ಮ್ಯಾಟ್ ಬೇಕು. ಇಂಡೆಕ್ಸ್ ಫಂಡ್ ಖರೀದಿಸಿದಾಗ ದಿನದ ಅಂತ್ಯದ ಮಾರುಕಟ್ಟೆ ಮೌಲ್ಯ (ಎನ್‌ಎವಿ) ಸಿಗುತ್ತದೆ. ಆದರೆ, ಇಟಿಎಫ್ ಕೊಳ್ಳುವಾಗ ಮಾರುಕಟ್ಟೆಯಲ್ಲಿ ಆ ಸಮಯದಲ್ಲಿ ಯಾವ ಮೌಲ್ಯವಿತ್ತೋ ಅದು ಲಭಿಸುತ್ತದೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ನಗದೀಕರಣ ಸುಲಭ. ಆದರೆ, ಇಟಿಎಫ್‌ಗಳಲ್ಲಿ ಹಣ ನಗದೀಕರಣ ಅಷ್ಟು ಸಲೀಸಲ್ಲ. ಇಂಡೆಕ್ಸ್ ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ (ಪ್ರತಿ ತಿಂಗಳು ವ್ಯವಸ್ಥಿತವಾಗಿ ನಿಗದಿತ ಮೊತ್ತ ಹೂಡಿಕೆ) ಸಾಧ್ಯವಿದೆ. ಆದರೆ, ಎಲ್ಲಾ ಬ್ರೋಕರ್‌ಗಳು ಇಟಿಎಫ್‌ನಲ್ಲಿ ಎಸ್‌ಐಪಿ ಮಾಡಲು ಅವಕಾಶ ಕಲ್ಪಿಸುವುದಿಲ್ಲ. ಇಂಡೆಕ್ಸ್ ಫಂಡ್‌ನಲ್ಲಿ ಎಕ್ಸ್‌ಪೆನ್ಸ್ ರೇಷಿಯೊ ಎಷ್ಟಿದೆಯೋ ಅಷ್ಟು ಹೊರೆ ಮಾತ್ರ ಹೂಡಿಕೆದಾರನ ಮೇಲೆ ಬೀಳುತ್ತದೆ. ಆದರೆ, ಇಟಿಎಫ್ ಖರೀದಿಸುವಾಗ ಎಕ್ಸ್‌ಪೆನ್ಸ್ ರೇಷಿಯೊ ಜೊತೆಗೆ ಹೆಚ್ಚುವರಿ ಶುಲ್ಕ ಕೊಡಬೇಕಾಗುತ್ತದೆ.

ಇಟಿಎಫ್ ಖರೀದಿ ಹೇಗೆ?: ಷೇರು ಖರೀದಿ ಮಾಡುವ ಮಾದರಿಯಲ್ಲೇ ಇಟಿಎಫ್‌ಗಳನ್ನು ಸ್ಟಾಕ್ ಮಾರ್ಕೆಟ್ ಪ್ಲಾಟ್ ಫಾರಂಗಳ ಮೂಲಕ ಖರೀದಿಸಬಹುದು. ಇಟಿಎಫ್ ಖರೀದಿಸುವಾಗ ಹೆಚ್ಚು ಜನರು ಕೊಳ್ಳುವ ಇಟಿಎಫ್ ಖರೀದಿಸಿ. ಹೆಚ್ಚು ಜನರು ಖರೀದಿಸಿರುವ ಇಟಿಎಫ್ ಕೊಂಡರೆ ಹಣ ನಗದೀಕರಣ ಸುಲಭವಾಗುತ್ತದೆ. ಎಷ್ಟು ಮಂದಿ ನಿರ್ದಿಷ್ಟ ಇಟಿಎಫ್‌ನಲ್ಲಿ ಹೂಡಿಕೆ ಮಾಡಿದ್ದಾರೆ ಎನ್ನುವ ಮಾಹಿತಿ ಎನ್‌ಎಸ್‌ಇ (ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ) ವೆಬ್‌ಸೈಟ್‌ನಲ್ಲಿ ಸಿಗುತ್ತದೆ.

ಕಿವಿಮಾತು: ಇಟಿಎಫ್ ಮತ್ತು ಮ್ಯೂಚುವಲ್ ಫಂಡ್ ಈ ಎರಡೂ ಹೂಡಿಕೆ ಮಾದರಿಗಳಲ್ಲೂ ಸಾಧಕ- ಬಾಧಕಗಳಿವೆ. ಹೂಡಿಕೆ ಮಾಡುವ ಮುನ್ನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮುಂದುವರಿಯಿರಿ. ಈ ಎರಡೂ ಹೂಡಿಕೆಗಳು ಬೆಲೆ ಏರಿಕೆ ಮೀರಿ ಹೂಡಿಕೆದಾರನಿಗೆ ಗಳಿಕೆ ತಂದುಕೊಡಬಲ್ಲ ಸಾಮರ್ಥ್ಯ ಹೊಂದಿವೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಸತತ ಎರಡನೇ ವಾರವೂ ಜಿಗಿದ ಷೇರುಪೇಟೆ

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಗಳಿಕೆ ಕಂಡಿವೆ. ನವೆಂಬರ್ 29ಕ್ಕೆ ಕೊನೆಕೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 79,802 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.87ರಷ್ಟು ಗಳಿಸಿ ಕೊಂಡಿದೆ. 24,131 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.94ರಷ್ಟು ಜಿಗಿದಿದೆ.

ಇನ್ನು ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ವಾರದ ಸಮಯದಲ್ಲಿ ಶೇ 2.5ರಷ್ಟು ಗಳಿಸಿಕೊಂಡಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 5ರಷ್ಟು ಹೆಚ್ಚಳ ದಾಖಲಿಸಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಶೇ 5.51, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.7, ಅನಿಲ ಮತ್ತು ತೈಲ ಶೇ 4, ಎನರ್ಜಿ ಶೇ 2.62, ಲೋಹ ಶೇ 2.12, ಬ್ಯಾಂಕ್ ಶೇ 1.8, ಎಫ್‌ಎಂಸಿಜಿ ಶೇ 1.73, ಫೈನಾನ್ಸ್ ಶೇ 1.64, ರಿಯಲ್ ಎಸ್ಟೇಟ್ ಶೇ 1.38 ಮತ್ತು ಫಾರ್ಮಾ ಶೇ 1.27ರಷ್ಟು ಏರಿಕೆ ಕಂಡಿದೆ. ನಿಫ್ಟಿ ಆಟೊ ವಲಯ ಶೇ 0.79 ಮತ್ತು ಮಾಹಿತಿ ತಂತ್ರಜ್ಞಾನ ವಲಯ ಶೇ 0.43ರಷ್ಟು ಕುಸಿದಿದೆ.

ಇಳಿಕೆ–ಗಳಿಕೆ: ಬಜಾಜ್ ಆಟೊ ಶೇ 4.77, ಎಚ್‌ಡಿಎಫ್‌ಸಿ ಲೈಫ್ ಶೇ 4.29, ಐಷರ್ ಮೋಟರ್ಸ್ ಶೇ 3.07, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 3.06, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 2.47, ಇನ್ಫೊಸಿಸ್ ಶೇ 2.34, ಪವರ್ ಗ್ರಿಡ್ ಶೇ 2.31, ಟೈಟನ್ ಶೇ 1.8, ಟೆಕ್ ಮಹೀಂದ್ರ ಶೇ 1.78, ಬಜಾಜ್ ಫೈನಾನ್ಸ್ ಶೇ 1.62, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 1.64ರಷ್ಟು ಕುಸಿದಿವೆ.

ಅದಾನಿ ಎಂಟರ್ ಪ್ರೈಸಸ್ ಶೇ 10.43, ಭಾರತ್ ಎಲೆಕ್ಟ್ರಾನಿಕ್ಸ್ ಶೇ 9.63, ಒಎನ್‌ಜಿಸಿ ಶೇ 4.71, ಅದಾನಿ ಪೋರ್ಟ್ಸ್ ಶೇ 4.46, ಏರ್‌ಟೆಲ್ ಶೇ 3.65, ಎಲ್ ಆ್ಯಂಡ್ ಟಿ ಶೇ 3.37, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.96, ಸಿಪ್ಲಾ ಶೇ 2.93, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 2.73 ಹಾಗೂ ಬಿಪಿಸಿಎಲ್ ಶೇ 2.27ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಡಿಸೆಂಬರ್ 4ರಿಂದ ಆರಂಭವಾಗಲಿರುವ ಆರ್‌ಬಿಐ ಹಣಕಾಸು ಸಮಿತಿ ಸಭೆಯು ರೆಪೊ ದರದ ಬಗ್ಗೆ ಯಾವ ನಿರ್ಣಯ ತೆಗೆದುಕೊಳ್ಳಲಿದೆ ಎಂಬ ಕುತೂಹಲ ಹೂಡಿಕೆದಾರರಿಗೆ ಇದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.



ಜಾಗೃತಿ ವಿಶ್ವ ಏಡ್ಸ್ ದಿನದ ಅಂಗವಾಗಿ ಕೇರಳದ ಕೋಯಿಕ್ಕೋಡ್‌ನಲ್ಲಿ ಭಾನುವಾರ ನಾಗರಿಕರು ಮೊಂಬತ್ತಿ ಬೆಳಗುವ ಮೂಲಕ ರೋಗದ ಕುರಿತು ಜಾಗೃತಿ ಮೂಡಿಸಿದರು –ಪಿಟಿಐ ಚಿತ್ರ

ಜಿಎಸ್‌ಟಿ: ₹1.82 ಲಕ್ಷ ಕೋಟಿ ಸಂಗ್ರಹ



ನವದೆಹಲಿ (ಪಿಟಿಐ): ನವೆಂಬರ್‌ನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ₹1.82 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಕೇಂದ್ರ ಜಿಎಸ್‌ಟಿ ₹34,141 ಕೋಟಿ, ರಾಜ್ಯ ಜಿಎಸ್‌ಟಿ ₹43,047 ಕೋಟಿ, ಸಮಗ್ರ ಜಿಎಸ್‌ಟಿ ₹91,828 ಕೋಟಿ ಹಾಗೂ ಸೆಸ್ ರೂಪದಲ್ಲಿ ₹13,253 ಕೋಟಿ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ ಶೇ 8.5ರಷ್ಟು ಹೆಚ್ಚಳವಾಗಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದ್ದು, ದಾಖಲೆಯಾಗಿತ್ತು. ಅಕ್ಟೋಬರ್‌ನಲ್ಲಿ ₹1.87 ಲಕ್ಷ ಕೋಟಿ ಸಂಗ್ರಹವಾಗಿತ್ತು. ಅತಿಹೆಚ್ಚು ವರಮಾನ ಸಂಗ್ರಹ ಆಗಿರುವ ಎರಡನೇ ತಿಂಗಳು ಇದಾಗಿದೆ.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಶೇ 9.4ರಷ್ಟು ಹೆಚ್ಚಳವಾಗಿದ್ದು, ₹1.40 ಲಕ್ಷ ಕೋಟಿ ಸಂಗ್ರಹವಾಗಿದೆ. ಆಮದು ಮೇಲಿನ ಸಂಗ್ರಹದಲ್ಲಿ ಶೇ 6ರಷ್ಟು ಏರಿಕೆಯಾಗಿದ್ದು, ₹42,591 ಕೋಟಿ ಸಂಗ್ರಹವಾಗಿದೆ.

₹19,259 ಕೋಟಿ ಮರುಪಾವತಿ ಮಾಡಲಾಗಿದೆ. ಒಟ್ಟು ನಿವ್ವಳ ವರಮಾನ ಸಂಗ್ರಹ ₹1.63 ಲಕ್ಷ ಕೋಟಿ ಆಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 11ರಷ್ಟು ಹೆಚ್ಚಳವಾಗಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹411-648
ದ್ವಿತಳಿ (ಬಿ.ವಿ)	₹472-796

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹627

ಎಫ್‌ಡಿಐ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ₹2.51 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹1.73 ಲಕ್ಷ ಕೋಟಿ ಹೂಡಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 45ರಷ್ಟು ಹೆಚ್ಚಳವಾಗಿದೆ. ಆರೋಗ್ಯ, ಕಂಪ್ಯೂಟರ್, ಟೆಲಿಕಾಂ ಹಾಗೂ ಫಾರ್ಮಾ ವಲಯದಲ್ಲಿ ಹೂಡಿಕೆ ಪ್ರಮಾಣ ಹೆಚ್ಚಿದೆ.

ಏಪ್ರಿಲ್ ತ್ರೈಮಾಸಿಕದಲ್ಲಿ ₹1.36 ಲಕ್ಷ ಕೋಟಿ ಹಾಗೂ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1.15 ಲಕ್ಷ ಕೋಟಿ ಹೂಡಿಕೆಯಾಗಿದೆ ಎಂದು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ವಾಣಿಜ್ಯ ಸಿಲಿಂಡರ್ ದರ ಏರಿಕೆ



ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆಯ ಸಿಲಿಂಡರ್ ಮತ್ತು ವಿಮಾನ ಇಂಧನ ದರವನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಭಾನುವಾರ ಏರಿಕೆ ಮಾಡಿವೆ.

ಸಿಲಿಂಡರ್ ದರವು ₹16.5 ಹೆಚ್ಚಳವಾಗಿದ್ದು, ಪ್ರಸ್ತುತ ದೆಹಲಿಯಲ್ಲಿ 19 ಕೆ.ಜಿ ತೂಕದ ಸಿಲಿಂಡರ್ ಬೆಲೆ ₹1,818 ಆಗಿದೆ.

ಸತತ ಐದು ತಿಂಗಳಿಂದ ಸಿಲಿಂಡರ್ ದರ ಏರಿಕೆಯಾಗಿದೆ. ಒಟ್ಟು ₹172 ಹೆಚ್ಚಳವಾಗಿದೆ. ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರವು ಯಥಾಸ್ಥಿತಿಯಲ್ಲಿದೆ.

ವಿಮಾನ ಇಂಧನ ದರ ಏರಿಕೆ: ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ದರವು ₹1,318 (ಶೇ 1.45ರಷ್ಟು) ಹೆಚ್ಚಳವಾಗಿದೆ. ದೆಹಲಿಯಲ್ಲಿ ಪ್ರತಿ ಕಿಲೋಲೀಟರ್ (ಒಂದು ಸಾವಿರ ಲೀಟರ್) ₹91,856 ಇದೆ. ನವೆಂಬರ್‌ನಲ್ಲಿ ಶೇ 3.3ರಷ್ಟು ಇಂಧನ ದರ ಏರಿಕೆಯಾಗಿತ್ತು.

ಗಾಜಾ ಮೇಲೆ ಇಸ್ರೇಲ್ ದಾಳಿ: 15 ಮಂದಿ ಸಾವು

ಕೈರೊ (ರಾಯಿಟರ್ಸ್): ಗಾಜಾ ಮೇಲೆ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ 15 ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ.

ಇಸ್ರೇಲ್ ಪಡೆಗಳು ಜನವಸತಿ ಪ್ರದೇಶಗಳ ಮೇಲೆ ಬಾಂಬ್ ದಾಳಿಗಳನ್ನು ನಡೆಸಿವೆ. ಗಾಜಾದ ಉತ್ತರ ಭಾಗದ ಅಂಚಿನಲ್ಲಿರುವ ಮನೆಗಳನ್ನು ಸ್ಫೋಟಿಸಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ಸೇನೆಯ ವೈಮಾನಿಕ ದಾಳಿಯಿಂದ ನುಸಿರಾತ್ ಕ್ಯಾಂಪ್‌ನಲ್ಲಿರುವ ಮನೆಯೊಂದರಲ್ಲಿ ಆರು ಜನರು ಮತ್ತು ಗಾಜಾ ನಗರದ ಮನೆಯೊಂದರಲ್ಲಿ ಮೂವರು ಹತರಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ದಕ್ಷಿಣ ಗಾಜಾ ಪಟ್ಟಿಯ ಖಾನ್ ಯೂನಿಸ್ ನಗರದಲ್ಲಿನ ಟೆಂಟ್ ಶಿಬಿರಕ್ಕೆ ಕ್ಷಿಪಣಿ ಅಪ್ಪಳಿಸಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. ಈಜಿಪ್ಟ್ ಗಡಿ ಸಮೀಪವಿರುವ ರಫಾ ನಗರದಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ಇತರ ನಾಲ್ವರು ಹತರಾಗಿದ್ದಾರೆ ಎಂದು ವೈದ್ಯಾಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜಬಾಲಿಯಾ, ಬೆತ್ ಲಾಹಿಯಾ ಮತ್ತು ಬೆತ್ ಹನೌನ್‌ನ ಉತ್ತರ ಗಾಜಾ ಪ್ರದೇಶಗಳಲ್ಲಿ ಕಳೆದ ಅಕ್ಟೋಬರ್‌ನಿಂದ ಕಾರ್ಯಾಚರಣೆ ನಡೆಸುತ್ತಿರುವ ಇಸ್ರೇಲ್ ಪಡೆಗಳು ಮನೆಗಳನ್ನು ಸ್ಫೋಟಿಸಿವೆ ಎಂದು ಸ್ಥಳೀಯ ನಿವಾಸಿಗಳು ಹೇಳಿದ್ದಾರೆ.

ಚಿನ್ಮಯಿ ಕೃಷ್ಣದಾಸ್ ಜಾಮೀನು ಅರ್ಜಿ ವಿಚಾರಣೆ ನಾಳೆ

ಢಾಕಾ (ಪಿಟಿಐ): ದೇಶದ್ರೋಹದ ಆರೋಪದ ಮೇಲೆ ಕಳೆದ ವಾರ ಬಂಧಿಸಿರುವ ಹಿಂದೂ ನಾಯಕ ಚಿನ್ಮಯಿ ಕೃಷ್ಣದಾಸ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಬಾಂಗ್ಲಾದೇಶದ ನ್ಯಾಯಾಲಯವು ಡಿಸೆಂಬರ್ 3ರಂದು ನಡೆಸಲಿದೆ.

ಮೆಟ್ರೋಪಾಲಿಟನ್ ಸೆಷನ್ಸ್ ನ್ಯಾಯಾಧೀಶ ಮೊಹಮ್ಮದ್ ಸೈಫುಲ್ ಇಸ್ಲಾಂ ಅವರು ಮಂಗಳವಾರದ ವಿಚಾರಣೆ ನಡೆಸಲಿದ್ದಾರೆ ಎಂದು ಬಾಂಗ್ಲಾದೇಶದ ಸುದ್ದಿಮಾಧ್ಯಮ ‘ಬಿಡಿನ್ಯೂಸ್24 ಡಾಟ್ ಕಾಮ್’ ವರದಿ ಮಾಡಿದೆ.

ವಿಚಾರಣೆಯ ದಿನಾಂಕವನ್ನು ಈಗಾಗಲೇ ನಿಗದಿಪಡಿಸಲಾಗಿದೆ. ಆದರೆ ಬುಧವಾರ ಮತ್ತು ಗುರುವಾರ ವಕೀಲರು ಕಲಾಪ ಬಹಿಷ್ಕರಿಸಿ, ಕೆಲಸಕ್ಕೆ ಗೈರಾದ ಕಾರಣ ಈ ಪ್ರಕಟಣೆ ಹೊರಡಿಸುವುದು ವಿಳಂಬವಾಗಿದೆ ಎಂದು ಚಟ್ಟೋಗ್ರಾಮ ನ್ಯಾಯಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾಕಿಸ್ತಾನ: ಸತ್ತವರ ಸಂಖ್ಯೆ 130ಕ್ಕೆ ಏರಿಕೆ

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಖುರ್ರಂ ಜಿಲ್ಲೆಯಲ್ಲಿ ಸುನ್ನಿ ಮತ್ತು ಶಿಯಾ ಸಮುದಾಯಗಳ ನಡುವಣ ಸಂಘರ್ಷ ಮುಂದುವರಿದಿದ್ದು, ಶನಿವಾರ ಮತ್ತಿಬ್ಬರು ಮೃತಪಟ್ಟಿದ್ದಾರೆ.

ಕಳೆದ 10 ದಿನಗಳಲ್ಲಿ ಹಿಂಸಾಚಾರಕ್ಕೆ ಬಲಿಯಾದವರ ಸಂಖ್ಯೆ 130ಕ್ಕೆ ಏರಿಕೆಯಾಗಿದ್ದು, 170ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಲಿಝೈ ಮತ್ತು ಬಗಾನ್ ಬುಡಕಟ್ಟು ಸಮುದಾಯಗಳ ನಡುವಣ ಸಂಘರ್ಷ ನವೆಂಬರ್ 22ರಂದು ಆರಂಭಗೊಂಡಿತ್ತು. ಪ್ರಯಾಣಿಕರ ವಾಹನಗಳ ಮೇಲೆ ಶಸ್ತ್ರಸಜ್ಜಿತ ಗುಂಪೊಂದು ದಾಳಿ ನಡೆಸಿದ್ದು ಹಿಂಸಾಚಾರ ಆರಂಭವಾಗಲು ಕಾರಣ. ಈ ಘಟನೆಯಲ್ಲಿ 57 ಮಂದಿ ಮೃತಪಟ್ಟಿದ್ದರು.

ಬಗಾನ್ ಬಜಾರ್ ಪ್ರದೇಶದಲ್ಲಿ ಆರಂಭವಾದ ಹಿಂಸಾಚಾರ ಆ ಬಳಿಕ ಬಾಲಿಶ್ಕೆಲ್, ಖಾರ್, ಕಾಲಿ, ಜುಂಜ್ ಅಲಿಝೈ ಮತ್ತು ಮಕ್‌ಬಲ್ ಪ್ರದೇಶಗಳಿಗೆ ಹರಡಿದ್ದು, ಎರಡು ದಿನಗಳಲ್ಲಿ 37 ಮಂದಿ ಮೃತಪಟ್ಟಿದ್ದಾರೆ.

ಶಾಂತಿ ಸ್ಥಾಪಿಸುವುದಕ್ಕಾಗಿ ಎರಡೂ ಪಂಗಡಗಳ ನಡುವೆ 10 ದಿನಗಳ ‘ಕದನ ವಿರಾಮ’ ಒಪ್ಪಂದವನ್ನು ಮಾಡಲಾಗಿದೆಯಾದರೂ, ಹಿಂಸಾಚಾರ ಮುಂದುವರಿದಿದೆ.

ಎಫ್‌ಬಿಐ ಮುಖ್ಯಸ್ಥರಾಗಿ ಕಾಶ್ ಪಟೇಲ್ ನೇಮಕ



ವಾಷಿಂಗ್ಟನ್ (ಎಪಿ): ಭಾರತೀಯ ಅಮೆರಿಕನ್ ಕಾಶ್ ಪಟೇಲ್ ಅವರನ್ನು ಎಫ್‌ಬಿಐ ಮುಖ್ಯಸ್ಥರನ್ನಾಗಿ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇಮಕ ಮಾಡಿದ್ದಾರೆ.

ಸರ್ಕಾರದ ವಿರುದ್ಧ ನಡೆಸುವ ಒಳಸಂಚನ್ನು ಗ್ರಹಿಸಿ, ಅದರಿಂದ ಪಾರು ಮಾಡಲಿಕ್ಕಾಗಿ ತಮ್ಮ ಆಪ್ತನನ್ನೇ ಅಮೆರಿಕದ ತನಿಖಾ ಸಂಸ್ಥೆಯ ಮುಖ್ಯಸ್ಥರನ್ನಾಗಿ ಟ್ರಂಪ್ ನೇಮಕ ಮಾಡಿದ್ದಾರೆ ಎನ್ನಲಾಗಿದೆ.

ಸರ್ಕಾರದ ಕಾನೂನು ಜಾರಿ ಮತ್ತು ತನಿಖಾ ಸಂಸ್ಥೆಗಳಲ್ಲಿ ಆಮೂಲಾಗ್ರ ಬದಲಾವಣೆ ಬಯಸಿರುವ ಟ್ರಂಪ್, ತಮ್ಮ ಎದುರಾಳಿಗಳ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವ ಉದ್ದೇಶ ಹೊಂದಿದ್ದಾರೆ ಎನ್ನಲಾಗಿದೆ. ಇದಕ್ಕೆ ಪೂರಕವಾಗಿಯೇ ಪ್ರಮುಖ ಹುದ್ದೆಗಳಿಗೆ ನೇಮಕಾತಿ ನಡೆದಿದೆ ಎಂದು ವಿಶ್ಲೇಷಿಸಲಾಗಿದೆ.

‘ಸತ್ಯ, ಹೊಣೆಗಾರಿಕೆ ಮತ್ತು ಸಂವಿಧಾನದ ರಕ್ಷಕರಾಗಿರುವ ಪಟೇಲ್, ರಷ್ಯಾದ ವಂಚನೆಯನ್ನು ಬಹಿರಂಗಪಡಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ’ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಖಲೀದಾ ಜಿಯಾ ಪುತ್ರನ ಖುಲಾಸೆ

ಢಾಕಾ (ಪಿಟಿಐ): 2004ರಲ್ಲಿ ನಡೆದ ಗ್ರೆನೇಡ್ ದಾಳಿ ಪ್ರಕರಣದ ವಿಚಾರಣೆ ಎದುರಿಸುತ್ತಿದ್ದ ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಸೇರಿದಂತೆ ಎಲ್ಲರನ್ನೂ ಹೈಕೋರ್ಟ್ ಖುಲಾಸೆಗೊಳಿಸಿದೆ.

‘ವಿಚಾರಣಾ ನ್ಯಾಯಾಲಯದ ತೀರ್ಪನ್ನು ಹೈಕೋರ್ಟ್ ಭಾನುವಾರ ರದ್ದುಗೊಳಿಸಿದೆ’ ಎಂದು ಅಟಾರ್ನಿ ಜನರಲ್ ಕಚೇರಿಯ ವಕ್ತಾರರು ತಿಳಿಸಿದ್ದಾರೆ. 57 ವರ್ಷದ ತಾರಿಕ್ ಅವರು ಬಾಂಗ್ಲಾದೇಶ ನ್ಯಾಷನಲ್ ಪಾರ್ಟಿಯ (ಬಿಎನ್‌ಪಿ) ಹಂಗಾಮಿ ಮುಖ್ಯಸ್ಥರಾಗಿದ್ದು, ಈಗ ಲಂಡನ್‌ನಲ್ಲಿ ನೆಲಸಿದ್ದಾರೆ.

ನ್ಯಾಯಮೂರ್ತಿಗಳಾದ ಎ.ಕೆ.ಎಂ ಅಬ್ದುರ್ಝುಮಾನ್ ಮತ್ತು ಸೈಯದ್ ಇನಾಯತ್ ಹುಸೇನ್ ಅವರನ್ನೊಳಗೊಂಡ ಪೀಠವು, ವಿಚಾರಣಾ ನ್ಯಾಯಾಲದ ತೀರ್ಪನ್ನು ‘ಕಾನೂನುಬಾಹಿರ’ ಎಂದು ಘೋಷಿಸಿತು. ಎಲ್ಲ 49 ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ ಎಂದು ಪ್ರಕಟಿಸಿತು. ಪದಚ್ಯುತ ಪ್ರಧಾನಿ ಶೇಕ್ ಹಸೀನಾ ಅವರು ವಿರೋಧ ಪಕ್ಷದ ನಾಯಕಿಯಾಗಿದ್ದ ಅವಧಿಯಲ್ಲಿ 2004ರ ಆಗಸ್ಟ್ 21ರಂದು ಆಯೋಜಿಸಿದ್ದ ರ‍್ಯಾಲಿಯನ್ನು ಗುರಿಯಾಗಿಸಿ ಗ್ರೆನೇಡ್ ದಾಳಿ ನಡೆದಿತ್ತು. ಘಟನೆಯಲ್ಲಿ 24 ಮಂದಿ ಮೃತಪಟ್ಟು 300ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಢಾಕಾದ ನ್ಯಾಯಾಲಯವು 19 ಮಂದಿಗೆ ಗಲ್ಲು ಶಿಕ್ಷೆ ಮತ್ತು ತಾರಿಕ್ ಸೇರಿದಂತೆ ಇತರ 19 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಇನ್ನುಳಿದ 11 ಆರೋಪಿಗಳಿಗೆ ವಿವಿಧ ಅವಧಿಯ ಜೈಲು ಶಿಕ್ಷೆ ನೀಡಲಾಗಿತ್ತು.


ಫೆಬ್ರುವರಿಯಲ್ಲಿ ದೆಹಲಿ ವಿಧಾನಸಭಾ ಚುನಾವಣೆ: ಎಎಪಿ ಸಂಚಾಲಕ ಸ್ಪಷ್ಟನೆ

ಕಾಂಗ್ರೆಸ್ ಜತೆ ಮೈತ್ರಿ ಇಲ್ಲ: ಕೇಜ್ರಿವಾಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆ ಯಾವುದೇ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ದೆಹಲಿ ವಿಧಾನಸಭಾ ಚುನಾವಣೆಗೆ ಇನ್ನೆರಡು ತಿಂಗಳು ಇರುವಾಗ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಲೋಕಸಭಾ ಚುನಾವಣೆಯನ್ನು ಇವೆರಡು ಪಕ್ಷಗಳು ಜತೆಯಾಗಿ ಎದುರಿಸಿದ್ದವು. ಎಎಪಿಯು ನಾಲ್ಕು ಕ್ಷೇತ್ರಗಳಲ್ಲಿ ಹಾಗೂ ಕಾಂಗ್ರೆಸ್, ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಕಾಂಗ್ರೆಸ್–ಎಎಪಿ ಮೈತ್ರಿಗೆ ಎಲ್ಲ ಏಳು ಕ್ಷೇತ್ರಗಳಲ್ಲಿ ಸೋಲು ಎದುರಾಗಿತ್ತಾದರೂ, ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರವನ್ನು ತಗ್ಗಿಸಿತ್ತು. 'ದೆಹಲಿಯಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಇಲ್ಲ' ಎಂದು ಕೇಜ್ರಿವಾಲ್ ಅವರು ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.



2015 ಮತ್ತು 2020ರ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್, ಖಾತೆ ತೆರೆಯಲು ವಿಫಲವಾಗಿತ್ತು. ಎಎಪಿಯು ಈ ಎರಡು ಚುನಾವಣೆಗಳಲ್ಲಿ 70 ಸ್ಥಾನಗಳಲ್ಲಿ ಕ್ರಮವಾಗಿ 67 ಹಾಗೂ 62 ಅನ್ನು ಗೆದ್ದುಕೊಂಡಿತ್ತು. ಆದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮತ ಗಳಿಕೆ ವಿಚಾರದಲ್ಲಿ ಕಾಂಗ್ರೆಸ್, ಎಎಪಿಗಿಂತ ಉತ್ತಮ ಸಾಧನೆ ತೋರಿದೆ.

ಈ ರೀತಿಯ ಮೈತ್ರಿ ಲೋಕಸಭಾ ಚುನಾವಣೆಗೆ ಮಾತ್ರ ಸೀಮಿತವಾಗಿದೆ ಎಂದು ಎರಡೂ ಪಕ್ಷಗಳ ನಾಯಕರು ಹೇಳುತ್ತಾ ಬಂದಿದ್ದರೂ, ಹರಿಯಾಣ ವಿಧಾನಸಭಾ ಚುನಾವಣೆಯನ್ನು ಒಟ್ಟಾಗಿ ಎದುರಿಸುವ ಪ್ರಯತ್ನ ನಡೆಸಲಾಗಿತ್ತು. ಆದರೆ ಸೀಟು ಹಂಚಿಕೆಯಲ್ಲಿ ಒಮ್ಮತ ಮೂಡಿಬರದ ಕಾರಣ ಮೈತ್ರಿ ಸಾಧ್ಯವಾಗಿರಲಿಲ್ಲ.

ಹರಿಯಾಣ ವಿಧಾನಸಭೆಯ 90 ಸ್ಥಾನಗಳಲ್ಲಿ ಹತ್ತು ಸ್ಥಾನಗಳನ್ನು ತನಗೆ ಬಿಟ್ಟುಕೊಡಬೇಕು ಎಂದು ಎಎಪಿ ಪಟ್ಟು-ಹಿಡಿದಿತ್ತು. ಆದರೆ ಏಳು ಕ್ಷೇತ್ರಗಳನ್ನು ಮಾತ್ರ ಬಿಟ್ಟುಕೊಡುವುದಾಗಿ ಕಾಂಗ್ರೆಸ್ ಹೇಳಿತ್ತು. ಇದರಿಂದ ಮೈತ್ರಿ ಮಾತುಕತೆ ಮುರಿದುಬಿದ್ದಿತ್ತು.

ಕಾಂಗ್ರೆಸ್‌ನ ದೆಹಲಿ ಘಟಕವು ಎಎಪಿ ಸರ್ಕಾರದ ಆಡಳಿತ ವೈಖರಿಯನ್ನು ಟೀಕಿಸುತ್ತಾ ಬಂದಿದೆ. ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ ನ್ಯಾಯ ಯಾತ್ರೆ' ಮಾದರಿಯಲ್ಲಿ 'ದೆಹಲಿ ನ್ಯಾಯ ಯಾತ್ರೆ' ಆಯೋಜಿಸಿದೆ. ಈ ಯಾತ್ರೆ, ಡಿಸೆಂಬರ್ 4ರಂದು ಕೊನೆಗೊಳ್ಳಲಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ಈಚೆಗೆ ರಾಜೀನಾಮೆ ನೀಡಿದ ಕೇಜ್ರಿವಾಲ್ ಅವರು ಕಳೆದೆರಡು ತಿಂಗಳಿಂದ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ. ಎಎಪಿ ಸರ್ಕಾರದ ಸಾಧನೆಗಳು ಮತ್ತು ಪ್ರಮುಖ ಕಾರ್ಯಕ್ರಮಗಳನ್ನು ಎತ್ತಿ ತೋರಿಸುವ ಮೂಲಕ ರಾಜಧಾನಿಯಾದ್ಯಂತ ಪಾದಯಾತ್ರೆಗಳನ್ನು ನಡೆಸುತ್ತಿದ್ದಾರೆ.

ಮುಖ್ಯಾಂಶಗಳು

- ಲೋಕಸಭಾ ಚುನಾವಣೆಯನ್ನು ಜತೆಯಾಗಿ ಎದುರಿಸಿದ್ದ ಪಕ್ಷಗಳು
- ಕಳೆದ ಎರಡು ಚುನಾವಣೆಗಳಲ್ಲಿ ಖಾತೆ ತೆರೆಯಲು ಕಾಂಗ್ರೆಸ್ ವಿಫಲ
- ಹರಿಯಾಣ ಚುನಾವಣೆಯಲ್ಲೂ ಸಾಧ್ಯವಾಗದ ಮೈತ್ರಿ

ಕಾಂಗ್ರೆಸ್ ತಿರುಗೇಟು

ಕೇಜ್ರಿವಾಲ್ ಅವರ ಹೇಳಿಕೆಗೆ ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ ದೇವೇಂದ್ರ ಯಾದವ್ ತಿರುಗೇಟು ನೀಡಿದ್ದು, 'ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಜತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಈ ಮೊದಲೇ ನಿರ್ಧರಿಸಿದ್ದೆವು' ಎಂದಿದ್ದಾರೆ.

'ಎಎಪಿ ಜೊತೆ ಮೈತ್ರಿ ಮಾಡಿಕೊಂಡರೆ ಜನರ ಕೋಪಕ್ಕೆ ಒಳಗಾಗಬೇಕಾಗುತ್ತದೆ ಎಂಬುದು ನಮಗೆ ತಿಳಿದಿದೆ. ಲೋಕಸಭಾ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಿದ್ದರೆ ನಮಗೆ ಹೆಚ್ಚಿನ ಲಾಭ ಉಂಟಾಗುತ್ತಿತ್ತು. ಎಎಪಿ ಜತೆಗಿನ ಮೈತ್ರಿಯಿಂದಾಗಿ ನಮ್ಮ ಅಭ್ಯರ್ಥಿಗಳಿಗೆ ಹಿನ್ನಡೆ ಉಂಟಾಯಿತು' ಎಂದು ಹೇಳಿದ್ದಾರೆ.

ಮಹಾರಾಷ್ಟ್ರ ಸಿ.ಎಂ: ಬಿಜೆಪಿ ತೀರ್ಮಾನಕ್ಕೆ ಶಿಂದೆ ಬೆಂಬಲ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಹೊಸ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಬಿಜೆಪಿ ತೀರ್ಮಾನಿಸಲಿದೆ ಎಂದು ಮಹಾರಾಷ್ಟ್ರದ ಹಂಗಾಮಿ ಮುಖ್ಯಮಂತ್ರಿ ಏಕನಾಥ ಶಿಂದೆ ಭಾನುವಾರ ಹೇಳಿದ್ದಾರೆ. ಸರ್ಕಾರ ರಚನೆ ವಿಚಾರವಾಗಿ 'ಮಹಾಯುತಿ' ಮೈತ್ರಿಕೂಟದಲ್ಲಿ ಭಿನ್ನಮತ ಇಲ್ಲ ಎಂದು ಹೇಳಿದ್ದಾರೆ.

ಶಿಂದೆ ಅವರ ಪುತ್ರ ಶ್ರೀಕಾಂತ ಶಿಂದೆ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ಸಿಗಬಹುದು, ಶಿವಸೇನಾ ಪಕ್ಷಕ್ಕೆ ಗೃಹ ಖಾತೆಯನ್ನು ನೀಡಬಹುದು ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಇವೆ. 'ಮಹಾಯುತಿ' ಮೈತ್ರಿಕೂಟದ ಬಿಜೆಪಿ, ಎನ್‌ಸಿಪಿ ಮತ್ತು ಶಿವಸೇನಾ ಜೊತೆಯಾಗಿ ಸರ್ಕಾರ ರಚನೆ ಕಾರ್ಯವನ್ನು ಸಹಮತದೊಂದಿಗೆ ಪೂರ್ಣಗೊಳಿಸಲಿವೆ ಎಂದು ಏಕನಾಥ ಶಿಂದೆ ಹೇಳಿದ್ದಾರೆ.



ಏಕನಾಥ ಶಿಂದೆ

ಶಿವಸೇನಾ ಮತ್ತು ಎನ್‌ಸಿಪಿ ತಮ್ಮ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿವೆ. ಆದರೆ ಬಿಜೆಪಿಯ ಶಾಸಕಾಂಗ ಪಕ್ಷದ ಸಭೆ ಇನ್ನಷ್ಟೇ ನಡೆಯಬೇಕಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ದೇವೇಂದ್ರ ಫಡಣವೀಸ್ ಅವರ ಹೆಸರು ಮುಂಚೂಣಿಯಲ್ಲಿದೆ ಎಂದು ಬಿಜೆಪಿಯ ಮೂಲಗಳು ಹೇಳಿವೆ. ಬಿಜೆಪಿ ಶಾಸಕಾಂಗ ಪಕ್ಷದ ಸಭೆಯು ಡಿಸೆಂಬರ್ 3 ಅಥವಾ 4ರಂದು ನಡೆಯಬಹುದು ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

ಡಿಸೆಂಬರ್ 5ರಂದು ನಡೆಯುವ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಮಾತ್ರವೇ ಪ್ರಮಾಣವಚನ ಸ್ವೀಕರಿಸುವರೋ ಅಥವಾ ಸಚಿವರು ಕೂಡ ಪ್ರಮಾಣ ವಚನ ಸ್ವೀಕರಿಸುವರೋ ಎಂಬುದನ್ನು 'ಮಹಾಯುತಿ' ಮೈತ್ರಿಕೂಟದ ಪಕ್ಷಗಳು ಒಟ್ಟಾಗಿ ತೀರ್ಮಾನಿಸಲಿವೆ ಎಂದು ಗೊತ್ತಾಗಿದೆ.

ಮುಂಬೈಗೆ ತೆರಳುವ ಮೊದಲು ತಮ್ಮ ಗ್ರಾಮದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಏಕನಾಥ ಶಿಂದೆ, 'ಸಿ.ಎಂ ಹುದ್ದೆಗೆ ಸಂಬಂಧಿಸಿದಂತೆ ಬಿಜೆಪಿ ನಾಯಕತ್ವ ತೆಗೆದುಕೊಳ್ಳುವ ತೀರ್ಮಾನವನ್ನು ನಾನು ಒಪ್ಪುತ್ತೇನೆ, ಅದಕ್ಕೆ ನನ್ನ ಪೂರ್ಣ ಬೆಂಬಲ ಇರಲಿದೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ' ಎಂದರು.

'ನಾವು ಜನರ ಮಹತ್ವಾಕಾಂಕ್ಷೆಗಳನ್ನು ಈಡೇರಿಸುತ್ತೇವೆ. ನಮ್ಮ ನಡುವೆ ಭಿನ್ನಾಭಿಪ್ರಾಯ ಇಲ್ಲ. ನಾವು ಜನರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದು ಅವರು ಹೇಳಿದರು.

ತೆಲಂಗಾಣ: 7 ನಕ್ಸಲರ ಹತ್ಯೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಮುಲುಗು ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಪೊಲೀಸರು ಮತ್ತು ನಕ್ಸಲ್ ನಿಗ್ರಹ ಪಡೆ ಭಾನುವಾರ ನಡೆಸಿದ ಕಾರ್ಯಾಚರಣೆಯಲ್ಲಿ ಏಳು ನಕ್ಸಲರು ಹತರಾಗಿದ್ದಾರೆ.

ಹತ್ಯೆಯಾದ ನಕ್ಸಲರಲ್ಲಿ ನಿಷೇಧಿತ ಸಿಪಿಐ (ಮಾವೋವಾದಿ) ತೆಲಂಗಾಣ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿದ್ದ ಛತ್ತೀಸಗಢದ ಬಿಜಾಪುರ ಜಿಲ್ಲೆಯ ಚೇರಮಂಗಿಯ ಕುರ್ಸಮ್ ಮಂಗು ಅಲಿಯಾಸ್ ಭದ್ರು (35 ವರ್ಷ) ಮತ್ತು ಒಬ್ಬ ಮಹಿಳೆ ಸೇರಿದ್ದಾರೆ. ಭದ್ರು ಬಗ್ಗೆ ಸುಳಿವು ನೀಡಿದವರಿಗೆ ₹20 ಲಕ್ಷ ಬಹುಮಾನವನ್ನು ಘೋಷಿಸಲಾಗಿತ್ತು. ಮೃತರ ಪೈಕಿ 6 ಮಂದಿ ಛತ್ತೀಸಗಢದವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಟುರುನಗರಂನ ಚಾಲ್‌ಪಕ ಅರಣ್ಯ ಪ್ರದೇಶದಲ್ಲಿ ತೆಲಂಗಾಣ ಪೊಲೀಸ್ ಇಲಾಖೆಯ ಹೈಗ್ರೌಂಡ್ಸ್ ಮತ್ತು ನಕ್ಸಲ್ ನಿಗ್ರಹ ಪಡೆ ಜಂಟಿ ಶೋಧ ಕಾರ್ಯಾಚರಣೆ ಕೈಗೊಂಡಿತ್ತು. ನಕ್ಸಲರಿಗೆ ಶರಣಾಗುವಂತೆ ಸೂಚಿಸಲಾಯಿತು. ಆದರೆ, ಅವರು ಮನಬಂದಂತೆ ಗುಂಡಿನ ದಾಳಿ ನಡೆಸಿದರು. ಭದ್ರತಾ ಪಡೆಗಳು ನಡೆಸಿದ ಪ್ರತಿ ದಾಳಿಯಲ್ಲಿ ಏಳು ನಕ್ಸಲರು ಹತರಾದರು. ಉಳಿದವರು ಪರಾರಿಯಾಗಿದ್ದಾರೆ. ಘಟನಾ ಸ್ಥಳದಿಂದ ವಶಪಡಿಸಿಕೊಂಡ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳಲ್ಲಿ ಎರಡು ಎಕೆ 47 ರೈಫಲ್‌ಗಳು ಸೇರಿವೆ. ಶೋಧ ಮುಂದುವರಿದಿದೆ ಎಂದು ಮುಲುಗು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಪಿ. ಶಬರೀಶ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.



ಕಸರತ್ತು... ನೌಕಾ ಪಡೆ ದಿನದ ಅಂಗವಾಗಿ ಮುಂಬೈನಲ್ಲಿ ಭಾನುವಾರ ಮರೀನ್ ಕಮಾಂಡೋಗಳು ಕಸರತ್ತು ಪ್ರದರ್ಶಿಸಿದರು –ಪಿಟಿಐ ಚಿತ್ರ

'ಕೆಂಪು ಕೋಟೆ ಕೆಡವುತ್ತೀರಾ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮುಸ್ಲಿಮರು ನಿರ್ಮಿಸಿರುವ ಕೆಂಪು ಕೋಟೆ, ತಾಜ್ ಮಹಲ್ ಅನ್ನು ಹಿಂದುತ್ವ ಸಂಘಟನೆಗಳು ತಮ್ಮ ಗುರಿಯಾಗಿಸುವುದೇ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯ ಚಂದೌಸಿಯಲ್ಲಿನ ಶಾಹಿ ಜಾಮಾ ಮಸೀದಿ ಮತ್ತು ಅಜ್ಮೇರ್‌ದಲ್ಲಿರುವ ಸೂಫಿ ಸಂತ ಮೊಯಿನುದ್ದೀನ್ ಚಿಶ್ತಿ ದರ್ಗಾಗೆ ಸಂಬಂಧಿಸಿದಂತೆ ನಡೆದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

1991ರ ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಗೆ ತನ್ನ 'ದೃಢ ಬದ್ಧತೆ'ಯನ್ನು ಪುನರುಚ್ಚರಿಸಿದ್ದ ಕಾಂಗ್ರೆಸ್, ಬಿಜೆಪಿಯು ಈ ಕಾಯ್ದೆಯನ್ನು ಉಲ್ಲಂಘಿಸುತ್ತಿದೆ ಎಂದು ಆರೋಪಿಸಿತ್ತು.

ಭಾನುವಾರ ಆಯೋಜಿಸಿದ್ದ 'ಸಂವಿಧಾನ ಉಳಿಸಿ' ರ‍್ಯಾಲಿಯಲ್ಲಿ ಮಾತನಾಡಿದ ಖರ್ಗೆ, 'ಮುಸ್ಲಿಮರು ಕಟ್ಟಿದ ಕೆಂಪು ಕೋಟೆಯನ್ನು ಈಗ ಕೆಡವುತ್ತೀರಾ? ಕುತುಬ್ ಮಿನಾರ್ ಮತ್ತು ತಾಜ್ ಮಹಲ್‌ಅನ್ನು ಕೆಡವುತ್ತೀರಾ?



ಮಲ್ಲಿಕಾರ್ಜುನ ಖರ್ಗೆ

ಹೈದರಾಬಾದ್‌ಗೆ ಹೋಗಿ ಚಾರ್ ಮಿನಾರ್‌ಅನ್ನು ನೆಲಸಮಗೊಳಿಸುವಿರಾ? ಗೋಲ್ ಗುಂಬಜ್ ಅನ್ನು ಕೆಡವಲು ವಿಜಯಪುರಕ್ಕೆ ಹೋಗುತ್ತೀರಾ? ಎಂದು ಕೇಳಿದರು.

'ರಾಮ ಮಂದಿರ ನಿರ್ಮಿಸುವುದೇ ನಮ್ಮ ಗುರಿಯಾಗಿದೆ. ಎಲ್ಲ ಮಸೀದಿಗಳಲ್ಲಿ ಶಿವಲಿಂಗವನ್ನು ಹುಡುಕುವ ಅಗತ್ಯವಿಲ್ಲ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ 2022ರ ಜೂನ್‌ನಲ್ಲಿ ಹೇಳಿದ್ದರು. ಆದರೆ ಅವರ ಬೆಂಬಲಿಗರು ಇನ್ನೂ ಮಸೀದಿಗಳಲ್ಲಿ ಶಿವಲಿಂಗ ಹುಡುಕುತ್ತಿದ್ದಾರೆ. ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಕಾನೂನು ಹೇಳುತ್ತಿದೆಯಾದರೂ, ಇವರು ವಿವಾದ ಸೃಷ್ಟಿಸುತ್ತಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ.

ನಿವೃತ್ತ ಸಿಜೆಐ ಡಿ.ವೈ.ಚಂದ್ರಚೂಡ್ ಅವರು ಪೂಜಾ ಸ್ಥಳಗಳ ಕಾಯ್ದೆ ಕುರಿತು ನೀಡಿದ್ದ ಮೌಖಿಕ ಹೇಳಿಕೆಯನ್ನು ಮುಂದಿಟ್ಟುಕೊಂಡು ಹಿಂದುತ್ವ ಸಂಘಟನೆಗಳು ಇಂತಹ ಹೆಜ್ಜೆಯಿಟ್ಟಿವೆ ಎಂದು ದೂರಿದರು.

'ಅವರು ಈಗ ಎಲ್ಲೆಡೆ ಸಮೀಕ್ಷೆ ನಡೆಸುವುದನ್ನು ಬಯಸುತ್ತಾರೆ. ಈ ಹಿಂದೆ ದೇವಸ್ಥಾನ ಇತ್ತು ಎಂದು ಹೇಳಿ ಮಸೀದಿಗಳಿಗೆ ತೆರಳಿ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಒಂದಲ್ಲ, ಎರಡಲ್ಲ ಇಂತಹ ಹಲವಾರು ಬೇಡಿಕೆಗಳನ್ನು ಮುಂದಿಡಲಾಗುತ್ತಿದೆ' ಎಂದು ಹೇಳಿದರು. 2022ರ ಮೇ ನಲ್ಲಿ ಸುಪ್ರೀಂ ಕೋರ್ಟ್‌ನ ಅಂದಿನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಡಿ.ವೈ. ಚಂದ್ರಚೂಡ್ ಅವರು, '1991ರ ಕಾಯ್ದೆಯು ಯಾವುದೇ ಕಟ್ಟಡದ ಧಾರ್ಮಿಕ ಸ್ವರೂಪವನ್ನು ಖಚಿತಪಡಿಸಿಕೊಳ್ಳುವುದರಿಂದ ಒಬ್ಬ ವ್ಯಕ್ತಿಯನ್ನು ತಡೆಯುವುದಿಲ್ಲ' ಎಂದು ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ವಕ್ಫ್ ಆಸ್ತಿ ವಿವರ ಕೇಳಿರುವ ಜೆಪಿಸಿ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಯು (ಜೆಪಿಸಿ), ವಕ್ಫ್ ಮಂಡಳಿಗಳು ಹಕ್ಕು ಸಾಧಿಸಿರುವ ಆಸ್ತಿಗಳು ಮತ್ತು ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳ ಅನಧಿಕೃತ ಸ್ವಾಧೀನದಲ್ಲಿರುವ ವಕ್ಫ್ ಆಸ್ತಿಗಳ ವಿವರ ಸಲ್ಲಿಸುವಂತೆ ವಿವಿಧ ರಾಜ್ಯಗಳಿಗೆ ಸೂಚಿಸಿದೆ.

ರಾಜ್ಯ ಸರ್ಕಾರಗಳು ಅಥವಾ ಅವುಗಳ ಅಧಿಕೃತ ಸಂಸ್ಥೆಗಳ ಅನಧಿಕೃತ ವಶದಲ್ಲಿರುವ ವಕ್ಫ್ ಆಸ್ತಿಗಳ ಕುರಿತು ಸಾಚಾರ್ ಸಮಿತಿಯಲ್ಲಿ ಉಲ್ಲೇಖಿಸಿರುವ ಅಂಶಗಳ ಕುರಿತು ನವೀಕೃತ ಮಾಹಿತಿ ಪಡೆಯಲು ಸಂಸದೀಯ ಸಮಿತಿಯು ನಿರ್ಧರಿಸಿದೆ.

ಅಲ್ಲದೆ, ವಕ್ಫ್ ಕಾಯಿದೆಯ ಸೆಕ್ಷನ್ 40 ಅನ್ನು ಚಲಾಯಿಸಿ ವಕ್ಫ್ ಮಂಡಳಿಗಳು ಹಕ್ಕು ಸಾಧಿಸಿರುವ ಆಸ್ತಿಗಳ ವಿವರಗಳನ್ನು ರಾಜ್ಯಗಳಿಂದ ಸಮಿತಿ ಕೇಳಿದೆ. ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಮೂಲಕ ರಾಜ್ಯಗಳಿಂದ ಮಾಹಿತಿಯನ್ನು ಸಮಿತಿ ಸಂಗ್ರಹಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.2005-06ರ ಅವಧಿಯಲ್ಲಿ ವಿವಿಧ ರಾಜ್ಯಗಳ ವಕ್ಫ್ ಮಂಡಳಿಗಳು ಅನಧಿಕೃತ ಒತ್ತುವರಿ ಕುರಿತು ಸಾಚಾರ್ ಸಮಿತಿಗೆ ಮಾಹಿತಿ ನೀಡಿದ್ದವು.

ಒಳನುಸುಳುವಿಕೆ ತಡೆಗೆ ಎರಡು ತುಕಡಿ ನಿಯೋಜನೆ

ನವದೆಹಲಿ (ಪಿಟಿಐ): ಪಾಕಿಸ್ತಾನದ ಕಡೆಯಿಂದ ಉಗ್ರರ ಒಳನುಸುಳುವಿಕೆ ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯಲು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಇನ್ನೂ ಎರಡು ತುಕಡಿಗಳನ್ನು ಜಮ್ಮು ಪ್ರದೇಶದಲ್ಲಿ ನಿಯೋಜಿಸಿದೆ.

ಭಯೋತ್ಪಾದಕ ಚಟುವಟಿಕೆಗಳು ಈಚೆಗೆ ಹೆಚ್ಚುತ್ತಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ. ಈ ಹಿಂದೆ ಒಡಿಶಾದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸುತ್ತಿದ್ದ ಎರಡು ತುಕಡಿಗಳನ್ನು ಜುಲೈ ಮತ್ತು ಆಗಸ್ಟ್‌ನಲ್ಲಿ ವಾಪಸ್ ಕರೆಸಿಕೊಳ್ಳಲಾಗಿತ್ತು. ಈಗ ಅವನ್ನು ಜಮ್ಮುಗೆ ಕಳುಹಿಸಲಾಗಿದೆ.

ರಾಜ್ ಕುಂದ್ರಾಗೆ ಸಮನ್ಸ್



ಮುಂಬೈ (ಪಿಟಿಐ): ಅಶ್ಲೀಲ ಚಿತ್ರಗಳ ಹಂಚಿಕೆ ಪ್ರಕರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ನಟಿ ಶಿಲ್ಪಾ ಶೆಟ್ಟಿ ಅವರ ಪತಿ ಉದ್ಯಮಿ ರಾಜ್ ಕುಂದ್ರಾ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿದೆ.

ಸೋಮವಾರ (ಡಿ.2ರಂದು) ವಿಚಾರಣೆಗೆ ಹಾಜರಾಗುವಂತೆ ರಾಜ್ ಕುಂದ್ರಾಗೆ ಸೂಚಿಸಲಾಗಿದೆ. ಒಂದು ವೇಳೆ ಸೋಮವಾರ ಬರಲು ಸಾಧ್ಯವಾಗದಿದ್ದಲ್ಲಿ ಈ ವಾರದಲ್ಲಿ ಇನ್ನೊಂದು ದಿನ ಬರಲು ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರ ಪ್ರದೇಶದ ಕುಶಿನಗರದ ಉದ್ಯಮಿ ಸೇರಿದಂತೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಹಲವರಿಗೆ ಸಮನ್ಸ್ ನೀಡಲಾಗಿದೆ.

ರಾಜ್ ಕುಂದ್ರಾ ಮತ್ತು ಇತರರಿಗೆ ಸೇರಿದ ಸ್ಥಳಗಳಲ್ಲಿ ಮುಂಬೈ ಹಾಗೂ ಉತ್ತರ ಪ್ರದೇಶದಲ್ಲಿ ಇ.ಡಿ ಅಧಿಕಾರಿಗಳು ಈ ಹಿಂದೆ ಶೋಧ ಕಾರ್ಯಾಚರಣೆ ನಡೆಸಿದ್ದರು.

'ನಾಲ್ಕು ವರ್ಷಗಳಿಂದ ತನಿಖೆ ನಡೆಯುತ್ತಿದ್ದು, ತನಿಖೆಗೆ ನಾನು ಸಂಪೂರ್ಣವಾಗಿ ಸಹಕರಿಸುತ್ತಿದ್ದೇನೆ' ಎಂದು ರಾಜ್ ಕುಂದ್ರಾ ಶನಿವಾರ ಹೇಳಿದ್ದರು.

ಅಶ್ಲೀಲ ಚಿತ್ರಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಕುಂದ್ರಾ ಮತ್ತು ಇತರರ ವಿರುದ್ಧ ಮುಂಬೈ ಪೊಲೀಸರು ದಾಖಲಿಸಿದ್ದ ಎರಡು ಪ್ರಕರಣಗಳು ಮತ್ತು ದೋಷಾರೋಪ ಪಟ್ಟಿಯ ಆಧಾರದಲ್ಲಿ 2022ರ ಮೇನಲ್ಲಿ ಇ.ಡಿ ಪ್ರಕರಣ ದಾಖಲಿಸಿಕೊಂಡಿತ್ತು. ಪ್ರಕರಣಕ್ಕೆ ಸಂಬಂಧಿಸಿ ಬಂಧನಕ್ಕೊಳಗಾಗಿದ್ದ ಕುಂದ್ರಾ ಮತ್ತು ಇತರರು ಜಾಮೀನಿನ ಮೇಲೆ ಹೊರಗೆ ಬಂದಿದ್ದಾರೆ.

ಆರ್ಥಿಕತೆ: ಹೊಸ ಚಿಂತನೆ ಅಗತ್ಯ– ರಾಹುಲ್

ನವದೆಹಲಿ: 'ಭಾರತದ ಆರ್ಥಿಕತೆಯನ್ನು ಮುನ್ನಡೆಸಲು ಹೊಸ ಚಿಂತನೆಯ ಅಗತ್ಯವಿದ್ದು, ಉದ್ಯಮಕ್ಕೆ ಸಂಬಂಧಿಸಿದ ನೂತನ ನೀತಿಯು ಅದರ ಪ್ರಮುಖ ಭಾಗವಾಗಿರಬೇಕು' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ.



ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕ-ದಲ್ಲಿ ದೇಶದ ಆರ್ಥಿಕ ಬೆಳವಣಿಗೆ ಕುಂಠಿತವಾಗಿ, ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿರುವುದನ್ನು ಉಲ್ಲೇಖಿಸಿ ಅವರು ಈ ಹೇಳಿಕೆ ನೀಡಿದ್ದಾರೆ.

ಈ ಅವಧಿಯಲ್ಲಿ ದೇಶೀಯ ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯು ಶೇ 5.4ರಷ್ಟು ದಾಖಲಾಗಿದೆ ಎಂದು ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ತಿಳಿಸಿದೆ.

'ಬೆರಳೆಣಿಕೆಯಷ್ಟು ಶತಕೋಟ್ಯಧಿಪತಿಗಳಿಗೆ ಮಾತ್ರ ಪ್ರಯೋಜನ ನೀಡುವ ಆರ್ಥಿಕ ನೀತಿಯನ್ನು ಹೊಂದಿದರೆ, ಭಾರತದ ಆರ್ಥಿಕತೆಯ ಪ್ರಗತಿ ಸಾಧ್ಯವಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ. ರೈತರು, ಕಾರ್ಮಿಕರು, ಮಧ್ಯಮ ವರ್ಗದವರು ಮತ್ತು ಬಡವರು ವಿವಿಧ ರೀತಿಯ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ' ಎಂದು ರಾಹುಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮಥುರಾ, ಕಾಶಿ ವ್ಯಾಜ್ಯ: ವಿಚಾರಣೆ ತ್ವರಿತಗೊಳಿಸಿ'

ಮಥುರಾ (ಪಿಟಿಐ): 'ತ್ವರಿತ ನ್ಯಾಯಾಲಯಗಳ ಮೂಲಕ ಕಾಶಿ ವಿಶ್ವನಾಥ-ಜ್ಞಾನವಾಪಿ ಮಸೀದಿ ಹಾಗೂ ಶ್ರೀಕೃಷ್ಣ ಜನ್ಮಭೂಮಿ-ಈದ್ಗಾ ಮಸೀದಿಗೆ ಸಂಬಂಧಿಸಿದ ವ್ಯಾಜ್ಯಗಳ ವಿಚಾರಣೆ ನಡೆಸಬೇಕು' ಎಂದು ವಿವಿಧ ರಾಜ್ಯಗಳ 54 ಹಿಂದೂ ಸಂಘಟನೆಗಳು ಒತ್ತಾಯಿಸಿವೆ.

ವೃಂದಾವನದ 'ಹಿಂದೂ ಜನಜಾಗೃತಿ ಸಮಿತಿ'ಯು ಶನಿವಾರ ಮಥುರಾದಲ್ಲಿ ಸಮಾವೇಶವೊಂದನ್ನು ಆಯೋಜಿಸಿತ್ತು. 'ತ್ವರಿತ ನ್ಯಾಯಾಲಯ-ಗಳನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿ ಆನ್‌ಲೈನ್‌ನಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸಲಾಗುವುದು' ಎಂದು ಈ ಸಮಿತಿ ಘೋಷಿಸಿದೆ.

'ಅಕ್ರಮವಾಗಿ ಹಲಾಲ್ ಪ್ರಮಾಣ ಪತ್ರ ವಿತರಿಸುವುದನ್ನು ನಿಷೇಧಿಸಬೇಕು. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆಯಲು ಭಾರತ ಸರ್ಕಾರ ಮುಂದಾಗಬೇಕು' ಎನ್ನುವ ಆಗ್ರಹವನ್ನೂ ಈ ಸಮಾವೇಶದಲ್ಲಿ ಮಾಡಲಾಗಿದೆ.

ಉತ್ತರ ಪ್ರದೇಶ, ಪಂಜಾಬ್, ರಾಜಸ್ಥಾನ, ಮಧ್ಯ ಪ್ರದೇಶ, ಹರಿಯಾಣ, ಉತ್ತರಾಖಂಡ ಹಾಗೂ ಜಮ್ಮುವಿನ ಸುಮಾರು 54 ಹಿಂದೂ ಸಂಘಟನೆಗಳು ಸಮಾವೇಶದಲ್ಲಿ ಭಾಗವಹಿಸಿದ್ದವು.

ಸಂಭಲ್: ನ್ಯಾಯಾಂಗ ಆಯೋಗದ ಭೇಟಿ

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ನ್ಯಾಯಾಂಗ ಆಯೋಗದ ಸದಸ್ಯರು ಬಿಗಿ ಭದ್ರತೆಯ ನಡುವೆ ಶಾಹಿ ಜಾಮಾ ಮಸೀದಿ ಆವರಣ ಹಾಗೂ ಇತರ ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿದರು. ಕೋರ್ಟ್ ಆದೇಶದ ಅನುಸಾರ ಈ ಮಸೀದಿಯಲ್ಲಿ ಸಮೀಕ್ಷೆ ನಡೆಯಬೇಕಿದ್ದ ಸಂದರ್ಭದಲ್ಲಿ ನವೆಂಬರ್ 24ರಂದು ಹಿಂಸಾಚಾರ ನಡೆದಿತ್ತು.

ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಅರೋರ ಅವರು ಆಯೋಗದ ಮುಖ್ಯಸ್ಥರು. ನಿವೃತ್ತ ಐಪಿಎಸ್ ಅಧಿಕಾರಿ ಅರವಿಂದ ಕುಮಾರ್ ಜೈನ್ ಅವರೂ ಈ ಆಯೋಗದಲ್ಲಿದ್ದಾರೆ. ಆಯೋಗದ ಇನ್ನೊಬ್ಬ ಸದಸ್ಯರಾದ ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಮೋಹನ್ ಪ್ರಸಾದ್ ಅವರು ಭಾನುವಾರದ ಭೇಟಿ ಸಂದರ್ಭದಲ್ಲಿ ಹಾಜರಿರಲಿಲ್ಲ.

ಭೇಟಿಯ ಸಂದರ್ಭದಲ್ಲಿ ಆಯೋಗದ ಸದಸ್ಯರು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ. ಮೊರಾದಾಬಾದ್ ವಿಭಾಗೀಯ ಆಯುಕ್ತ ಆಂಜನೇಯ ಕುಮಾರ್ ಸಿಂಗ್, ಡಿಐಜಿ ಮುನಿರಾಜ್ ಜಿ., ಸಂಭಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಜೇಂದ್ರ ಪೆನ್ಸಿಯಾ ಮತ್ತು ಎಸ್‌ಪಿ ಕಿಶನ್ ಕುಮಾರ್ ಅವರು ಆಯೋಗದ ಸದಸ್ಯರ ಜೊತೆ ಇದ್ದರು.



ನ್ಯಾಯಾಂಗ ಆಯೋಗದ ಸದಸ್ಯರು ಸಂಭಲ್‌ನ ಶಾಹಿ ಜಾಮಾ ಮಸೀದಿಗೆ ಬಿಗಿ ಭದ್ರತೆಯಲ್ಲಿ ಭಾನುವಾರ ಭೇಟಿ ನೀಡಿದರು –ಪಿಟಿಐ ಚಿತ್ರ

'ಆಯೋಗದ ಸದಸ್ಯರ ಪ್ರಾಥಮಿಕ ಉದ್ದೇಶ ಸ್ಥಳವನ್ನು ಪರಿಶೀಲಿಸುವುದಾಗಿತ್ತು. ಹಿಂಸಾಚಾರ ನಡೆದ ಸ್ಥಳಗಳಿಗೆ ಅವರು ಭೇಟಿ ನೀಡಿದ್ದಾರೆ. ಸ್ಥಳ ಪರಿಶೀಲಿಸಿದ್ದಾರೆ, ಕಟ್ಟಡವನ್ನು ಪರಿಶೀಲಿಸಿದ್ದಾರೆ' ಎಂದು ಆಂಜನೇಯ ಕುಮಾರ್ ಸಿಂಗ್ ಹೇಳಿದ್ದಾರೆ. ಆಯೋಗದ ಸದಸ್ಯರು ಮತ್ತೆ ಇಲ್ಲಿಗೆ ಭೇಟಿ ನೀಡಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. 'ಇಲ್ಲಿನ ಪರಿಸ್ಥಿತಿಯು ನಿಧಾನವಾಗಿ ಸಹಜವಾಗುತ್ತಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದೆ. ಜಿಲ್ಲಾ ಮ್ಯಾ-ಜಿಸ್ಟ್ರೇಟರ ಆದೇಶವು ಡಿಸೆಂಬರ್ 10ರವರೆಗೆ ಮುಂದುವರಿಯಲಿದೆ. ಅನಂತರ ಯಾವುದೇ ನಿರ್ಬಂಧ ಇರುವುದಿಲ್ಲ. ಹಿಂಸಾಚಾರದಲ್ಲಿ ಭಾಗಿಯಾದ 400 ಜನರನ್ನು ಗುರುತಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಆಯೋಗದ ಸದಸ್ಯರು ಮಸೀದಿ ಪ್ರದೇಶವನ್ನು 15 ನಿಮಿಷ ಪರಿಶೀಲಿಸಿ-ದ್ದಾರೆ ಎಂದು ಶಾಹಿ ಜಾಮಾ ಮಸೀದಿಯ ಇಮಾಮ್ ಆಗಿರುವ ಅಫ್ತಾಬ್ ಹುಸೇನ್ ವಾರ್ಸಿ ಹೇಳಿದ್ದಾರೆ. ಸಂಭಲ್‌ನಲ್ಲಿ ನವೆಂಬರ್ 24ರಂದು ನಡೆದ ಹಿಂಸಾಚಾರ ಪೂರ್ವಯೋಜಿತವೇ ಎಂಬುದನ್ನು ಆಯೋಗವು ತನಿಖೆಗೆ ಒಳಪಡಿಸಬೇಕಿದೆ.

ಮಸೀದಿ: ನಿಯಂತ್ರಣ ಕೋರಿ ಎಎಸ್‌ಐ ಮನವಿ

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ಮೊಘಲ್ ಅವಧಿಯ ಶಾಹಿ ಜಾಮಾ ಮಸೀದಿಯು ಸಂರಕ್ಷಿತ ಕಟ್ಟಡವಾಗಿರುವ ಕಾರಣ ಅದರ ನಿಯಂತ್ರಣವು ತನ್ನ ಕೈಯಲ್ಲಿ ಇರಬೇಕು ಎಂದು ಕೋರಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ನ್ಯಾಯಾಲಯಕ್ಕೆ ಪ್ರತಿಕ್ರಿಯೆ ಸಲ್ಲಿಸಿದೆ. ಈ ಮಸೀದಿಯ ಸಮೀಕ್ಷೆ ನಡೆಸಲು ನ್ಯಾಯಾಲಯವು ಒಪ್ಪಿಗೆ ನೀಡಿತ್ತು.

ಪ್ರತಿವಾದವನ್ನು ಕೋರ್ಟ್‌ಗೆ ಶುಕ್ರವಾರ ಸಲ್ಲಿಸಲಾಗಿದೆ ಎಂದು ಎಎಸ್‌ಐ ಪರ ವಕೀಲ ವಿಷ್ಣು ಶರ್ಮ ಅವರು ತಿಳಿಸಿದ್ದಾರೆ. ಸ್ಥಳದ ಸಮೀಕ್ಷೆ ನಡೆಸಲು ಮಸೀದಿಯ ನಿರ್ವಹಣಾ ಸಮಿತಿಯ ಸದಸ್ಯರಿಂದ ಹಾಗೂ ಸ್ಥಳೀಯರಿಂದ ಪ್ರತಿರೋಧ ವ್ಯಕ್ತವಾಯಿತು ಎಂಬುದನ್ನು ಅದರಲ್ಲಿ ಹೇಳಲಾಗಿದೆ ಎಂದು ಶರ್ಮ ತಿಳಿಸಿದ್ದಾರೆ.

ಮಸೀದಿ ನಿರ್ವಹಣಾ ಸಮಿತಿಯು ಮಸೀದಿಯ ಮೆಟ್ಟಿಲುಗಳಿಗೆ ಉಕ್ಕಿನ ಅಡ್ಡಕಂಬಿಗಳನ್ನು 2018ರಲ್ಲಿ ಅನುಮತಿ ಪಡೆಯದೆ ಅಳವಡಿಸಿದ್ದ ಕಾರಣಕ್ಕೆ ಎಫ್‌ಐಆರ್ ದಾಖಲಿಸಿದ್ದುದನ್ನು ಕೂಡ ಎಎಸ್‌ಐ ವಿವರಿಸಿದೆ.

ಮಸೀದಿಯನ್ನು 1920ರಲ್ಲಿ ಸಂರಕ್ಷಿತ ಸ್ಮಾರಕ ಎಂದು ಘೋಷಿಸಲಾಗಿದೆ. ಇದು ಎಎಸ್‌ಐ ನಿಗಾದಲ್ಲಿದೆ. ಹೀಗಾಗಿ ಎಎಸ್‌ಐ ನಿಯಮಗಳಿಗೆ ಅನುಗುಣವಾಗಿ ಇಲ್ಲಿಗೆ ಸಾರ್ವಜನಿಕರಿಗೆ ಭೇಟಿಗೆ ಅವಕಾಶ ಇರಬೇಕು ಎಂದು ಶರ್ಮ ಪ್ರತಿಪಾದಿಸಿದ್ದಾರೆ.

ನಿರ್ವಹಣಾ ಸಮಿತಿಯು ಅನುಮತಿ ಇಲ್ಲದೆ ಮಸೀದಿಯಲ್ಲಿ ಬದಲಾವಣೆಗಳನ್ನು ತರುವುದು ಕಾನೂನಿಗೆ ವಿರುದ್ಧ, ಅಂತಹ ನಡೆಗಳಿಗೆ ನಿರ್ಬಂಧ ಇರಬೇಕು ಎಂದು ಎಎಸ್‌ಐ ಹೇಳಿದೆ. ಎಎಸ್‌ಐ ವಾದವನ್ನು ಕೋರ್ಟ್ ಮುಂದಿನ ದಿನಗಳಲ್ಲಿ ಪರಿಗಣನೆಗೆ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಶಾಹಿ ಜಾಮಾ ಮಸೀದಿಯಲ್ಲಿ ಕೋರ್ಟ್ ಆದೇಶಕ್ಕೆ ಅನುಗುಣವಾಗಿ ಸಮೀಕ್ಷೆ ನಡೆಸಲು ಅಧಿಕಾರಿಗಳು ತೆರಳಿದ್ದಾಗ, ನವೆಂಬರ್ 24ರಂದು ಹಿಂಸಾಚಾರ ನಡೆದಿತ್ತು. ಇದರಲ್ಲಿ ನಾಲ್ಕು ಮಂದಿ ಪ್ರಾಣ ಕಳೆದುಕೊಂಡಿದ್ದರು.

ಮಸೀದಿ ಇರುವ ಸ್ಥಳದಲ್ಲಿ ಒಂದು ಕಾಲದಲ್ಲಿ ಹರಿಹರ ದೇವಸ್ಥಾನ ಇತ್ತು ಎಂಬ ಅರ್ಜಿಗೆ ಸಂಬಂಧಿಸಿದಂತೆ ಸಮೀಕ್ಷೆಗೆ ಆದೇಶ ನೀಡಲಾಗಿತ್ತು.

'ಕಾನೂನುಬಾಹಿರ ಚಟುವಟಿಕೆ ನಿಲ್ಲಿಸಿ'

ನವದೆಹಲಿ (ಪಿಟಿಐ): ಅಜ್ಮೇರ್ ದರ್ಗಾದಲ್ಲಿ ಸಮೀಕ್ಷೆ ನಡೆಸುವಂತೆ ನ್ಯಾಯಾಲಯ ಆದೇಶಿಸಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ನಿವೃತ್ತ ಅಧಿಕಾರಿಗಳು ಹಾಗೂ ರಾಜತಾಂತ್ರಿಕರು, ಇಂತಹ 'ಕಾನೂನುಬಾಹಿರ ಮತ್ತು ವಿನಾಶಕಾರಿ' ಚಟುವಟಿಕೆಗಳನ್ನು ನಿಲ್ಲಿಸಲು ಕೂಡಲೇ ಮಧ್ಯ ಪ್ರವೇಶಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ದೆಹಲಿಯ ನಿವೃತ್ತ ಲೆಫ್ಟಿನೆಂಟ್ ಗವರ್ನರ್ ನಜೀಬ್ ಜಂಗ್ ಸೇರಿದಂತೆ 5ಕ್ಕೂ ಹೆಚ್ಚು ನಿವೃತ್ತ ಉನ್ನತ ಅಧಿಕಾರಿಗಳು ಹಾಗೂ ರಾಜತಾಂತ್ರಿಕರು ಈ ಕುರಿತು ನ.29ರಂದು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ಈಗ ನಡೆಯುತ್ತಿರುವ 'ಕಾನೂನುಬಾಹಿರ ಮತ್ತು ವಿನಾಶಕಾರಿ' ಚಟುವಟಿಕೆಗಳು ಭಾರತದ ನಾಗರಿಕ ಪರಂಪರೆ ಮೇಲಿನ ಸೈದ್ಧಾಂತಿಕ ಹಲ್ಲೆಯಾಗಿದೆ. ಇದು ದೇಶದ ಆದರ್ಶ-ವೆನಿಸಿದ ಒಳಗೊಳ್ಳುವಿಕೆ ತತ್ವ ವಿರುದ್ಧದ ವಿಕೃತಿ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ಶಿವ ಮುಖರ್ಜಿ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಷಿ, ವೈಸ್ ಚೀಫ್ ಆರ್ಮಿ ಸ್ಟಾಫ್(ನಿವೃತ್ತ) ಲೆಫ್ಟಿನೆಂಟ್ ಜನರಲ್ ಜಮೀರುದ್ದೀನ್ ಶಾ, ಆರ್‌ಬಿಐನ ಮಾಜಿ ಡೆಪ್ಯುಟಿ ಗವರ್ನರ್ ರವಿ ವಿ.ಗುಪ್ತ ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

'12ನೇ ಶತಮಾನದ ಸೂಫಿ ಸಂತ ಖ್ವಾಜಾ ಮೊಯಿನುದ್ದೀನ್ ಚಿಶ್ತಿ ಅವರ ವಾರ್ಷಿಕ ಉರುಸು ವೇಳೆ ನೀವೂ ದರ್ಗಾಕ್ಕೆ ಚಾದರ್ ಕಳುಹಿಸಿ, ಶಾಂತಿ ಮತ್ತು ಸೌಹಾರ್ದದ ಸಂದೇಶ ರವಾನಿಸಿದ್ದೀರಿ. ಈಗ, ಈ 'ಕಾನೂನುಬಾಹಿರ ಮತ್ತು ವಿನಾಶಕಾರಿ ಚಟುವಟಿಕೆಗಳನ್ನು' ನೀವು ಮಾತ್ರ ತಡೆಯಬಲ್ಲಿರಿ' ಎಂದು ಪತ್ರದಲ್ಲಿ ವಿವರಿಸಲಾಗಿದೆ.

'ಹಿಂದೂಗಳನ್ನು ಪ್ರತಿನಿಧಿಸುತ್ತೇವೆ ಎಂದು ಹೇಳಿಕೊಳ್ಳುತ್ತಿರುವ ಕೆಲವು ಗುಂಪುಗಳು ಮಧ್ಯಯುಗದ ಮಸೀದಿ ಮತ್ತು ದರ್ಗಾಗಳನ್ನು ದೇವಾಲಯಗಳ ಮೇಲೆ ನಿರ್ಮಿಸಲಾಗಿದೆ ಎಂದು ಸಾಬೀತು ಮಾಡಲು ಮುಂದಾಗಿವೆ. ಇದಕ್ಕಾಗಿ, ಅವು ಸಮೀಕ್ಷೆ ನಡೆಸಬೇಕು ಎಂಬ ಬೇಡಿಕೆ ಮಂಡಿಸುತ್ತಿವೆ' ಎಂದೂ ವಿವರಿಸಲಾಗಿದೆ.

'ಇಂತಹ ವಿಚಾರಗಳಲ್ಲಿ ಪೂಜಾ ಸ್ಥಳಗಳ ಕಾಯ್ದೆಯಲ್ಲಿನ ಅವಕಾಶಗಳು ಸ್ಪಷ್ಟವಾಗಿವೆ. ಆದಾಗ್ಯೂ, ಇಂತಹ ಬೇಡಿಕೆ ಕುರಿತು ಅರ್ಜಿಗಳು ಸಲ್ಲಿಕೆಯಾದಾಗ ನ್ಯಾಯಾಲಯಗಳು ಅನಗತ್ಯ ಉತ್ಸಾಹ ಮತ್ತು ಅವಸರದಿಂದ ಪ್ರತಿಕ್ರಿಯೆ ನೀಡುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇತಿಹಾಸ ತಿರುಚಲಾಗಿದೆ ಉಪ ರಾಷ್ಟ್ರಪತಿ ಧನಕರ್

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶಕ್ಕೆ ಸ್ವಾತಂತ್ರ್ಯವನ್ನು ತಾವು ತಂದೆವು ಎಂದು ಹೇಳುವ ಕೆಲವರ ಏಕಸ್ವಾಮ್ಯವನ್ನು ಸೃಷ್ಟಿಸುವ ಉದ್ದೇಶದಿಂದ ಭಾರತದ ಇತಿಹಾಸವನ್ನು ತಿರುಚಲಾಗಿದೆ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಭಾನುವಾರ ಆರೋಪಿಸಿದರು.

ರಾಜಾ ಮಹೇಂದ್ರ ಪ್ರತಾಪ್ ಅವರ 138ನೆಯ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಧನಕರ್ ಅವರು, ದೇಶದ ಸ್ವಾತಂತ್ರ್ಯದ ಅಡಿಪಾಯದ ಬಗ್ಗೆ ಜನರಿಗೆ ಬಹಳ ಭಿನ್ನವಾಗಿ ಹೇಳಿಕೊಡಲಾಗುತ್ತಿದೆ ಎಂದು ಹೇಳಿದರು.

'ಇತಿಹಾಸ ಪುಸ್ತಕಗಳು ನಮ್ಮ ಹೀರೊಗಳಿಗೆ ಅನ್ಯಾಯ ಎಸಗಿವೆ. ನಮ್ಮ ಇತಿಹಾಸವನ್ನು ತಿರುಚಲಾಗಿದೆ. ಇದು ನಮ್ಮ ಆತ್ಮಸಾಕ್ಷಿಯ ಮೇಲಿನ ಅಸಹನೀಯ ನೋವು. ನಮ್ಮ ಹೃದಯ ಮತ್ತು ಆತ್ಮ ಈ ಹೊರೆಯನ್ನು ಹೊತ್ತುಕೊಂಡಿವೆ. ನಾವು ಬಹಳ ದೊಡ್ಡ ಬದಲಾವಣೆಯನ್ನು ತರಬೇಕಿದೆ' ಎಂದರು. ಪ್ರತಾಪ್ ಅವರಿಗೆ ಸಿಗಬೇಕಿದ್ದ ಸ್ಥಾನವನ್ನು ಇತಿಹಾಸವು ಅವರಿಗೆ ನೀಡಿಲ್ಲ ಎಂದರು.



ಮಾನಗಢ ಹತ್ಯಾಕಾಂಡದಂತಹ ಘಟನೆಗಳನ್ನು ಇತಿಹಾಸದಲ್ಲಿ ಸರಿಯಾಗಿ ದಾಖಲಿಸದೆ ಇರುವುದಕ್ಕೆ ಕಾರಣ ಏನು ಎಂದು ಪ್ರಶ್ನಿಸಿದ ಧನಕರ್ ಅವರು, ಬಿ.ಆರ್. ಅಂಬೇಡ್ಕರ್ ಅವರಿಗೆ 1990ರಲ್ಲಿ 'ಭಾರತ ರತ್ನ' ಪುರಸ್ಕಾರ ನೀಡಿ ಅವರನ್ನು ಗುರುತಿಸುವ ಕೆಲಸ ಮಾಡಲಾಯಿತು ಎಂದು ನೆನಪಿಸಿದರು.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್

'ಬೇಕಾದ ಸತ್ಯ ಎತ್ತಿಕೊಳ್ಳುವ ರಾಜಕೀಯ'

ನವದೆಹಲಿ (ಪಿಟಿಐ): ಇತಿಹಾಸ ಸಂಕೀರ್ಣವಾಗಿದೆ, ಇಂದಿನ ರಾಜಕೀಯವು ತನಗೆ ಬೇಕಿರುವ ಸಂಗತಿಗಳನ್ನು ಮಾತ್ರ ಎತ್ತಿಕೊಳ್ಳುವ ಕೆಲಸ ಮಾಡುತ್ತಿದೆ, ಟಿಪ್ಪು ಸುಲ್ತಾನ್ ವಿಚಾರದಲ್ಲಿಯೂ ಗಣನೀಯ ಹಂತದವರೆಗೆ ಇದೇ ಆಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಟಿಪ್ಪು ವಿಚಾರದಲ್ಲಿ 'ನಿರ್ದಿಷ್ಟವಾದ ಸಂಕಥನ'ವನ್ನು ಹಲವು ವರ್ಷಗಳಿಂದ ಮುಂದಕ್ಕೆ ತರಲಾಗುತ್ತಿದೆ ಎಂದು ಅವರು 'ಟಿಪ್ಪು ಸುಲ್ತಾನ್: ದಿ ಸಾಗಾ ಆಫ್ ಮೈಸೋರ್ ಇಂಟರೆಗ್ನಂ 1761–1799' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಇತಿಹಾಸಕಾರ ವಿಕ್ರಂ ಸಂಪತ್ ಈ ಪುಸ್ತಕ ಬರೆದಿದ್ದಾರೆ.



ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮಾತನಾಡಿದರು –ಪಿಟಿಐ ಚಿತ್ರ

'ಕಳೆದ ದಶಕದಲ್ಲಿ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಯು ಪರ್ಯಾಯ ದೃಷ್ಟಿಕೋನಗಳು ಹಾಗೂ ಸಮತೋಲಿತ ನೋಟದ ಬೆಳವಣಿಗೆಗೆ ಉತ್ತೇಜನ ನೀಡಿದೆ' ಎಂದು ಜೈಶಂಕರ್ ಹೇಳಿದ್ದಾರೆ. 'ನಾವು ಈಗ ಮತಬ್ಯಾಂಕ್ ವ್ಯವಸ್ಥೆಯ ಬಂಧಿಗಳಲ್ಲ. ಅಪ್ರಿಯವಾದ ಸತ್ಯಗಳನ್ನು ಹೇಳುವುದು ರಾಜಕೀಯವಾಗಿ ತಪ್ಪು ಕೆಲಸ ಕೂಡ ಅಲ್ಲ' ಎಂದಿದ್ದಾರೆ.

ಭಾರತದ ಇತಿಹಾಸದಲ್ಲಿ ಟಿಪ್ಪು ಸುಲ್ತಾನ್ ಬಹಳ ಸಂಕೀರ್ಣ ವ್ಯಕ್ತಿ ಎಂದು ಹೇಳಿದ್ದಾರೆ. 'ಒಂದೆಡೆ, ಭಾರತದಲ್ಲಿ ಬ್ರಿಟಿಷ್ ವಸಾಹತು ನಿಯಂತ್ರಣಕ್ಕೆ ಪ್ರತಿರೋಧ ಒಡ್ಡಿದ್ದ ಖ್ಯಾತಿ ಟಿಪ್ಪುಗೆ ಇದೆ... ಅದೇ ಸಂದರ್ಭದಲ್ಲಿ, ಇಂದಿಗೂ ಮೈಸೂರು, ಕೊಡಗು, ಮಲಬಾರ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕೆಲವರಲ್ಲಿ ಟಿಪ್ಪುವಿನ ಹೆಸರು ಪ್ರತಿಕೂಲವಾದ ಭಾವನೆ ಮೂಡಲು ಕಾರಣವಾಗುತ್ತದೆ' ಎಂದಿದ್ದಾರೆ.

ಸಮಕಾಲೀನ ಇತಿಹಾಸ ಬರಹಗಳು ರಾಷ್ಟ್ರಮಟ್ಟದಲ್ಲಿ ಮೊದಲಿನ ಆಯಾಮವನ್ನು ಕೇಂದ್ರೀಕರಿಸಿಕೊಂಡಿವೆ. ಎರಡನೆಯ ಆಯಾಮಕ್ಕೆ ಅವು ಕೊಡಬೇಕಿರುವ ಮಹತ್ವ ಕೊಟ್ಟಿಲ್ಲ. ಇದು ಆಕಸ್ಮಿಕವಾಗಿ ಹೀಗಾಗಿದ್ದಲ್ಲ ಎಂದು ಜೈಶಂಕರ್ ವಿವರಿಸಿದ್ದಾರೆ.

ವಿಕ್ರಂ ಸಂಪತ್ ಅವರು ಬರೆದಿರುವ ಪುಸ್ತಕವು, ಓದುಗರಿಗೆ ತಮ್ಮದೇ ಆದ ತೀರ್ಮಾನಕ್ಕೆ ಬರಲು ಟಿಪ್ಪುವಿನ ಬಗ್ಗೆ ಸತ್ಯ ಸಂಗತಿಗಳನ್ನು ತಿಳಿಸುತ್ತದೆ ಎಂದಿದ್ದಾರೆ.

ಟಿಪ್ಪು ಸುಲ್ತಾನ್ ಬಹಳ ತೀವ್ರವಾಗಿ ಬ್ರಿಟಿಷರ ವಿರುದ್ಧವಾಗಿ ಇದ್ದ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಬ್ರಿಟಿಷ್ ವಿರೋಧವು ಎಷ್ಟರಮಟ್ಟಿಗೆ ಆಂತರ್ಯದಿಂದ ಮೂಡಿದ್ದಾಗಿತ್ತು ಹಾಗೂ ತನ್ನ ಸ್ಥಳೀಯ ವಿರೋಧಿಗಳ ಜೊತೆ ಬ್ರಿಟಿಷರು ಕೈಜೋಡಿಸಿದ್ದ ಕಾರಣಕ್ಕಾಗಿ ಎಷ್ಟರಮಟ್ಟಿಗೆ ಬ್ರಿಟಿಷ್ ವಿರೋಧ ಆತನಲ್ಲಿ ಮೂಡಿತ್ತು ಎಂಬುದನ್ನು ಪ್ರತ್ಯೇಕಿಸಿ ಹೇಳುವುದು ಬಹಳ ಕಷ್ಟದ ಕೆಲಸ ಎಂದು ಜೈಶಂಕರ್ ಹೇಳಿದ್ದಾರೆ.

ಇವಿಎಂ ಹ್ಯಾಕ್: ಆಯೋಗ ದೂರು

ನವದೆಹಲಿ (ಪಿಟಿಐ): ಯಂತ್ರದ ತರಂಗಾಂತರಗಳನ್ನು ಪ್ರತ್ಯೇಕಿಸಿ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ತಾನು ಹ್ಯಾಕ್ ಮಾಡಬಲ್ಲೆ ಎಂದು ಹೇಳಿದ್ದ ವ್ಯಕ್ತಿಯೊಬ್ಬರ ವಿರುದ್ಧ ಚುನಾವಣಾ ಆಯೋಗವು ಮುಂಬೈ ಸೈಬರ್ ಪೊಲೀಸರಿಗೆ ದೂರು ನೀಡಿದೆ.

ಇವಿಎಂ ಹ್ಯಾಕ್ ವಿಚಾರವಾಗಿ ಸೈಯದ್ ಶುಜಾ ಹೆಸರಿನ ವ್ಯಕ್ತಿಯು ನೀಡಿರುವ ಹೇಳಿಕೆಗಳು ತಪ್ಪು ಮತ್ತು ಆಧಾರರಹಿತ ಎಂದು ಮಹಾರಾಷ್ಟ್ರದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಸಲ್ಲಿಸಿರುವ ದೂರಿನಲ್ಲಿ ಹೇಳಲಾಗಿದೆ.

ಇವಿಎಂಗಳನ್ನು ತಾನು ಹ್ಯಾಕ್ ಮಾಡಬಲ್ಲೆ ಎಂದು ವ್ಯಕ್ತಿಯೊಬ್ಬರು ಹೇಳಿರುವ ವಿಡಿಯೊ ಒಂದನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಲವರು ಹಂಚಿಕೊಂಡ ನಂತರ ಆಯೋಗವು ದೂರು ನೀಡಿದೆ.

ಹ್ಯಾಕ್ ಮಾಡುವುದಾಗಿ ಹೇಳಿರುವ ವ್ಯಕ್ತಿಯ ಹೆಸರು ಸೈಯದ್ ಶುಜಾ ಎಂದು ಆಯೋಗದ ಅಧಿಕಾರಿಗಳು ಹೇಳಿದ್ದಾರೆ.

ಇದೇ ಬಗೆಯ ಹೇಳಿಕೆಗಳನ್ನು ನೀಡಿದ್ದಕ್ಕಾಗಿ ಶುಜಾ ವಿರುದ್ಧ ದೂರು ದಾಖಲಿಸಲು ಆಯೋಗವು 2019ರಲ್ಲಿಯೂ ಸೂಚನೆ ನೀಡಿತ್ತು. ಶುಜಾ ಬೇರೊಂದು ದೇಶದಲ್ಲಿ ಅಡಗಿದ್ದಾರೆ ಎಂದು ಆಯೋಗದ ಅಧಿಕಾರಿಗಳು ಹೇಳಿದ್ದಾರೆ.

ಪ್ರಕರಣದ ಬಗ್ಗೆ ದೆಹಲಿ ಮತ್ತು ಮುಂಬೈ ಪೊಲೀಸರು ತನಿಖೆ ನಡೆಸುತ್ತಿದ್ದಾರೆ, ಇಂತಹ ವ್ಯಕ್ತಿಗಳ ಜೊತೆ ಸಂಪರ್ಕದಲ್ಲಿ ಇರುವ ಅಥವಾ ಇಂತಹ ದುರುದ್ದೇಶದ ಕೃತ್ಯಗಳಲ್ಲಿ ಭಾಗಿಯಾಗಿರುವ ಭಾರತದ ಯಾವುದೇ ವ್ಯಕ್ತಿಯನ್ನು ಗುರುತಿಸಿ, ಬಂಧಿಸಲು ಕ್ರಮ ತೆಗೆದುಕೊಳ್ಳ-ಲಾಗುವುದು ಎಂದು ಆಯೋಗದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಿಂಧು, ಲಕ್ಷ್ಯಗೆ ಸಿಂಗಲ್ಸ್ ಕಿರೀಟ

ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್: ಭಾರತಕ್ಕೆ ಮೂರು ಪ್ರಶಸ್ತಿ

ಲಖನೌ (ಪಿಟಿಐ): ಅಗ್ರ ಶ್ರೇಯಾಂಕದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಪಾರಮ್ಯ ಮೆರೆದು ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾನುವಾರ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಮಹಿಳೆಯರ ಡಬಲ್ಸ್ ಪ್ರಶಸ್ತಿ ಗೆಲ್ಲುವ ಮೂಲಕ ಟೂರ್ನಿಯಲ್ಲಿ ಆತಿಥೇಯರ ಸಂಭ್ರಮ ಹೆಚ್ಚಿಸಿದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆಯಾಗಿರುವ ಸಿಂಧು 21-14, 21-16ರಿಂದ ವಿಶ್ವ ಕ್ರಮಾಂಕದಲ್ಲಿ 119ನೇ ಸ್ಥಾನದಲ್ಲಿರುವ ಚೀನಾ ಆಟಗಾರ್ತಿ ವು ಲುವೊ ಯು ಅವರನ್ನು ಹಿಮ್ಮೆಟ್ಟಿಸಿ ಮೂರನೇ ಬಾರಿ ಇಲ್ಲಿ ಚಾಂಪಿಯನ್ ಆದರು.

ಈ ಹಿಂದೆ ಹೈದರಾಬಾದ್‌ನ ಆಟಗಾರ್ತಿ 2017 ಮತ್ತು 2022ರಲ್ಲಿ ಇಲ್ಲಿ ವಿಜೇತರಾಗಿದ್ದರು. ವಿಶ್ವ ಕ್ರಮಾಂಕದಲ್ಲಿ ಪ್ರಸ್ತುತ 18ನೇ ಕ್ರಮಾಂಕದಲ್ಲಿರುವ ಸಿಂಧು ಎರಡು ವರ್ಷಗಳಿಗೂ ಹೆಚ್ಚು ಸಮಯದಿಂದ ಯಾವುದೇ ಪ್ರಶಸ್ತಿ ಗೆದ್ದಿರಲಿಲ್ಲ. 2022ರ ಸಿಂಗಪುರ ಓಪನ್ ಟೂರ್ನಿಯಲ್ಲಿ ಕೊನೆಯ ಬಾರಿ ಅವರು ಸಿಂಗಲ್ಸ್ ಚಾಂಪಿಯನ್ ಆಗಿದ್ದರು.

ಮೊದಲ ಗೇಮ್‌ನಲ್ಲಿ 8-5 ಮುನ್ನಡೆ ಸಾಧಿಸಿದ ಸಿಂಧು, ಎದುರಾಳಿಯಿದ ಕೆಲಮಟ್ಟಿಗೆ ಪ್ರತಿರೋಧ ಎದುರಿಸಿದರು. ಮುನ್ನಡೆ ಒಂದು ಹಂತದಲ್ಲಿ 11-9ಕ್ಕೆ ಇಳಿದಿತ್ತು. ಆದರೆ ಕೆಲವು ರ್‍ಯಾಲಿಗಳ ಮೂಲಕ ಅವರು ಪಂದ್ಯದ ಮೇಲೆ ಹಿಡಿತ ಸಾಧಿಸಿದರು.

ಎರಡನೇ ಗೇಮ್‌ನಲ್ಲಿ ಎಡಗೈ ಆಟಗಾರ್ತಿಯು ಕೆಲವು ಕರಾರುವಾಕ್ 'ಡ್ರಾಪ್' ಶಾಟ್‌ಗಳ ಹಾಕಿ ಪ್ರತಿರೋಧ ತೋರಿದರಲ್ಲದೇ 11-10ರಲ್ಲಿ ಒಂದು ಪಾಯಿಂಟ್ ಮುನ್ನಡೆ ಪಡೆದಿದ್ದರು. ಆದರೆ, ಬ್ರೇಕ್ ನಂತರ ಸಿಂಧು ಚೇತರಿಸಿಕೊಂಡು ಎದುರಾಳಿ ಎಸಗಿದ ತಪ್ಪುಗಳ ಲಾಭ ಪಡೆಯತೊಡಗಿದರು. 15-11ರಲ್ಲಿ ಲೀಡ್ ಪಡೆದ ಅವರು ನಂತರ ಹಿಂದೆ ಬೀಳಲಿಲ್ಲ.

ಸೇನ್‌ಗೆ ಸುಲಭ ಗೆಲುವು: ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ, 2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಸೇನ್ 21-6, 21-7 ರಿಂದ ಸಿಂಗಪುರದ ಜಿಯಾ ಹೆಂಗ್ ಜೇಸನ್ ಟೆ ಅವರನ್ನು ಸದೆಬಡಿದರು.

ಪಂದ್ಯದುದ್ದಕ್ಕೂ ಅವರು ಅಧಿಕಾಯುತವಾಗಿ ಆಡಿದರು.



ಪದಕ ಗೆದ್ದ ಸಂತಸದಲ್ಲಿ ಸಿಂಧು



ಲಕ್ಷ್ಯಸೇನ್ ಪದಕದೊಂದಿಗೆ

ಟ್ರೀಸಾ-ಗಾಯತ್ರಿ ಮಹಿಳಾ ಡಬಲ್ಸ್ ಚಾಂಪಿಯನ್

ಎರಡನೇ ಶ್ರೇಯಾಂಕದ ಟ್ರೀಸಾ ಜೋಳಿ-ಗಾಯತ್ರಿ ಗೋಪಿಚಂದ್ 21-18, 21-11 ರಿಂದ ಚೀನಾದ ಬಾವೊ ಲಿ ಜಿಂಗ್- ಲಿ ಕ್ವಿಯಾನ್ ಜೋಡಿಯನ್ನು ಸೋಲಿಸುವ ಮೂಲಕ ತಮ್ಮ ಮೊದಲ ಬಾರಿ ಸೂಪರ್ 300 ಮಟ್ಟದ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಈ ಟೂರ್ನಿಯ ಇತಿಹಾಸದಲ್ಲಿ ಮಹಿಳಾ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ಮೊದಲ ಜೋಡಿ ಎಂಬ ಗೌರವವೂ ಟ್ರೀಸಾ-ಗಾಯತ್ರಿ ಪಾಲಾಯಿತು. 2022ರಲ್ಲಿ ಇವರಿಬ್ಬರು ರನ್ನರ್ ಅಪ್ ಆಗಿದ್ದರು. ಈ ಬಾರಿ ಉತ್ತಮ ಪ್ರದರ್ಶನ ನೀಡಿ ಒಂದು ಹೆಜ್ಜೆ ಮುಂದಿಟ್ಟರು.

ಪುರುಷರ ಡಬಲ್ಸ್ ಫೈನಲ್‌ನಲ್ಲಿ ಭಾರತದ ಪೃಥ್ವಿ ಕೃಷ್ಣಮೂರ್ತಿ- ಸಾಯಿಪ್ರತೀಕ್ ಕೆ. ಜೋಡಿ ವೀರೋಚಿತ ಹೋರಾಟ ಪ್ರದರ್ಶಿಸಿದರೂ, 14-21, 21-19, 17-21ರಲ್ಲಿ ಚೀನಾದ ಹುವಾಂಗ್ ಡಿ- ಲಿಯು ಯಾಂಗ್ ಜೋಡಿಗೆ ಮಣಿಯಿತು. ಈ ಪಂದ್ಯ 71 ನಿಮಿಷ ನಡೆಯಿತು.

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಐದನೇ ಶ್ರೇಯಾಂಕದ ತನಿಶಾ ಕ್ರಾಸ್ಟೊ- ಧ್ರುವ್ ಕಪಿಲಾ ಜೋಡಿ ಕೂಡ ಮೂರು ಗೇಮ್‌ಗಳ ಹೋರಾಟದಲ್ಲಿ ಮಣಿಯಿತು. ಥಾಯ್ಲೆಂಡ್‌ನ ದೇಚಾಪೊಲ್ ಪುವಾರನುಕ್ರೊ- ಸುಪಿಸ್ಸರ ಪೇವಸಂಪ್ರ್ ಜೋಡಿ 18-21, 21-14, 21-8 ರಿಂದ ಭಾರತದ ಜೋಡಿಯನ್ನು ಹಿಮ್ಮೆಟ್ಟಿಸಿತು.



ಪದಕದೊಂದಿಗೆ ಸಂಭ್ರಮಿಸಿದ ಗಾಯತ್ರಿ ಮತ್ತು ಟ್ರೀಸಾ

ಅಧಿಕಾರ ಸ್ವೀಕಾರ • ಚಾಂಪಿಯನ್ಸ್ ಟ್ರೋಫಿ ಸುಗಮವಾಗಿ ನಡೆಸುವ ಸವಾಲು

ಐಸಿಸಿ ಚುಕ್ಕಾಣಿ ಹಿಡಿದ ಜಯ್ ಶಾ

ದುಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಿರ್ಗಮಿತ ಕಾರ್ಯದರ್ಶಿ ಜಯ್ ಶಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ನ ಅಧ್ಯಕ್ಷರಾಗಿ ಭಾನುವಾರ ಅಧಿಕಾರ ವಹಿಸಿಕೊಂಡರು. ಚಾಂಪಿಯನ್ಸ್ ಟ್ರೋಫಿ ಸುತ್ತ ಕವಿದಿರುವ ಗೊಂದಲಗಳನ್ನು ಪರಿಹರಿಸುವುದು, ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್‌ನ ಸೇರ್ಪಡೆ ಅವರ ಮುಂದಿರುವ ಪ್ರಮುಖ ಗುರಿಯಾಗಿದೆ.

36 ವರ್ಷ ವಯಸ್ಸಿನ ಶಾ ಅವರು ಐದು ವರ್ಷ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿಯಾಗಿದ್ದರು. ಅವರು ಐಸಿಸಿ ಅಧ್ಯಕ್ಷ ಹುದ್ದೆಗೇರಿದ ಭಾರತದ ಐದನೇ ಮತ್ತು ಅತ್ಯಂತ ಕಿರಿಯ ವಯಸ್ಸಿನ ವ್ಯಕ್ತಿಯಾಗಿದ್ದಾರೆ. ಅವರು ಐಸಿಸಿ ಮಂಡಳಿ ನಿರ್ದೇಶಕರ ಸರ್ವಾನುಮತದ ಆಯ್ಕೆಯಾಗಿದ್ದರು.

ಜಯ್ ಶಾ, ನ್ಯೂಜಿಲೆಂಡ್‌ನ ಅಟಾರ್ನಿ ಗ್ರೆಗ್ ಬಾರ್ಕ್ಲೆ ಅವರ ಉತ್ತರಾಧಿಕಾರಿಯಾಗಿದ್ದಾರೆ. ಮೂರನೇ ಅವಧಿಗೆ ಮುಂದುವರಿಯಲು ಬಾರ್ಕ್ಲೆ ಆಸಕ್ತಿ ತೋರಿರಲಿಲ್ಲ.

ಶಾ ಅವರಿಗಿಂತ ಮೊದಲು ಉದ್ಯಮಿ ದಿವಂಗತ ಜಗಮೋಹನ್ ದಾಲ್ಮಿಯಾ, ರಾಜಕಾರಣಿ ಶರದ್ ಪವಾರ್, ವಕೀಲ ಶಶಾಂಕ್ ಮನೋಹರ್, ಉದ್ಯಮಿ ಎನ್.ಶ್ರೀನಿವಾಸನ್ ಅವರು ಐಸಿಸಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಭಾರತೀಯರಾಗಿದ್ದಾರೆ.

ಗೃಹ ಸಚಿವ ಅಮಿತ್ ಶಾ ಪುತ್ರರಾದ ಜಯ್ ಶಾ ಅವರಿಗೆ ಎದುರಾಗಿದ್ದ ದೊಡ್ಡ ಸಮಸ್ಯೆ ಹೆಚ್ಚುಕಮ್ಮಿ ಬಗೆಹರಿದಿದೆ. ಮುಂದಿನ ವರ್ಷ ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯಬೇಕಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ನಿರಾತಂಕವಾಗಿ ನಡೆಯುವಂತೆ ಅವರು ನೋಡಿಕೊಳ್ಳಬೇಕಾಗಿದೆ.

ಸದ್ಯ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಹೈಬ್ರಿಡ್ ಮಾದರಿ ಒಪ್ಪಿಕೊಳ್ಳಲು ನಿರ್ಧರಿಸಿದೆ. ಹೀಗಾಗಿ ಭಾರತ ತಂಡವು ಪಾಕ್ ವಿರುದ್ಧದ ಪಂದ್ಯವೂ ಸೇರಿದಂತೆ ತನ್ನ ಎಲ್ಲ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಇದೇ ರೀತಿ 2031ರವರೆಗೆ ಭಾರತವು ಒಂಟಿ ಅಥವಾ ಒಂಟಿಯಾಗಿ ನಡೆಸುವ ಟೂರ್ನಿಗಳಿಗೂ ಇದೇ ರೀತಿಯ ಹೈಬ್ರಿಡ್ ವ್ಯವಸ್ಥೆ ತನಗೂ ಏರ್ಪಡಿಸಬೇಕೆಂದು ಪಾಕಿಸ್ತಾನ ಚೌಕಾಸಿ ನಡೆಸಿದೆ.

ಪಾಕಿಸ್ತಾನಕ್ಕೆ ತೆರಳಲು ಭಾರತ ತಂಡ ಈ ಮೊದಲೇ ನಿರಾಕರಿಸಿದೆ. ಕೇಂದ್ರ ಸರ್ಕಾರದಿಂದಲೂ ಈ ಪ್ರವಾಸಕ್ಕೆ ಅನುಮತಿ ದೊರಕಿಲ್ಲ.

ಮೊದಲ ಅವಧಿಗೆ ಆದ್ಯತೆಗಳನ್ನು ಪಟ್ಟಿ ಮಾಡಿರುವ ಶಾ, 2028ರ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆಗೆ ಒತ್ತು ನೀಡುವುದಾಗಿ ಹೇಳಿದ್ದಾರೆ. ಮಹಿಳಾ ಕ್ರಿಕೆಟ್ ಬೆಳವಣಿಗೆಯ ವೇಗ ಹೆಚ್ಚಿಸುವುದೂ ಅವರ ಆದ್ಯತೆಯಲ್ಲಿದೆ.

'ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಯುತ್ತಿರುವಂತೆ, ಕ್ರಿಕೆಟ್ ಆಟವನ್ನು ಈ ಕ್ರೀಡೆಗೆ ಸೇರಿಸಲು ಮತ್ತು ವಿಶ್ವದೆಲ್ಲೆಡೆ ಅಭಿಮಾನಿಗಳನ್ನು ಆಟದಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ ಬಂದಿದೆ' ಎಂದು ಶಾ ಹೇಳಿದ್ದಾರೆ.

'ಜಾಗತಿಕವಾಗಿ ಕ್ರಿಕೆಟ್ ಬೆಳೆಯಲು ಹೆಚ್ಚಿನ ಅವಕಾಶಗಳಿವೆ. ಐಸಿಸಿ ತಂಡದ ಜೊತೆ ಮತ್ತು ಸದಸ್ಯ ರಾಷ್ಟ್ರಗಳ ಜೊತೆಗೆ ನಿಕಟವಾಗಿ ಕಾರ್ಯನಿರ್ವಹಿಸಿ ಈ ಆಟವನ್ನು ಹೊಸ ಎತ್ತರಕ್ಕೆ ತಲುಪಿಸಲು ಕಾತುರನಾಗಿದ್ದೇನೆ' ಎಂದೂ ಶಾ ಹೇಳಿದ್ದಾರೆ.

ಶಾ ನಡೆದು ಬಂದ ಹಾದಿ...

- ಜನನ: 22 ಸೆಪ್ಟೆಂಬರ್ 1988
- ವೃತ್ತಿ: ಉದ್ಯಮಿ, ಕ್ರಿಕೆಟ್ ಆಡಳಿತಗಾರ
- 2009ರಿಂದ ಅಹಮದಾಬಾದ್‌ನ ಸೆಂಟ್ರಲ್ ಬೋರ್ಡ್ ಆಫ್ ಕ್ರಿಕೆಟ್‌ನ ಕಾರ್ಯಕಾರಿ ಮಂಡಳಿ ಸದಸ್ಯ
- 2013ರಲ್ಲಿ ಗುಜರಾತ್ ಕ್ರಿಕೆಟ್ ಸಂಸ್ಥೆಯಲ್ಲಿ ಜಂಟಿ ಕಾರ್ಯದರ್ಶಿ
- ಅಮಿತ್ ಶಾ ಅವರು ಗುಜರಾತ್ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದ ವೇಳೆ ಅಹಮದಾಬಾದ್‌ನಲ್ಲಿ ನರೇಂದ್ರ ಮೋದಿ ಸ್ಟೇಡಿಯಂ ನಿರ್ಮಾಣ ಮೇಲ್ವಿಚಾರಣೆ
- 2015ರಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಹಣಕಾಸು ಮತ್ತು ಮಾರುಕಟ್ಟೆ ಸಮಿತಿ ಸದಸ್ಯ
- 2019ರಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ, 2022ರ ಅಕ್ಟೋಬರ್‌ನಲ್ಲಿ ಮರು ಆಯ್ಕೆ
- 2021ರ ಜನವರಿ 30ರಿಂದ ಏಷ್ಯನ್ ಕ್ರಿಕೆಟ್ ಸಮಿತಿ (ಎಸಿಸಿ) ಅಧ್ಯಕ್ಷ, 2024 ಜನವರಿಯಲ್ಲಿ ಮರು ಆಯ್ಕೆ
- 2022 ಏಪ್ರಿಲ್‌ನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಸದಸ್ಯ ಪ್ರತಿನಿಧಿ, ಅದೇ ವರ್ಷ ನವೆಂಬರ್‌ನಲ್ಲಿ ಹಣಕಾಸು ಮತ್ತು ವಾಣಿಜ್ಯ ವ್ಯವಹಾರಗಳ ಮುಖ್ಯಸ್ಥ
- 2024 ಡಿಸೆಂಬರ್ 1ರಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಚುಕ್ಕಾಣಿ



ಜಯ್ ಶಾ

ಐಸಿಸಿಯಲ್ಲಿ ಭಾರತದ ಪ್ರತಿನಿಧಿ; ತಣಿಯದ ಕುತೂಹಲ

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮುಂದಿನ ಕಾರ್ಯದರ್ಶಿ ಯಾರಾಗಾಲಿದ್ದಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಐಸಿಸಿ ಮಂಡಳಿಯಲ್ಲಿ ಭಾರತವನ್ನು ಬಿಸಿಸಿಐ ಹಾಲಿ ಅಧ್ಯಕ್ಷ ರೋಜರ್ ಬಿನ್ನಿ ಅಥವಾ ಉಪಾಧ್ಯಕ್ಷ ರಾಜೀವ್ ಶುಕ್ಲಾ ಇವರಲ್ಲಿ ಒಬ್ಬರು ಪ್ರತಿನಿಧಿಸುವುದು ಬಹುತೇಕ ಖಚಿತವಾಗಿದೆ.

ಬಿನ್ನಿ ನಿರ್ದೇಶಕರಾದಲ್ಲಿ ಶುಕ್ಲಾ ಅವರು ಪರ್ಯಾಯ ನಿರ್ದೇಶಕರಾಗಲಿದ್ದಾರೆ. ಶುಕ್ಲಾ ಅವರು ಭಾರತದ ಪ್ರತಿನಿಧಿಯಾಗಿ ಬಡ್ತಿ ಪಡೆದರೆ, ಅರುಣ್ ಧುಮಾಲ್ ಸಹ ಪ್ರತಿನಿಧಿಯಾಗಬಹುದು. ಬಿಸಿಸಿಐ ಮುಂದಿನ ಕಾರ್ಯದರ್ಶಿ ಸ್ಥಾನಕ್ಕೆ ಚರ್ಚೆಯಾಗಿರುವ 2-3 ಹೆಸರುಗಳಲ್ಲಿ ಧುಮಾಲ್ ಅವರ ಹೆಸರೂ ಒಳಗೊಂಡಿದೆ. ಖಜಾಂಚಿ ಆಶಿಷ್ ಶೆಲ್ಲಾರ್ ಮತ್ತು ಜಂಟಿ ಕಾರ್ಯದರ್ಶಿ ದೇವಜಿತ್ ಲೋನ್ ಸೈಕಿಯಾ ಅವರ ಹೆಸರೂ ಈ ಹುದ್ದೆಗೆ ಬಲವಾಗಿ ಕೇಳಿಬಂದಿದೆ.

ಬೌಲರ್‌ಗಳ ಸಾಂಘಿಕ ದಾಳಿ, ಪಾಂಡೆ ಮಿಂಚು

ಕರ್ನಾಟಕಕ್ಕೆ ಮಣಿದ ತಮಿಳುನಾಡು

ಇಂದೋರ್: ಬೌಲರ್‌ಗಳ ಸಾಂಘಿಕ ದಾಳಿ ಮತ್ತು ಮನೀಷ್ ಪಾಂಡೆ ಅವರ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ ತಂಡವು ಭಾನುವಾರ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಏಳು ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತು.


ಈ ಗೆಲುವಿನೊಂದಿಗೆ ಮಯಂಕ್ ಅಗರವಾಲ್ ಬಳಗವು ನಾಕೌಟ್ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ಕರ್ನಾಟಕ ಆಡಿರುವ ಐದು ಪಂದ್ಯಗಳಲ್ಲಿ ಮೂರನ್ನು ಗೆದ್ದು, 12 ಅಂಕದೊಂದಿಗೆ 'ಬಿ' ಗುಂಪಿನಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿದೆ. ಸೌರಾಷ್ಟ್ರ, ಗುಜರಾತ್ ಮತ್ತು ಬರೋಡಾ ತಲಾ 16 ಅಂಕಗಳೊಂದಿಗೆ ಮೊದಲ ಮೂರು ಸ್ಥಾನದಲ್ಲಿವೆ. ತಮಿಳುನಾಡು ಆರನೇ ಸ್ಥಾನಕ್ಕೆ ಕುಸಿದಿದೆ.

ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ತಮಿಳುನಾಡಿನ ಬ್ಯಾಟರ್‌ಗಳನ್ನು ಕರ್ನಾಟಕದ ಬೌಲರ್‌ಗಳಾದ ವಿ.ಕೌಶಿಕ್ (10ಕ್ಕೆ 3), ವಿದ್ಯಾಧರ ಪಾಟೀಲ (20ಕ್ಕೆ 2) ಮತ್ತು ಮನೋಜ್ ಭಾಂಡಗೆ (19ಕ್ಕೆ 3) ಅವರು ಕಾಡಿದರು. ಹೀಗಾಗಿ, ಎದುರಾಳಿ ತಂಡವು 20 ಓವರ್‌ಗಳಲ್ಲಿ 90 ರನ್‌ಗೆ ಕುಸಿಯಿತು. 24 ರನ್ ಗಳಿಸಿದ ವರುಣ್ ಚಕ್ರವರ್ತಿ, ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಗುರಿಯನ್ನು ಬೆನ್ನತ್ತಿದ ಕರ್ನಾಟಕ ತಂಡಕ್ಕೆ ಮನೀಷ್ ಪಾಂಡೆ (42; 29ಎ) ಮತ್ತು ಮಯಂಕ್ (30;27ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಹೀಗಾಗಿ, ತಂಡವು 11.3 ಓವರ್‌ಗಳಲ್ಲಿ 3 ವಿಕೆಟ್‌ಗೆ 93 ರನ್ ಗಳಿಸಿ ಗೆಲುವು ಸಾಧಿಸಿತು.

ಕರ್ನಾಟಕ ತಂಡವು ಮಂಗಳವಾರ ಬರೋಡಾವನ್ನು ಎದುರಿಸಲಿದೆ.

ಸ್ಕೋರುಗಳು: ತಮಿಳುನಾಡು: 20 ಓವರುಗಳಲ್ಲಿ 90 (ವರುಣ್ ಚಕ್ರವರ್ತಿ 24; ವಾಸುಕಿ ಕೌಶಿಕ್ 10ಕ್ಕೆ3, ವಿದ್ಯಾಧರ ಪಾಟೀಲ 20ಕ್ಕೆ2, ವಿಜಯಕುಮಾರ್ ವೈಶಾಖ 27ಕ್ಕೆ1, ಶ್ರೇಯಸ್ ಗೋಪಾಲ್ 14ಕ್ಕೆ1, ಮನೋಜ್ ಭಾಂಡಗೆ 19ಕ್ಕೆ3); ಕರ್ನಾಟಕ: 11.3 ಓವರುಗಳಲ್ಲಿ 3 ವಿಕೆಟ್‌ಗೆ 93 (ಮನೀಷ್ ಪಾಂಡೆ 42, ಮಯಂಕ್ ಅಗರವಾಲ್ 30; ಗುರುಜಪನೀತ್ ಸಿಂಗ್ 15ಕ್ಕೆ2, ವರುಣ್ ಚಕ್ರವರ್ತಿ 24ಕ್ಕೆ1). ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್ ಜಯ, 4 ಅಂಕ. ಪಂದ್ಯದ ಆಟಗಾರ: ಮನೀಷ್ ಪಾಂಡೆ



ಮನೀಷ್ ಪಾಂಡೆ

ಸೈಯದ್ ಮುಷ್ತಾಕ್ ಅಲಿ ಟೂರ್ನಿಗೆ ಸೂರ್ಯ

ನವದೆಹಲಿ (ಪಿಟಿಐ): ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಆಂಧ್ರ ವಿರುದ್ಧ ಇದೇ 3ರಂದು ಮುಂದಿನ ಪಂದ್ಯ ಆಡಲಿರುವ ಮುಂಬೈ ತಂಡವನ್ನು ಸೇರಿಕೊಳ್ಳಲಿದ್ದಾರೆ. ಕುಟುಂಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸೂರ್ಯಕುಮಾರ್ ಎರಡು ವಾರಗಳ ಕಾಲ ಕ್ರಿಕೆಟ್‌ನಿಂದ ವಿರಾಮ ಪಡೆದಿದ್ದರು. ಶ್ರೇಯಸ್ ಅಯ್ಯರ್, ಮುಂಬೈ ತಂಡದ ನಾಯಕರಾಗಿದ್ದಾರೆ.

ಅಂಕ ಹಂಚಿಕೊಂಡ ಗುಕೇಶ್-ಲಿರೆನ್

ಸಿಂಗಪುರ (ಪಿಟಿಐ): ಕಪ್ಪು ಕಾಯಿಗಳೊಂದಿಗೆ ಆಡಿದ ಚಾಲೆಂಜರ್ ಗುಕೇಶ್ ದೊಮ್ಮರಾಜು, ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಆರನೇ ಪಂದ್ಯವನ್ನು ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಜೊತೆ ಭಾನುವಾರ ಡ್ರಾ ಮಾಡಿಕೊಂಡರು. ಇದು ಸತತ ಮೂರನೇ ಡ್ರಾ ಆಗಿದ್ದು, ಸದ್ಯ ಇಬ್ಬರೂ ತಲಾ ಮೂರು ಪಾಯಿಂಟ್ಸ್ ಹೊಂದಿದ್ದಾರೆ.

ಮೊದಲು 7.5 ಪಾಯಿಂಟ್ಸ್ ತಲುಪಿದವರು ಚಾಂಪಿಯನ್ ಪಟ್ಟಕ್ಕೇರಲಿದ್ದಾರೆ. ಇನ್ನೂ ಎಂಟು ಪಂದ್ಯಗಳು ಉಳಿದಿದ್ದು ಒಂದು ವೇಳೆ ಸ್ಕೋರ್ 7-7 ಸಮನಾದಲ್ಲಿ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳ ಮೂಲಕ ವಿಜೇತರನ್ನು ನಿರ್ಧರಿಸಲಾಗುತ್ತದೆ.

ಭಾನುವಾರ ಚಾಂಪಿಯನ್‌ಷಿಪ್‌ಗೆ ಎರಡನೇ ವಿಶ್ರಾಂತಿ ದಿನವಾಗಿದ್ದು, ಸೋಮವಾರ ಏಳನೇ ಪಂದ್ಯದೊಡನೆ ಸೆಣಸಾಟ ಮುಂದುವರಿಯಲಿದೆ.

32 ವರ್ಷ ವಯಸ್ಸಿನ ಲಿರೆನ್ ಮೊದಲ ಪಂದ್ಯವನ್ನು, 18 ವರ್ಷ ವಯಸ್ಸಿನ ಗುಕೇಶ್ ಮೂರನೇ ಪಂದ್ಯವನ್ನು ಗೆದ್ದುಕೊಂಡಿದ್ದರು. ಉಳಿದ ನಾಲ್ಕು (2, 4,5,6) ಪಂದ್ಯಗಳಲ್ಲಿ ಇಬ್ಬರೂ ಪಾಯಿಂಟ್ ಹಂಚಿಕೊಂಡಿದ್ದರೆ.ಆರನೇ ಪಂದ್ಯದಲ್ಲಿ 46 ನಡೆಗಳ ಬಳಿಕ ಇಬ್ಬರೂ 'ಡ್ರಾ'ಕ್ಕೆ ಒಲವು ತೋರಿದರು. 14 ಪಂದ್ಯಗಳ ಫೈನಲ್ ಈಗ ಅರ್ಧಹಾದಿಯತ್ತ ಕಾಲಿಟ್ಟಿದೆ. ಆಟಗಾರರು ಈ ಹಂತದಲ್ಲಿ ಯಾವ ತಂತ್ರಕ್ಕೆ ಹೋಗುತ್ತಾರೆ ಎಂಬುದನ್ನು ಕಾದುನೋಡಬೇಕಾಗಿದೆ.

ಬಿಎಫ್‌ಸಿಗೆ ಮತ್ತೊಂದು ಸೋಲು

ಭುವನೇಶ್ವರ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಒಡಿಶಾ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಭಾನುವಾರ 4-2 ಗೋಲುಗಳಿಂದ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಇಲ್ಲಿನ ಕಳಿಂಗಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಒಡಿಶಾ ಪರ ಡಿಯಾಗೊ ಮಾರಿಸಿಯೊ (45 + 3 ಮತ್ತು 60ನೇ ನಿಮಿಷ) ಎರಡು ಗೋಲು ಗಳಿಸಿದರು. ಜೆರ್ರಿ ಮಾವಿಹ್ ಮಿಂಗ್ತಂಗ (10ನೇ ನಿ), ಮೌರ್ತಡಾ ಫಾಲ್ (27ನೇ ನಿ) ತಲಾ ಒಂದು ಗೋಲು ತಂದಿತ್ತರು. ಬಿಎಫ್‌ಸಿ ಪರ ನಾಯಕ ಸುನಿಲ್ ಚೆಟ್ರಿ (52ನೇ ನಿ) ಮತ್ತು ಎಡ್ಗರ್ ಮೆಂಡೆಜ್ (88ನೇ ನಿ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಒಡಿಶಾ ತಂಡವು ಒಟ್ಟು 15 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಏರಿದೆ. ಬಿಎಫ್‌ಸಿ 20 ಅಂಕದೊಂದಿಗೆ ಎರಡನೇ ಸ್ಥಾನದಲ್ಲಿದೆ. ಬಿಎಫ್‌ಸಿಗೆ ಇದು ಟೂರ್ನಿಯಲ್ಲಿ ಎರಡನೇ ಸೋಲು. ಈ ಮೊದಲು ಗೋವಾ ವಿರುದ್ಧ ಸೋತಿತ್ತು.

ಪಿಎಂ ಇಲೆವೆನ್ ವಿರುದ್ಧ ಅಭ್ಯಾಸ ಪಂದ್ಯ: ಭಾರತಕ್ಕೆ ಜಯ

ಗಮನ ಸೆಳೆದ ಗಿಲ್, ಹರ್ಷಿತ್ ರಾಣಾ

ಕ್ಯಾನ್‌ಬೆರಾ (ಪಿಟಿಐ): ಶುಭಮನ್ ಗಿಲ್ (50, 62ಎ) ತಮ್ಮ ಹೆಬ್ಬೆರಳಿನ ಗಾಯದ ಬಗ್ಗೆ ಇದ್ದ ಸಂದೇಹಗಳನ್ನೆಲ್ಲಾ ದೂರ ಮಾಡಿ ಸೊಗಸಾದ ಅರ್ಧ ಶತಕ ಗಳಿಸಿದರು. ಎರಡನೇ ಟೆಸ್ಟ್‌ಗೆ ಪೂರ್ವಭಾವಿಯಾಗಿ ಭಾನುವಾರ ನಡೆದ ಪಿಂಕ್‌ಬಾಲ್ ಅಭ್ಯಾಸ ಪಂದ್ಯದಲ್ಲಿ ಭಾರತ ತಂಡ 6 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ಪ್ರೈಮ್ ಮಿನಿಸ್ಟರ್ಸ್ ಇಲೆವೆನ್ ತಂಡವನ್ನು ಸೋಲಿಸಿತು.

ಪಂದ್ಯದಲ್ಲಿ ವೇಗಿ ಹರ್ಷಿತ್ ರಾಣಾ (44ಕ್ಕೆ 4) ಗಮನ ಸೆಳೆದರು. ಎದುರಾಳಿ ತಂಡದ ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ನೀಡಿ ದೊಡ್ಡ ಮೊತ್ತ ಗಳಿಸದಂತೆ ಕಡಿವಾಣ ಹಾಕಿದರು.

ಎರಡು ದಿನಗಳ ಈ ಪಂದ್ಯದ ಮೊದಲ ದಿನ ಮಳೆಯಿಂದ ಆಟ ನಡೆದಿರಲಿಲ್ಲ. ಎರಡನೇ ದಿನ ತಲಾ 50 ಓವರುಗಳ ಪಂದ್ಯ ನಡೆಸಲು ನಿರ್ಧರಿಸಲಾಗಿತ್ತು. ಆದರೆ ಪಂದ್ಯ ಸ್ವಲ್ಪ ತಡವಾಗಿ 46 ಓವರುಗಳ ಪಂದ್ಯ ನಡೆಯಿತು. ನಾಯಕ ರೋಹಿತ್ ಶರ್ಮಾ ಈ ಪಂದ್ಯದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದು, ಶುಕ್ರವಾರ ಆರಂಭವಾಗುವ ಎರಡನೇ ಟೆಸ್ಟ್‌ನಲ್ಲಿ ತಮ್ಮ ಕ್ರಮಾಂಕದ ಬಗ್ಗೆ ಕುತೂಹಲ ಉಳಿಸಿಕೊಂಡಿದ್ದಾರೆ.

ಮೊದಲು ಆಡಿದ ಪಿಎಂ ಇಲೆವೆನ್ 43.2 ಓವರುಗಳಲ್ಲಿ 240 ರನ್ ಗಳಿಸಿತು. ಭಾರತ ಪೂರ್ಣ 46 ಓವರುಗಳನ್ನು ಆಡಿ 5 ವಿಕೆಟ್‌ಗೆ 257 ರನ್ ಗಳಿಸಿತು. ಆಸ್ಟ್ರೇಲಿಯಾ ಟೆಸ್ಟ್ ತಂಡದ ಕದ ತಟ್ಟುತ್ತಿರುವ ಆರಂಭ ಆಟಗಾರ ಸ್ಯಾಮ್ ಕೊನ್‌ಸ್ಟಾಸ್ ಅವರ ಶತಕ (107, 97 , 4x14, 6x1) ನೆರವಿಗೆ ಬರಲಿಲ್ಲ.

ಭಾರತ ಈ ಪಂದ್ಯಕ್ಕೆ ವಿರಾಟ್ ಕೊಹ್ಲಿ ಮತ್ತು ಜಸ್‌ಪ್ರೀತ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಿತು. ಮೊದಲ ಟೆಸ್ಟ್‌ಗೆ ವಿಶ್ರಾಂತಿ ಪಡೆದಿದ್ದ ಅಶ್ವಿನ್, ನೆಟ್ಸ್ ವೇಳೆ ಕೊಹ್ಲಿ ಅವರಿಗೆ ಬೌಲಿಂಗ್ ಮಾಡುತ್ತಿದ್ದುದು ಗಮನ ಸೆಳೆಯಿತು. ಆಡಿಲೇಡ್‌ನಲ್ಲಿ 2020-21ರಲ್ಲಿ ನಡೆದ ಪಿಂಕ್‌ಬಾಲ್ ಟೆಸ್ಟ್‌ನಲ್ಲಿ ಅಶ್ವಿನ್ ನಾಲ್ಕು ವಿಕೆಟ್‌ಗಳನ್ನು ಪಡೆದಿದ್ದರು.

ಈ ಪಂದ್ಯದಲ್ಲೂ ಯಶಸ್ವಿ ಜೈಸ್ವಾಲ್- ಕೆ.ಎಲ್.ರಾಹುಲ್ ಜೋಡಿ ಇನಿಂಗ್ಸ್ ಆರಂಭಿಸಿತು. ರೋಹಿತ್ (3) ನಾಲ್ಕನೇ ಕ್ರಮಾಂಕದಲ್ಲಿ ಆಡಿ 11 ಎಸೆತಗಳನ್ನು ಎದುರಿಸಿ, ಸ್ಲಿಪ್‌ನಲ್ಲಿ ಕ್ಯಾಚಿತ್ತರು. ಆದರೆ ತಂಡಕ್ಕೆ ಮುದ ನೀಡಿದ ವಿಷಯ ಗಿಲ್ ಅವರ ಲಯ. ವೇಗಿಗಳನ್ನು, ಸ್ಪಿನ್ನರ್‌ಗಳನ್ನು ಒಂದೇ ರೀತಿ ದಂಡಿಸಿದರು.

ರಿಷಭ್ ಪಂತ್ ಆಡಲು ಇಳಿಯಲಿಲ್ಲ. ಜೈಸ್ವಾಲ್ (45, 59ಎ) ಮತ್ತು ನಿತೀಶ್ ಕುಮಾರ್ ರೆಡ್ಡಿ (42, 32ಎ) ಕೂಡ ಪ್ರೇಕ್ಷಕರನ್ನು ರಂಜಿಸಿದರು.

ಸ್ಕೋರುಗಳು: ಆಸ್ಟ್ರೇಲಿಯಾ ಪಿಎಂ ಇಲೆವೆನ್: 43.2 ಓವರುಗಳಲ್ಲಿ 240 (ಸ್ಯಾಮ್ ಕೊನ್‌ಸ್ಟಾಸ್ 107, ಹಾನ್ನೊ ಜಾಕೋಬ್ಸ್ 61, ಜಾಕ್ ಕ್ಲೇಟನ್ 40; ಹರ್ಷಿತ್ ರಾಣಾ 44ಕ್ಕೆ4); ಭಾರತ: 46 ಓವರುಗಳಲ್ಲಿ 5 ವಿಕೆಟ್‌ಗೆ 257 (ಶುಭಮನ್ ಗಿಲ್ ಔಟಾಗದೇ 50 (ನಿವೃತ್ತ), ನಿತೀಶ್ ಕುಮಾರ್ ರೆಡ್ಡಿ 42, ವಾಷಿಂಗ್ಟನ್ ಸುಂದರ್ 42; ಚಾರ್ಲಿ ಆ್ಯಂಡರ್ಸನ್ 30ಕ್ಕೆ2). ಪಂದ್ಯದ ಆಟಗಾರ: ಸ್ಯಾಮ್ ಕೊನ್‌ಸ್ಟಾಸ್.



ಶುಭಮನ್ ಗಿಲ್ —ಎಎಫ್‌ಪಿ ಚಿತ್ರ

ಕೊರಿಯಾ ವಿರುದ್ಧ ಭಾರತಕ್ಕೆ ಜಯ

ಮಸ್ಕತ್ (ಪಿಟಿಐ): ಭಾರತ ಪುರುಷರ ಹಾಕಿ ತಂಡ ಜೂನಿಯರ್ ಏಷ್ಯಾ ಕಪ್ ಟೂರ್ನಿಯಲ್ಲಿ ದಕ್ಷಿಣ ಕೊರಿಯಾ ತಂಡವನ್ನು 8-1 ಗೋಲುಗಳಿಂದ ಮಣಿಸಿತು. ಈ ಗೆಲುವಿನೊಂದಿಗೆ ಭಾರತ ಎ ಗುಂಪಿನಲ್ಲಿ ಅಗ್ರಸ್ಥಾನದೊಡನೆ ಲೀಗ್ ವ್ಯವಹಾರ ಮುಗಿಸಿತು. ಮಂಗಳವಾರ ಸೆಮಿಫೈನಲ್‌ನಲ್ಲಿ ಮಲೇಷ್ಯಾವನ್ನು ಎದುರಿಸಲಿದೆ.

ಪ್ರೊ ಕಬಡ್ಡಿ: ದಬಾಂಗ್‌ಗೆ ಗೆಲುವು

ನೊಯ್ಡಾ: ದಬಾಂಗ್ ಡೆಲ್ಲಿ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಭಾನುವಾರ 32-21ರಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು.

ಈ ಗೆಲುವಿನೊಂದಿಗೆ ಡೆಲ್ಲಿ ತಂಡವು 48 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಏರಿತು. ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 38-35ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿ, ಎರಡನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ಸೋಮವಾರ ವಿರಾಮವಾಗಿದ್ದು, ಲೀಗ್‌ನ ಮೂರನೇ ಚರಣದ ಪಂದ್ಯಗಳು ಮಂಗಳವಾರದಿಂದ ಪುಣೆಯಲ್ಲಿ ನಡೆಯಲಿವೆ.

ಸರ್ಕಾರಿ ಶಾಲಾ ಮಕ್ಕಳ ಚೆಸ್: ತಿಲಕ್‌ಗೆ ಅಗ್ರಸ್ಥಾನ

ಬೆಂಗಳೂರು: ಟಿ.ದಾಸರಹಳ್ಳಿ ಸರ್ಕಾರಿ ಶಾಲೆಯ ತಿಲಕ್ ಬಿ.ಎಚ್, ಸರ್ಕಾರಿ ಶಾಲೆಗಳ ಪ್ರತಿಭಾನ್ವಿತ ಚೆಸ್ ಆಟಗಾರರಿಗಾಗಿ ನಡೆದ ಅಂತಿಮ ಆಯ್ಕೆ ಟ್ರಯಲ್ಸ್‌ನಲ್ಲಿ ಅಗ್ರಸ್ಥಾನ ಪಡೆದರು. ಒಂಬತ್ತನೇ ತರಗತಿಯ ತಿಲಕ್ ಐದು ಸುತ್ತುಗಳಿಂದ ಐದು ಪಾಯಿಂಟ್ಸ್ ಸಂಗ್ರಹಿಸಿದರು.

ನೃಪತುಂಗ ರಸ್ತೆಯ ವೈಎಂಸಿಎ ಸಭಾಂಗಣದಲ್ಲಿ ಈ ಆಯ್ಕೆ ಟ್ರಯಲ್ಸ್ ನಡೆಯಿತು. ಸರ್ಕಾರಿ ಶಾಲಾ ಮಕ್ಕಳ ಚೆಸ್ ಪ್ರತಿಭೆಗೆ ವೇದಿಕೆ ಕಲ್ಪಿಸಲು ವಿಲಿಯಮ್ ಡಿ.ಪಿಚ್ಚಮುತ್ತು ಇನ್‌ಕ್ಲೂಸಿವ್ ಚೆಸ್, ಎರಿನ್ ಫೌಂಡೇಷನ್ ಸಹಯೋಗದಲ್ಲಿ ಈ ಆಯ್ಕೆ ಟ್ರಯಲ್ಸ್ ನಡೆಸಿ ಆಯ್ಕೆಯಾದ 27 ಮಂದಿಗೆ ಅಂತಿಮ ಟ್ರಯಲ್ಸ್ ಏರ್ಪಡಿಸಿತ್ತು. ಇದರಲ್ಲಿ 23 ಮಂದಿ ಹಾಜರಾಗಿದ್ದರು.

ಕೃಷ್ಣಾನಂದನಗರದ ಕರ್ನಾಟಕ ಪಬ್ಲಿಕ್ ಶಾಲೆಯ ಮಕ್ಕಳು ಅಗ್ರ ನಾಲ್ಕರಲ್ಲಿ ಎರಡು ಸ್ಥಾನಗಳನ್ನು ಪಡೆದರು. ಮನೋಜ್ ಎ ಮತ್ತು ಗಣೇಶ್ ಎನ್. ತಲಾ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ಕೊಡಿಗೆಹಳ್ಳಿಯ ಗೌತಮ್ ಕುಮಾರ್ ಎಂ.ಎಸ್. (4 ಅಂಕ) ನಾಲ್ಕನೇ ಸ್ಥಾನ ಗಳಿಸಿದರು. ಮಲ್ಲೇಶ್ವರ 18ನೇ ಕ್ರಾಸ್ ಸರ್ಕಾರಿ ಶಾಲೆಯ ಮಿಥುನ್ (3.5 ಅಂಕ) ಐದನೇ ಸ್ಥಾನ ಪಡೆದರು. ಇವರಿಗೆ ಟ್ರೋಫಿಗಳನ್ನು ನೀಡಲಾಯಿತು.

ಮೇಲಿನ ಐವರ ಜೊತೆಗೆ ಆರರಿಂದ 11ರವರೆಗಿನ ಸ್ಥಾನಗಳನ್ನು ಪಡೆದ ಕುಂದನ್ (ಹೆಬ್ಬಗೋಡಿ), ಪ್ರೀತಮ್ ಕುಮಾರ್ (ಮಡಿವಾಳ), ಆಕಾಶ್ ಎನ್. (ಅಗರ), ಮರಿಯಾ ಜೋವಿಟಾ (ಸಾರಕ್ಕಿ), ಜೀವನ್ ಎಂ. (ಮಾಕಳಿ), ವಾಣಿ ಚಿನ್ಮಯಿ (ಗೋವಿಂದರಾಜನಗರ) ಅವರಿಗೂ ತರಬೇತಿ ನೀಡಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.



ತಿಲಕ್ ಬಿ.ಎಚ್

ಕೆಒಎ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

'ಕ್ರೀಡಾಪಟುಗಳಿಗೆ ಹಾಜರಾತಿ, ಕೃಪಾಂಕ ಪರಿಶೀಲನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ತರಬೇತಿಯಲ್ಲಿ ತೊಡಗಿರುವ ರಾಜ್ಯದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಹಾಜರಾತಿ ಹಾಗೂ 10 ಕೃಪಾಂಕ ನೀಡಬೇಕೆಂಬ ಬೇಡಿಕೆಯ ಬಗ್ಗೆ ಪರಿಶೀಲಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಒಲಿಂಪಿಕ್ ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಕ್ರೀಡಾ ಕ್ಷೇತ್ರದ ಸಾಧಕರಿಗೆ 'ಕೆಒಎ ಪ್ರಶಸ್ತಿ' ಪ್ರದಾನ ಮಾಡಿದರು. ಇದಕ್ಕೂ ಮೊದಲು ಸಂಸ್ಥೆಯ ಅಧ್ಯಕ್ಷ ಕೆ. ಗೋವಿಂದರಾಜ್ ಅವರು ಕ್ರೀಡಾ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಹಾಜರಾತಿ ಹಾಗೂ ಕೃಪಾಂಕ ಒದಗಿಸಬೇಕೆಂದು ಮನವಿ ಮಾಡಿಕೊಂಡರು. ಅದಕ್ಕೆ ಸ್ಪಂದಿಸಿದ ಸಿದ್ದರಾಮಯ್ಯ, 'ಕ್ರೀಡಾ ತರಬೇತಿಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಹಾಜರಾತಿ ಹಾಗೂ ಕೃಪಾಂಕ ನೀಡಬೇಕೆನ್ನುವುದರಲ್ಲಿ ಸಕಾರಣವಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಲಿದೆ' ಎಂದು ಭರವಸೆ ನೀಡಿದರು.

'ರಾಜ್ಯದ ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯ ಹಾಗೂ ನೆರವನ್ನು ಸರ್ಕಾರ ನೀಡಲಿದೆ. ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ ರಾಜ್ಯದ ಕ್ರೀಡಾಪಟುಗಳಿಗೆ ₹ 6 ಕೋಟಿ, ಬೆಳ್ಳಿ ಪದಕ ಪಡೆದವರಿಗೆ ₹ 4 ಕೋಟಿ ಹಾಗೂ ಕಂಚು ಪದಕ ಪಡೆದಲ್ಲಿ ₹ 3 ಕೋಟಿ ನಗದು ಬಹುಮಾನ ನೀಡಲಾಗುತ್ತದೆ. ಆದರೆ, ರಾಜ್ಯದ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿ, ಈ ಬಹುಮಾನ ಪಡೆಯುವಲ್ಲಿ ಯಶಸ್ವಿಯಾಗುತ್ತಿಲ್ಲ. ಮುಂದಿನ ದಿನಗಳಲ್ಲಾದರೂ ರಾಜ್ಯದ ಕ್ರೀಡಾಪಟುಗಳು ಒಲಿಂಪಿಕ್ಸ್ ಪದಕ ಜಯಿಸಿ, ರಾಷ್ಟ್ರಕ್ಕೆ ಕೀರ್ತಿ ತರಬೇಕು' ಎಂದರು.

ಗೃಹ ಸಚಿವ ಜಿ. ಪರಮೇಶ್ವರ, 'ತುಮಕೂರಿನಲ್ಲಿ ₹ 58 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಿದ್ದು, 800 ಕ್ರೀಡಾಪಟುಗಳಿಗೆ ತಂಗಲು ಸಹ ಅವಕಾಶ ಮಾಡಲಾಗಿದೆ' ಎಂದು ಹೇಳಿದರು.

ಕೆ. ಗೋವಿಂದರಾಜ್ ಮಾತನಾಡಿ, 'ಮಕ್ಕಳು ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರಿ ಹಾಗೂ ಖಾಸಗಿ ಶಾಲಾ-ಕಾಲೇಜುಗಳಲ್ಲಿ ಹಾಜರಾತಿ ಮತ್ತು ಕೃಪಾಂಕ ನೀಡಬೇಕಿದೆ. ಬಜೆಟ್‌ನಲ್ಲಿ ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಬೇಕು' ಎಂದು ಮನವಿ ಮಾಡಿದರು.

'ಕೆಒಎ ಪ್ರಶಸ್ತಿ' ಪುರಸ್ಕೃತರು: ಸಿಂಚಲ್ ಕಾವೇರಮ್ಮ ಟಿ.ಆರ್. (ಅಥ್ಲೆಟಿಕ್ಸ್), ಕೆ. ಸಾಯಿ ಪ್ರತೀಕ್ (ಬ್ಯಾಡ್ಮಿಂಟನ್), ಅಭಿಷೇಕ್ ಗೌಡ ಸಿ.ಆರ್. (ಬಾಸ್ಕೆಟ್ ಬಾಲ್), ಕೀರ್ತಿ ರಂಗಸ್ವಾಮಿ ಸಿ. (ಸೈಕ್ಲಿಂಗ್), ಸೆಜಲ್ ಗುಲಿಯಾ (ಫೆನ್ಸಿಂಗ್), ಅಂಕಿತ್ ಪಿ. (ಫುಟ್‌ಬಾಲ್), ಕೀರ್ತನಾ ಜಿ. (ಜಿಮ್ನಾಸ್ಟಿಕ್), ದಾದಾಪೀರ್ (ಕ್ಯಾನೊಯಿಂಗ್ ಮತ್ತು ಕಯಾಕಿಂಗ್), ಮೊಹಮ್ಮದ್ ರಾಹೀಲ್ ಮೌಸಿನ್ (ಹಾಕಿ), ಸುರಭಿ ಬಿ.ಆರ್. (ನೆಟ್‌ಬಾಲ್), ಯುಕ್ತಿ ರಾಜೇಂದ್ರ (ರೈಫಲ್ ಶೂಟಿಂಗ್), ಸುಹಿತಾ ಮಾರೂರಿ (ಲಾನ್ ಟೆನ್ನಿಸ್), ಅನೀಶ್ ಎಸ್. ಗೌಡ (ಸ್ವಿಮ್ಮಿಂಗ್), ಉಷಾ ಎಸ್.ಆರ್. (ವೇಟ್‌ಲಿಫ್ಟಿಂಗ್), ಛಾಯಾಚಿತ್ರಗ್ರಾಹಕ ವೀರಮಣಿ, ಕ್ರೀಡಾ ಔಷಧ ತಜ್ಞೆ ಡಾ. ಶಮಾ ಕಿತ್ತೂರ್, ಮೆಂಟರ್ ಚಂದ್ರಶೇಖರ ಜಿ.ಎ., ಮಾಜಿ ಹಾಕಿ ಕ್ರೀಡಾಪಟು ಅಲಿ ಅಲ್ಡ್ರಿನ್ ಅಲೆಕ್ಸಾಂಡರ್, ಮಾಜಿ ಅಥ್ಲೀಟ್ ಅನುರಾಧಾ ಎನ್., ಮಾಜಿ ತರಬೇತುದಾರ ದಿಲೀಪ್ ಕುಮಾರ್ ಒ.ಸಿ., ಮಾಜಿ ಬಾಸ್ಕೆಟ್ ಬಾಲ್ ಕ್ರೀಡಾಪಟು ಪಾರ್ಥಸಾರಥಿ ಹಾಗೂ ಬಿ.ಎನ್.ಎಸ್. ರೆಡ್ಡಿ ಅವರಿಗೆ 2024ನೇ ಸಾಲಿನ 'ಕೆಒಎ ಪ್ರಶಸ್ತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.



ಕಾರ್ಯಕ್ರಮದಲ್ಲಿ 'ಕೆಒಎ ಪ್ರಶಸ್ತಿ' ಪುರಸ್ಕೃತರೊಂದಿಗೆ (ಕುಳಿತವರು ಎಡದಿಂದ) ಕರ್ನಾಟಕ ಒಲಿಂಪಿಕ್ ಸಂಸ್ಥೆ ಮಹಾ ಕಾರ್ಯದರ್ಶಿ ಟಿ. ಅನಂತರಾಜು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್. ಚೇತನ್, ಕೆ. ಗೋವಿಂದರಾಜ್, ಜಿ. ಪರಮೇಶ್ವರ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಿ. ರಂದೀಪ್, ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಸಿ.ಪ್ರಭಾಕರ್, ಸಂಸ್ಥೆಯ ಖಜಾಂಚಿ ರಾಜೇಶ್ ಎನ್. ಜಗದಾಳೆ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ